# ಯುಗಶ್ರೀ

★ ಕೋಮು ಸೌಹಾರ್ದ

★ ಪಾಶ್ಚಾತ್ಯ ವಿಚಾರವಂತರು ಮತ್ತು ದೈವವಿಶ್ವಾಸ

★ ಕ್ರೈಸ್ತ ಮಿತ್ರರಿಗೊಂದು ಸುವಾರ್ತೆ

★ ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ

★ ಇಸ್ಲಾಮಿನಲ್ಲಿ ಪ್ರವಾದಿತ್ವ

ತ್ರೈಮಾಸಿಕ

ಎಪ್ರಿಲ್ 1984

ಬೆಲೆ: ರೂ. 1-00

ಓ ಭಕ್ತದಾಸರೇ, ನಿಮ್ಮ ದೇವನಿಗೆ ಭಯಪಡಿರಿ. ಇಹಲೋಕ ಜೀವನದಲ್ಲಿ ಸತ್ಕರ್ಮ ನಿರತರಿಗೆ ತಕ್ಕ ಪ್ರತಿಫಲವಿದೆ. ಅಲ್ಲಾಹನ ಭೂಮಿ ವಿಶಾಲವಾದುದು. ನಿಶ್ಚಯವಾಗಿಯೂ ದೃಢ ನಿಷ್ಠೆ ಪಾಲಿಸುವವರಿಗೆ ಅಮಿತವಾದ ಪ್ರತಿಫಲ ದೊರೆಯುವುದು

—ಪವಿತ್ರ ಖುರ್‌ಆನ್ (39 : 11)

# ಯುಗರಶ್ಮಿ ತ್ರೈಮಾಸಿಕ

10-23-1008, ಅನ್ಸಾರಿ ರೋಡ್, ಬಂದರ್, ಮಂಗಳೂರು-575 001.

ಬಿಡಿಪ್ರತಿ: ರೂ. 1-00

ವಾರ್ಷಿಕ ಚಂದಾ: ರೂ. 4-00

ಅಂಚೆ ಮೂಲಕ: ರೂ. 5-00

ವಿಷಯ ಸೂಚಿಕೆ: ಪುಟ


* ಕೋಮು ಸೌಹಾರ್ದ ... 1
* ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು ... 2
* ಪಾಶ್ಚಾತ್ಯ ವಿಚಾರವಂತರು ಮತ್ತು ದೈವ ವಿಶ್ವಾಸ ... 3
* ಅರಬಿಯರಿಗೋಸ್ಕರ ಪ್ರಾರ್ಥಿಸಿರಿ ... 7
* ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ-ಅಬಿಸೀನಿಯಕ್ಕೆ ವಲಸೆ ... 8
* ಕ್ರೈಸ್ತ ಮಿತ್ರರಿಗೊಂದು ಸುವಾರ್ತೆ ... 13
* ಇಸ್ಲಾಮಿನಲ್ಲಿ ಪ್ರವಾದಿತ್ವ-ಲಾ ನಬಿಯ್ಯ ಬಅದೀ ಅನ-ಆಖಿರುಲ್ ಅಂಬಿಯಾ ... 17
* ಅಹ್ಮದಿಯಾ ವಾರ್ತೆಗಳು ... 25
* ಚುಟುಕು-ಚೂರು ... 28


**Statement about Ownership and other particulars about the Newspaper YUGARASHMI Quaterly**

**FORM IV (See Rule 8)**

| | | |
|---|---|---|
| 1. | Place of publication | Mangalore |
| 2. | Periodicity of its publication | Quarterly |
| 3. | Printer's name | U. Ramesh Anchan |
| | Whether citizen of India? | Yes |
| | Address | Karavali Printers, Azizuddin Road Bunder. Mangalore-575 001. |
| 4 | Publisher's name | Muhammad Yusuf |
| | Whether citizen of India? | Yes |
| | Address | 10-23-1008, Ansari Road, Bunder. Mangalore-575 001. |
| 5 | Editor's name | Muhammad Yusuf |
| | Whether c tizen of India? | Yes |
| | Address | 10-23-1008, Ansari Road, Bunder, Mangalore-575 001. |
| 6, | Names and address of individuals who own the newspaper and partners or shareholders holding more than one percent of the capital. | Jamath Ahmadiya, 10-23-1008, Ansari Road, Bunder, Mangalore 575 001. |

I, Muhammad Yusuf hereby declare that the pariculars given above are rue to the best of my knowledge and belief.

Dated 1—3—1984 Sd/ **Muhammad Yusuf**

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ

ಸಂಪಾದಕ : ಮುಹಮ್ಮದ್ ಯೂಸುಫ್

| ಸಂಪುಟ: 9 | ಮಾರ್ಚ್-ಎಪ್ರಿಲ್ 1984 / ಅಮಾನ್-ಶಹಾದತ್ 1363 | ಸಂಚಿಕೆ: 3, 4 |
|---|---|---|


# ಕೋಮು ಸೌಹಾರ್ದ

ಸ್ನೇಹಿತರೇ, ಹಿಂದುಗಳೋ, ಮುಸ್ಲಿಮರೋ ಆದ ನಾವೆಲ್ಲರೂ ನೂರಾರು ವಿಶ್ವಾಸಾಭಿಪ್ರಾಯ ವೈಪರೀತ್ಯಗಳಿಂದ ಕೂಡಿದವರಾಗಿದ್ದರೂ ಈ ಪ್ರಪಂಚದ ಸೃಷ್ಟಿಕರ್ತನೂ ಪ್ರಭುವೂ ಆದ ದೇವನಲ್ಲಿ ವಿಶ್ವಾಸವಿಡುವ ವಿಷಯದಲ್ಲಿ ಒಂದಾಗುತ್ತೇವೆ, ಹಾಗೆಯೇ ನಾವೆಲ್ಲರೂ ಮನುಷ್ಯರೆಂಬ ಮಾತ್ರವಲ್ಲ, ಒಂದೇ ದೇಶದಲ್ಲಿ ವಾಸಿಸುವುದರಿಂದಲೂ ಪರಸ್ಪರ ನೆರೆಕರೆಯವರೆಂಬ ನೆಲೆಯಲ್ಲಿಯೂ ಸಹ ಸಾಮೂಹಿಕ ಅಭಿವೃದ್ಧಿಗಳಿಗಾಗಿ ಒಂದಾಗುತ್ತೇವೆ. ಆದುದರಿಂದ ನಾವು ಆತ್ಮೀಯತೆಯಿಂದಲೂ ನಿಷ್ಕಳಂಕತೆಯಿಂದಲೂ ಪರಸ್ಪರ ಮಿತ್ರರಂತೆ ವರ್ತಿಸಿ, ಮತ ಪರವೂ ಲೌಕಿಕವೂ ಆದ ಎಲ್ಲಾ ವೈಷಮ್ಯಗಳಲ್ಲಿ ಅನ್ಯೋನ್ಯ ಸಹಾನುಭೂತಿಯನ್ನು ಪ್ರಕಟಿಸಿ, ಒಂದೇ ಶರೀರದ ಅವಯವಗಳಂತೆ ಸಹಕರಿಸಬೇಕಾದುದು ನಮ್ಮ ಕರ್ತವ್ಯವಾಗಿದೆ.

*                    *                    *

ಐಕ್ಯ ಅಥವಾ ಸೌಹಾರ್ದ ಅತ್ಯಮೂಲ್ಯವಾಗಿದೆ. ಬೇರಾವ ರೀತಿಯಿಂದಲೂ ನಿವಾರಿಸಲು ಸಾಧ್ಯವಿಲ್ಲದ ವಿಪತ್ತುಗಳನ್ನೂ ಸಂಕಷ್ಟಗಳನ್ನೂ ಐಕ್ಯದಿಂದ ಡೂರೀಕರಿಸಲು ಸಾಧ್ಯವೆಂಬುದು ಸ್ಪಷ್ಟ. ಆದುದರಿಂದ ಐಕ್ಯದ ಅನುಗ್ರಹೀತ ಫಲಗಳಿಂದ ನಮ್ಮನ್ನು ನಾವೇ ದೂರ ಸರಿಸುವುದು ವಿವೇಕಯುತವಲ್ಲ. ಹಿಂದು ಮತ್ತು ಮುಸ್ಲಿಂ ಈ ರಾಷ್ಟ್ರದ ಎರಡು ಸಮುದಾಯಗಳಾಗಿವೆ. ಇವುಗಳಲ್ಲಿ ಯಾವುದಾದರೂ ಒಂದು ಸಮುದಾಯವು ಯಾವಾಗಲಾದರೂ ಒಂದಾಗಿ ಇನ್ನೊಂದು ಸಮುದಾಯವನ್ನು — ಹಿಂದುಗಳು ಒಟ್ಟುಗೂಡಿ ಮುಸ್ಲಿಮರನ್ನೋ ಅಥವಾ ಮುಸ್ಲಿಮರು ಒಟ್ಟು ಸೇರಿ ಹಿಂದುಗಳನ್ನೋ — ಈ ದೇಶದಿಂದ ಹೊರದಬ್ಬಲು ಆಲೋಚಿಸುವುದಾದರೆ. ಅದು ಅಸಂಭಾವ್ಯ ಹಾಗೂ ಭ್ರಮೆ ಮಾತ್ರ ಆಗಿದೆ. ಬದಲಾಗಿ ಈ ಎರಡೂ ಸಮುದಾಯಗಳನ್ನು ಒಟ್ಟುಗೂಡಿಸುವ ಬಂಧವು ಭೇದಿಸಲಾಗದಷ್ಟು ಶಕ್ತಿಯುತವಾಗಿದೆ. ಒಂದು ಸಮುದಾಯಕ್ಕೆ ಏನಾದರೊಂದು ವಿಪತ್ತು ಸಂಭಪಿಸಿದರೆ ಮತ್ತೊಂದು ಸಮುದಾಯಕ್ಕೆ ಸಹ ಅದರ ಬಾಧೆ ತಟ್ಟದಿರ

# ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

1. ದೈವ ಭಯವೇ ಜ್ಞಾನದ ಮೂಲ.

2. ನೀವು ಎಲ್ಲಿದ್ದರೂ ದೈವ ಸೇವೆಯ ಕುರಿತು ಪ್ರಜ್ಞೆಯುಳ್ಳವರಾಗಿರಿ. ನೀವು ಕೆಡುಕೇನಾದರೂ ಮಾಡಿದ್ದರೆ ಒಳಿತು ಅದನ್ನು ಹಿಂಬಾಲಿಸಲಿ; ಅದು ಕೆಡುಕನ್ನು ನೀಗಿಸಿಬಿಡುವುದು. ಜನರೊಡನೆ ಔದಾರ್ಯದಿಂದ ವರ್ತಿಸಿರಿ.

3. ನಿಮ್ಮ ಎಲ್ಲಾ ವಿಧ ಜ್ಞಾನಾರ್ಜನೆಯಲ್ಲೂ ದೈವರಕ್ಷೆಯನ್ನು ಯಾಚಿಸಿರಿ.

4. ಆಪತ್ತಿನಲ್ಲೂ ಅಭಿವೃದ್ಧಿಯಲ್ಲೂ ದೈವರಕ್ಷೆಯನ್ನು ಬೇಡಿರಿ.

5. ಲೌಕಿಕ ಸುಖಾಡಂಬರದ ಮೇಲಿನ ಅನಾಸಕ್ತಿ ಹೃದಯಕ್ಕೆ ಶಾಂತಿಯನ್ನೂ ದೇಹಕ್ಕೆ ಆನಂದವನ್ನೂ ನೀಡುತ್ತದೆ. ಅದರ ಮೇಲಿನ ಆಸಕ್ತಿ ಆತ್ಮವನ್ನೂ ಶರೀರವನ್ನೂ ಅಸ್ವಸ್ಥಗೊಳಿಸುತ್ತದೆ.

(ಸರ್ ಮುಹಮ್ಮದ್ ರುಫ್ರುಲ್ಲಾ ಖಾನ್ ಬರೆದ **Wisdom of the Holy Prophet** ಎಂಬ ಪುಸ್ತಕದಿಂದ ಆಯ್ದುದು)

---

ಲಿಕ್ಕಿಲ್ಲ. ಒಂದು ಸಮುದಾಯವು ಅಹಂಭಾವದಿಂದ ಮತ್ತೊಂದು ಸಮುದಾಯವನ್ನು ನಿಂದಿಸುವುದಾದರೆ ಅಥವಾ ಅವಹೇಳನವನ್ನುಂಟು ಮಾಡುವುದಾದರೆ ಆ ಸಮುದಾಯವು ಸಹ ಅದೇ ರೀತಿಯ ನಿಂದನೆಗೂ ಅವಹೇಳನಕ್ಕೂ ಗುರಿಯಾಗುವುದು. ಒಂದು ಸಮುದಾಯವು ಇನ್ನೊಂದು ಸಮುದಾಯದೊಡನೆ ಅನುಕಂಪವನ್ನು ತೋರಿಸದಿದ್ದರೆ ಅವರಿಗೆ ಇವರ ಅನುಕಂಪ ಲಭಿಸಲಾರದು. ಒಂದು ಸಮುದಾಯದ ಒಬ್ಬ ವ್ಯಕ್ತಿ ಇನ್ನೊಂದು ಸಮುದಾಯಕ್ಕೆ ನಾಶವನ್ನುಂಟು ಮಾಡಲು ನೋಡುವನಾದರೆ, ಅವನು ತಾನು ಕುಳಿತಿರುವ ವೃಕ್ಷಶಾಖೆಯನ್ನು ತನ್ನ ಕೈಯಿಂದಲೇ ಕಡಿಯುವವನಂತಾಗುವನು.

* * *

ಎಲೈ ಮುಸ್ಲಿಮರೇ, ನಿಮಗೂ ಹಿಂದುಗಳಿಗೂ ಮಧ್ಯೆ ಯಥಾರ್ಥ ಹಾಗೂ ಸುಸ್ಥಿರವಾದ ಸೌಹಾರ್ದಭಾವವನ್ನು ಸ್ಥಾಪಿಸುವುದು ಹೇಗೆ? ಉಭಯ ಪಕ್ಷದವರು ಸಹ ಪರಸ್ಪರ ಕಾಪಟ್ಯದಿಂದ ಕೂಡಿದ ಒಂದು ತಾತ್ಕಾಲಿಕ ಮೈತ್ರಿಯನ್ನುಂಟು ಮಾಡಬಹುದು. ಆದರೆ ಯಥಾರ್ಥ ಮೈತ್ರಿಯೆಂದು ಹೇಳಲಾಗುವ ಭಾವೈಕ್ಯ ಉಂಟಾಗುವುದು, ನೀವು ವೇದವನ್ನೂ ಋಷಿಗಳನ್ನೂ ಆತ್ಮಾರ್ಥತೆಯಿಂದ ಬಹುಮಾನಿಸುವುದರಿಂದಲೂ ಹಾಗೆಯೇ ಹಿಂದುಗಳು ಅವರ ಸಂಕುಚಿತ ಮನೋಭಾವಗಳನ್ನು ಉಪೇಕ್ಷಿಸಿ ನಮ್ಮ ಪ್ರವಾದಿಯಾದ ಮುಹಮ್ಮದ್ ಪೈಗಂಬರರ ಸತ್ಯತೆಯನ್ನು ಸಮ್ಮತಿಸುವುದರಿಂದಲೂ ಮಾತ್ರವಾಗಿದೆ. ನಿಮ್ಮ ಹಾಗೂ ಹಿಂದುಗಳ ಎಡೆಯಲ್ಲಿ ಯಥಾರ್ಥವಾದ ಐಕ್ಯ ಹಾಗೂ ಸೌಹಾರ್ದ ಉಂಟಾಗಲು ಇದು ಏಕ ಮಾತ್ರ ಮಾರ್ಗವೆಂದೂ ಹೃದಯ ರೋಗಗಳನ್ನು ಗುಣಪಡಿಸುವ ಒಂದು ರಸಾಯನವೆಂದೂ ತಿಳಿಯಿರಿ.

* * *

ಪ್ರಿಯ ಬಾಂಧವರೇ, ಮೈತ್ರಿಗೆ ತುಲ್ಯವಾದುದು ಬೇರೊಂದಿಲ್ಲ ಬನ್ನಿರಿ, ನಾವು ಎರಡು ಪಕ್ಷದವರೂ ಉಭಯ ಸಮ್ಮತದಿಂದ ಒಂದಾಗೋಣ; ಒಂದು ಜನಾಂಗವಾಗೋಣ. ಪರಸ್ಪರ ಪ್ರವಾದಿಗಳನ್ನೂ ಮಹಾಪುರುಷರನ್ನೂ ಮತ ಗ್ರಂಥಗಳನ್ನೂ ಆಕ್ಷೇಪಿಸುವ ಕಾರಣದಿಂದ ಎಷ್ಟು ಛಿದ್ರತೆಯೂ ಗೊಂದಲವೂ ಉಂಟಾಗುವುದೆಂದೂ ದೇಶಕ್ಕೆ ಎಷ್ಟು ನಷ್ಟವಾಗುವುದೆಂದೂ ನೀವು ಕಾಣುತ್ತಿದ್ದೀರಷ್ಟೇ. ಬನ್ನಿರಿ, ಇನ್ನು ಅನ್ಯೋನ್ಯ ಮತ ಸಹಿಷ್ಣುತೆಯ ಅನುಗ್ರಹ ಫಲಗಳನ್ನು ಒಮ್ಮೆ ಪರೀಕ್ಷಿಸಿರಿ. ಇದು ಪರಸ್ಪರ ಸಂಧಾನವನ್ನುಂಟು ಮಾಡಲೂ ಮೈತ್ರಿ ಭಾವವನ್ನು ಹೆಚ್ಚಿಸಲೂ ಉತ್ತಮ ಮಾರ್ಗವಾಗಿದೆ. ಇದಲ್ಲದೆ ಬೇರೆ ಯಾವುದಾದರೂ ರೀತಿಯಲ್ಲಿ ಸೌಹಾರ್ದ ಸ್ಥಾಪಿಸಲು ಯತ್ನಿಸುವುದಾದರೆ, ಒಳಗಡೆ ದುರ್ಗಂಧವೂ ಕೀವೂ ತುಂಬಿರುವ ಕುರುವನ್ನು, ಅದರ ಬಾಹ್ಯವಾದ ಶುದ್ಧವನ್ನೂ ಹೊಳಪನ್ನೂ ಕಂಡು ಸಂತೋಷಪಟ್ಟು ಹಾಗೆಯೇ ಬಿಟ್ಟು ಬಿಡುವುದಕ್ಕೆ ಸಮಾನವಾಗಿದೆ. (ಪೈಗಾಮೆ ಸುಲ್ಹ್—1908).

—ಹಝ್ರತ್ ಅಹ್ಮದ್
ಅಹ್ಮದಿಯಾ ಸಂಘಟನೆಯ ಸ್ಥಾಪಕರು.

# ಪಾಶ್ಚಾತ್ಯ ವಿಚಾರವಂತರು ಮತ್ತು ದೈವವಿಶ್ವಾಸ

★ ಮಿರ್ಝಾ ಬಶೀರ್ ಅಹ್ಮದ್ ಎಂ. ಎ.

ಎಲ್ಲವನ್ನೂ ವಿಜ್ಞಾನ ಮತ್ತು ತತ್ವಜ್ಞಾನದ ಬೆಳಕಿನಲ್ಲಿ ವೀಕ್ಷಿಸುವ ಪಾಶ್ಚಾತ್ಯ ವಿಚಾರಶೀಲರ ಕುರಿತು ಎರಡು ಮಾತು ಹೇಳಲು ನಾನಿಲ್ಲಿ ಇಚ್ಛಿಸುತ್ತೇನೆ. ಈ ಕಾಲದಲ್ಲಿ ಪಾಶ್ಚಾತ್ಯರಲ್ಲಿ ದೈವಾಸ್ತಿತ್ವವನ್ನು ಅಲ್ಲಗಳೆಯುವವರು ಬಹ್ವಂಶ ವಿಜ್ಞಾನ ಮತ್ತು ನವೀನ ತತ್ವಜ್ಞಾನದ ವೀಕ್ಷಣದಿಂದ ಆ ಅಭಿಪ್ರಾಯವನ್ನು ಹೊಂದಿದವರಾಗಿದ್ದಾರೆ. ಮೂಲ ವಸ್ತುಗಳಲ್ಲಿ ವಿವಿಧ ತರದಲ್ಲಿ ರೂಪಾಂತರ ಪಡೆಯುವ ಸಾಮರ್ಥ್ಯ ಸ್ವಾಭಾವಿಕವಾಗಿಯೇ ಕಂಡು ಬರುತ್ತದೆಯೆಂದೂ ಕೆಲಕಾಲ ಕೆಳಗಿನ ಹಂತದಲ್ಲಿದ್ದರೆ ನಂತರ ಮೇಲಿನ ಹಂತಕ್ಕೆ ಪರಿವರ್ತನೆಗೊಳ್ಳುವ ವಿಶಿಷ್ಟ ಗುಣ ಅವುಗಳಿಗೆ ಇದೆಯೆಂದೂ ಅವರು ಹೇಳುತ್ತಾರೆ. ಈ ಭೌತಿಕ ಲೋಕ ಪರಿವರ್ತನ ನಿಯಮಕ್ಕೆ ಗುರಿಯಾಗಿ ಹಲವು ಮಾರ್ಪಾಟುಗಳ ಪರಿಣಾಮವಾಗಿ ಇಂದಿನ ಸ್ಥಿತಿಯನ್ನು ಪಡೆದಿದೆಯೆಂದು ಅವರು ವಾದಿಸುತ್ತಾರೆ. ಉದಾಹರಣೆಗೆ, ಮನುಷ್ಯನು ಆರಂಭದಿಂದಲೇ ಈ ರೂಪದಲ್ಲಿರಲಿಲ್ಲವೆಂದೂ ವಿದೂರ ಭೂತಕಾಲದಲ್ಲಿ ಅವನು ಕೇವಲ ಕೆಳಮಟ್ಟದ ಒಂದು ವಸ್ತು ಆಗಿದ್ದನೆಂದೂ ಕಾಲ ಕ್ರಮೇಣ ಪರಿವರ್ತನಗೊಂಡು ಇಂದಿನ ರೂಪವನ್ನು ಪಡೆದಿರುವನೆಂದೂ ಅವರು ಹೇಳುತ್ತಾರೆ. ಜಗತ್ತಿನಲ್ಲಿರುವ ಇತರ ವಸ್ತುಗಳ ಸಂಬಂಧಿಸಿ ಸಹ, ಅವು ಆರಂಭದಶೆಯಲ್ಲಿ ಅತ್ಯಂತ ಕೀಳು ಮಟ್ಟದಲ್ಲಿ ಇದ್ದುವೆಂದೂ ನಂತರ ಕ್ರಮ ಕ್ರಮವಾಗಿ ವಿಕಾಸಗೊಂಡುವೆಂದೂ ಅವರು ಹೇಳುತ್ತಾರೆ. ಅದೇ ಪ್ರಕಾರ ಇಂದು ಲೋಕದಲ್ಲಿ ವಿವಿಧ ರೂಪಗಳಲ್ಲೂ ವಿವಿಧ ವರ್ಗಗಳಲ್ಲೂ ವಿವಿಧ ಗುಣಗಳಲ್ಲೂ ಗೋಚರಿಸಲ್ಪಡುವ ಹೆಚ್ಚಿನ ವಸ್ತುಗಳಲ್ಲಿ ಒಂದು ಕಾಲದಲ್ಲಿ ಇಷ್ಟು ವ್ಯತ್ಯಾಸವಿರಲಿಲ್ಲವೆಂದೂ ಲೋಕವು ಅದರ ಆರಂಭ ಘಟ್ಟದಲ್ಲಿ ಕೇವಲ ಕೆಲವು ಪರಿಮಿತ ಸರಳ ವಸ್ತುಗಳನ್ನು ಮಾತ್ರ ಹೊಂದಿತ್ತೆಂದೂ ಅದು ಹಂತ ಹಂತವಾಗಿ ಪರಿವರ್ತನೆಗೊಂಡು ಇಂದಿನ ಈ ಅದ್ಭುತ ಪ್ರಪಂಚವಾಗಿ ಮಾರ್ಪಟಿತೆಂದೂ ಅವರು ವಾದಿಸುತ್ತಾರೆ. ಒಟ್ಟಾರೆ, ಈ ಪ್ರಪಂಚವನ್ನು ಮತ್ತು ಅದರ ಸ್ಪಷ್ಟವೂ ಬುದ್ಧಿಪೂರ್ಣವೂ ಆದ ವ್ಯವಸ್ಥೆಯನ್ನು ಹೊರಗಿನ ಒಬ್ಬ ಸೂತ್ರಧಾರಿಯ ಅಥವಾ ವಿಧಾತನ ಅಸ್ತಿತ್ವಕ್ಕೆ ಪುರಾವೆಯಾಗಿ ಬಗೆಯಲು ಸಾಧ್ಯವಿಲ್ಲವೆಂದೂ ಅವುಗಳೆಲ್ಲಾ ಪರಿವರ್ತನ ನಿಯಮಾನುಸಾರ ಸ್ವಾಭಾವಿಕವಾಗಿಯೇ ಉಂಟಾದವೆಂದೂ ಅವರು ಹೇಳುತ್ತಾರೆ.

ಪಾಶ್ಚಾತ್ಯ ವಿಚಾರವಂತರ ಇನ್ನೊಂದು ವಾದ ಈ ರೀತಿಯಾಗಿದೆ:

ಈ ಲೋಕ ಸದಾ ವಿಶಿಷ್ಟವೂ ನಿರ್ದಿಷ್ಟವೂ ಆದ ಒಂದು ನಿಯಮಾನುಸಾರ ಪ್ರವರ್ತಿಸುತ್ತಾ ಬಂದಿದೆ. ಈಗಲೂ ಜಗತ್ತಿನಲ್ಲಿರುವ ಪ್ರತಿಯೊಂದು ವಸ್ತುವೂ ವಿಶಿಷ್ಟವಾದೊಂದು ನಿಯಮಾನುಸಾರ ಪ್ರವರ್ತಿಸುತ್ತದೆ. ಎಲ್ಲಾ ಪರಿವರ್ತನೆಗಳ, ಚಲನ–ನಿಶ್ಚಲನಗಳ ಕಾರಣಗಳನ್ನು ವೈಜ್ಞಾನಿಕ ಸಂಶೋಧನೆಗಳಿಂದ ನಮಗೆ ಕಾಣಲು ಸಾಧ್ಯವಿದೆ. ನಾವು ದಿನೇ ದಿನೇ ನಿಸರ್ಗ ನಿಯಮ, ವಸ್ತುಗಳ ಗುಣ, ವಸ್ತುಗಳ ಪರಸ್ಪರ ಸಂಬಂಧ ಮುಂತಾದ ರಹಸ್ಯಗಳನ್ನು ಭೇದಿಸುತ್ತಿದ್ದೇವೆ. ವಿಜ್ಞಾನದ ವಿವಿಧ ವಿಭಾಗಗಳಾದ ಭೌತಶಾಸ್ತ್ರ, ರಸಾಯನ ಶಾಸ್ತ್ರ, ಚಲನ ಶಾಸ್ತ್ರ, ಮಾನವ ಶಾಸ್ತ್ರ, ಭೂವಿಜ್ಞಾನ, ಸಸ್ಯ ಶಾಸ್ತ್ರ, ಪ್ರಾಣಿ ಶಾಸ್ತ್ರ, ಅಂಗರಚನ ಶಾಸ್ತ್ರ, ಶರೀರ ವಿಜ್ಞಾನ, ಖಗೋಳ ಶಾಸ್ತ್ರ, ಮನಶ್ಶಾಸ್ತ್ರ ಮುಂತಾದವುಗಳಲ್ಲಿ ನಮಗುಂಟಾದ ಅಭಿವೃದ್ಧಿ ನಿಮಿತ್ತ ಮುಂಚೆ ಅಜ್ಞಾತವಾಗಿದ್ದ ಹಾಗೂ ನಮ್ಮ ದೃಷ್ಟಿಯಿಂದ ಮರೆಯಾಗಿದ್ದ ಅಸಂಖ್ಯಾತ ರಹಸ್ಯಗಳು

ಇಂದು ಬಹಿರಂಗ ಪಟ್ಟಿವೆ. ಅಜ್ಞಾನದಿಂದಲೂ ಪೂರ್ವಿಕರನ್ನು ಹಿಂಬಾಲಿಸಿದುದರಿಂದಲೂ ನಮಗುಂಟಾದ ಅನೇಕ ತಪ್ಪು ಕಲ್ಪನೆಗಳು ಹೊಸ ವಿಜ್ಞಾನದ ಬೆಳಕಿನಲ್ಲಿ ನೀಗುತ್ತಿವೆ. ಜೀವನ ಮತ್ತು ಲೋಕದ ನೆಲೆನಿಲ್ಲುವಿಕೆಯ ರಹಸ್ಯ ದಿನಂಪ್ರತಿ ಹೆಚ್ಚು ಹೆಚ್ಚಾಗಿ ಪ್ರಕಟಗೊಳ್ಳುತ್ತಿವೆ. ಮುಂಚೆ ಮನುಷ್ಯನು ಅವನ ಬುದ್ಧಿಗೂ ಕಲ್ಪನೆಗೂ ಅತೀತವೆಂದು ಗ್ರಹಿಸಿ ಯಾವುದೋ ಒಂದು ಅಜ್ಞಾತ ಶಕ್ತಿಗೆ ಸಂಬಂಧಿಸಿದ್ದೆಂದು ತಿಳಿದುಕೊಂಡಿದ್ದ ಸಂಗತಿಗಳು ಹೊಸ ವಿಜ್ಞಾನದ ಬೆಳಕಿನಲ್ಲಿ ಒಂದು ಸುವ್ಯವಸ್ಥಿತ ನಿಸರ್ಗ ನಿಯಮದ ಪರಿಣಾಮವೆಂದು ನಮಗೆ ಈಗ ಸಮರ್ಥಿಸಲು ಸಾಧ್ಯವಿದೆ. ಆದ್ದರಿಂದ ಪ್ರಪಂಚವೆಂಬ ಈ ಕಾರ್ಯಾಗಾರಕ್ಕೆ ಯಾರೂ ಕಂಡರಿಯದ ಯಾರೂ ಅನುಭವಿಸದ ಯಾವುದೋ ದೈವದೊಡನೆ ಸಂಬಂಧವೇರ್ಪಡಿಸುವುದು ಹೆಡ್ಡತನವಾಗಿದೆ.

ಇವು ಪಾಶ್ಚಾತ್ಯ ಚಿಂತಕರು ದೈವಾಸ್ತಿತ್ವದ ವಿರುದ್ಧವಾಗಿ ಎತ್ತುವ ವಾದ ಮುಖಗಳಾಗಿವೆ. ಆದರೆ ಗಾಢವಾಗಿ ಆಲೋಚಿಸಿದರೆ ಈ ವಾದ ತೀರಾ ದುರ್ಬಲವೆಂದು ಮನಗಾಣಬಹುದು. ವಿಕಾಸವಾದದ ವಿಶದೀಕರಣ ಇಲ್ಲಿ ಈಗ ಅಗತ್ಯವಿಲ್ಲ. ಅದು ತಪ್ಪಾದರೂ ಸರಿಯಾದರೂ ಅಥವಾ ಕೆಲವಂಶ ತಪ್ಪು ಮತ್ತು ಕೆಲವಂಶ ಸರಿಯಾದರೂ ದೈವಾಸ್ತಿತ್ವಕ್ಕೆ ವಿರುದ್ಧವಾದ ಒಂದು ಪುರಾವೆಯಾಗಿ ಅದನ್ನು ಮುಂದಿರಿಸಲು ಸಾಧ್ಯವಿಲ್ಲ. ಏಕೆಂದರೆ ಆ ವಾದವು ಪ್ರಪಂಚದ ಹುಟ್ಟಿನ ಸಂಬಂಧಿಸಿ ಯಾವುದೇ ಬೆಳಕನ್ನು ನೀಡುವುದಿಲ್ಲ. ಲೋಕದಲ್ಲಿ ಇಂದು ಗೋಚರಿಸುವ ವಸ್ತುಗಳು ಮೊದಲಿನಿಂದಲೇ ಇದೇ ಸ್ಥಿತಿಯಲ್ಲಿ ಇರಲಿಲ್ಲವೆಂದೂ ಅವು ಕೀಳ್ಮಟ್ಟದಿಂದ ಅಭಿವೃದ್ಧಿ ಹೊಂದಿ ಇಂದಿನ ಸ್ಥಿತಿಯನ್ನು ಪಡೆದಿವೆಯೆಂದೂ ಇತ್ಯಾದಿಯಾಗಿದೆ ಅದರ ಪ್ರತಿಪಾದನೆ. ಆದರೆ ಕೀಳ್ಮಟ್ಟದಲ್ಲಿದ್ದ ಆ ವಸ್ತುಗಳು ಎಲ್ಲಿಂದ ಬಂದವು ಎಂಬುದಾಗಿದೆ ಪ್ರಶ್ನೆ. ಈ ಬಗ್ಗೆ ವೈಜ್ಞಾನಿಕವಾಗಿ ಸಮರ್ಪಕ ಉತ್ತರ ನೀಡಲು ವಿಕಾಸವಾದಿಗಳಿಗೆ ಸಾಧ್ಯವಾಗಲಿಲ್ಲ. ಲೋಕದ ಉಗಮದ ಕುರಿತು ಬೆಳಕು ಬೀರದಿರುವಷ್ಟರ ಕಾಲ ದೈವಾಸ್ತಿತ್ವ ನಿಷೇಧಕ್ಕೆ ಪುರಾವೆಯಾಗಿ ವಿಕಾಸವಾದವನ್ನು ಎತ್ತಿ ಹಿಡಿಯುವುದು ನಿರರ್ಥಕ. ಮನುಷ್ಯನು ಅಥವಾ ಲೋಕದಲ್ಲಿರುವ ಇತರ ವಸ್ತುಗಳು ಆರಂಭದಶೆಯಲ್ಲಿ ಯಾವುದೋ ಕೀಳ್ಮಟ್ಟದಲ್ಲಿ ಇದ್ದು, ಮೆಲ್ಲ ಮೆಲ್ಲನೆ ಅಭಿವೃದ್ಧಿಗೊಂಡು ಇಂದಿನ ಸ್ಥಿತಿಯನ್ನು ಹೊಂದಿದ್ದೆಂದು ಸಾಬೀತಾಗುವುದರಿಂದ ಮಾತ್ರ ಈ ಲೋಕಕ್ಕೆ ಒಬ್ಬ ಸೃಷ್ಟಿಕರ್ತನಿಲ್ಲವೆಂದು ಅನುಮಾನಿಸಲು ಸಾಧ್ಯವೇ? ಎಂದಿಗೂ ಇಲ್ಲ.

ಲೋಕವು ಆರಂಭದಶೆಯಲ್ಲಿ ಬಹಳ ಸರಳವಾಗಿತ್ತೆಂದೂ ನಂತರ ಪದಾರ್ಥಗಳ ಆಂತರಿಕ ವೈಶಿಷ್ಟ್ಯಗಳಿಂದಾಗಿ ಉನ್ನತವೂ ಪರಿಪೂರ್ಣವೂ ಆದ ರೂಪವನ್ನು ಪಡೆಯುತ್ತಾ ಬಂತೆಂದೂ ಸಾಬೀತಾದುದರಿಂದಾಗಿ, ಮೇಲೆ ಹೇಳಿದ ಪುರಾವೆ, ಎಂದರೆ ಪ್ರಪಂಚವು ವಿವಿಧ ತರದ ಅಸಂಖ್ಯಾಂತ ವಸ್ತುಗಳ ಗುಂಪು ಆಗಿದ್ದು ಅತ್ಯಂತ ಸೂಕ್ಷ್ಮವೂ ವಿವೇಕಯುತವೂ ಆದ ನಿಯಮಕ್ಕೆ ವಿಧೇಯವಾಗಿ ಪ್ರವರ್ತಿಸುತ್ತಿರುವುದರಿಂದ ಅದು ಹೊರಗಿನ ಒಬ್ಬ ಸೂತ್ರಧಾರನ ಅಧೀನದಲ್ಲಿದೆಯೆಂದು ಮನವರಿಕೆ ಮಾಡಿಕೊಡುತ್ತದೆಯೆಂಬ ಪುರಾವೆ, ನಿರ್ಬಲವಾಗುತ್ತದೆಂದು ಯಾರಾದರೂ ಹೇಳುವುದಾದರೆ ಅದು ಹೆಡ್ಡತನವಾಗಿದೆ. ಏಕೆಂದರೆ ಪ್ರಾರಂಭದಶೆಯಲ್ಲಿ ಅತ್ಯಂತ ಕೀಳ್ಮಟ್ಟದಲ್ಲಿದ್ದ ಆ ವಸ್ತುಗಳಲ್ಲಿ, ಅಭಿವೃದ್ಧಿ ಹೊಂದಿ ಅದ್ಭುತಕರವಾದೊಂದು ಪ್ರಪಂಚವಾಗಿ ರೂಪುಗೊಳ್ಳುವಂತಹ ವೈಶಿಷ್ಟ್ಯಗಳು ಕೂಡಿಕೊಂಡಿವೆಯೆಂಬುದೂ ಆ ಅಭಿವೃದ್ಧಿಯೊಂದಿಗೆಯೇ ಅತ್ಯಂತ ವಿವೇಕಯುತವಾದ ಒಂದು ನಿಯಮ ಸೇರಿ ಕೊಂಡಿದೆಯೆಂಬುದೂ ಅದ್ಭುತಗಳಲ್ಲಿ ದೊಡ್ಡದಾದೊಂದು ಅದ್ಭುತವಾಗಿದೆ. ಮಾತ್ರವಲ್ಲ, ಗಾಢವಾಗಿ ಆಲೋಚಿಸುವುದಾದರೆ, ಈ ಭೌತಿಕ ಲೋಕದ ಆರಂಭದಶೆಯದ್ದೆಂದು ವಿವರಿಸಲ್ಪಡುವ ಆ ಅವಸ್ಥೆ (ಅದು ಸರಿಯೋ ತಪ್ಪೋ ಎಂಬುದು ಬಿಡೋಣ) ಇಂದಿನ ಪ್ರಪಂಚಕ್ಕಿಂತ ಹೆಚ್ಚು ಅದ್ಭುತಕರವೂ ಮನುಷ್ಯ ಬುದ್ಧಿಯನ್ನು ಚಕಿತಗೊಳಿಸುವಂತಹದ್ದೂ ಎಂದು ಮನವರಿಕೆಯಾಗುತ್ತದೆ. ಏಕೆಂದರೆ ಆ ಆರಂಭಾವಸ್ಥೆ ಇಂದಿನ ಲೋಕದ ಬೀಜವೆಂಬುದು ಸ್ಪಷ್ಟವಷ್ಟೆ. ವೃಕ್ಷಕ್ಕಿಂತ ಅದರ ಬೀಜ ಹೆಚ್ಚು ಅದ್ಭುತಕರವೂ ನಿಗೂಢವೂ ಆಗಿದೆ. ಕಾರಣವೇನೆಂದರೆ, ಅದು ನೋಡಲು ಕಿರಿದೂ ಸರಳವೂ ಆಗಿದ್ದರೂ ನಂತರ ಒಂದು ವೃಕ್ಷವಾಗಿ ರೂಪುಗೊಳ್ಳುವ ಎಲ್ಲಾ ಶಕ್ತಿಯೂ ವೈಶಿಷ್ಟ್ಯವೂ ಅದರೊಳಗೆ ಅಡಕವಾಗಿರುತ್ತದೆ. ಒಟ್ಟಾರೆ, ಈ ಲೋಕ ಆರಂಭಾವಸ್ಥೆಯಲ್ಲಿ ಕೀಳ್ಮಟ್ಟದ್ದೂ ಸರಳವೂ ಆಗಿತ್ತೆಂಬುದು ಈ ಪ್ರಪಂಚವನ್ನು ಇನ್ನೂ ಹೆಚ್ಚು ಅದ್ಭುತಕರವೂ ನಿಗೂಢತಮವೂ ಎಂದು ಸಾಬೀತು ಮಾಡುವುದಲ್ಲದೆ

ಪ್ರಕೃತಿ ನಿರ್ಮಾಪಕನ ಅಸ್ತಿತ್ವಕ್ಕೆ ಹೆಚ್ಚಿನ ಪುರಾವೆ ನೀಡುತ್ತದೆ. ಹೇಗೆಂದರೆ, ಕಾಲ ಕ್ರಮೇಣ ಅತ್ಯಂತ ಮಹತ್ವವಾದ, ಅದ್ಭುತಕರವಾದ, ರಹಸ್ಯ ಗರ್ಭಿತವಾದ ಒಂದು ಲೋಕದ ರೂಪವನ್ನು ಪಡೆಯುವ ಸಾಮರ್ಥ್ಯವನ್ನು ಮೂಲ ವಸ್ತುವಿನ ಕೀಳ್ಮಟ್ಟದ ಆರಂಭದಶೆಯಲ್ಲೇ ಅವನದರಲ್ಲಿ ಅಡಕವಾಗಿರಿಸಿ, ಯಾವ ಪರಿಪೂರ್ಣವೂ ವಿವೇಕಯುತವೂ ಆದ ನಿಯಮಕ್ಕೆ ವಿಧೇಯವಾಗಿ ಲೋಕದಲ್ಲಿರುವ ಅಸಂಖ್ಯಾತ ಅದ್ಭುತ ವಸ್ತುಗಳು ಆಯಾಯ ವಲಯಗಳಲ್ಲಿ ಪ್ರವರ್ತಿಸುತ್ತಾ ಜನರನ್ನು ಚಕಿತಗೊಳಿಸುತ್ತಿದೆಯೋ ಆ ನಿಯಮವನ್ನು ಲೋಕದ ಬೆಳವಣಿಗೆಯೊಂದಿಯೇ ಅವನು ಉಂಟು ಮಾಡಿಕೊಡಿರುತ್ತಾನೆ. ಒಟ್ಟಿನಲ್ಲಿ, ವಿಕಾಸವಾದವನ್ನು ದೈವಾಸ್ತಿತ್ವ ನಿಷೇಧಕ್ಕೆ ಪುರಾವೆಯಾಗಿ ಹೇಳುವುದು ಅವಿವೇಕವಾಗಿದೆ. ವಾಸ್ತವದಲ್ಲಿ ಆ ವಾದ ದೇವನ ಶಕ್ತಿ ಮಹಾತ್ಮ್ಯೆಗಳನ್ನೂ ಅನುಪಮ ಸಾಮರ್ಥ್ಯಗಳನ್ನೂ ಇನ್ನೂ ಹೆಚ್ಚು ಸ್ಪಷ್ಟಪಡಿಸುತ್ತದೆ.

ಇನ್ನು ಎರಡನೆ ವಾದದ ಬಗ್ಗೆ ಪರ್ಯಾಲೋಚಿಸೋಣ. ಲೋಕದಲ್ಲಿರುವ ಎಲ್ಲಾ ವಸ್ತುಗಳೂ ಎಲ್ಲಾ ಮಾರ್ಪಾಟುಗಳೂ ಎಲ್ಲಾ ಚಲನವಲನಗಳೂ ಒಂದು ವಿಶಿಷ್ಟವಾದ ನಿಯಮಾನುಸಾರವಾಗಿದೆಯೆಂದೂ ನಾವೀಗ ಹೆಚ್ಚು ಹೆಚ್ಚಾಗಿ ಆ ಗೂಢ ಪ್ರಕೃತಿ ನಿಯಮದ ಕುರಿತು ತಿಳಿದುಕೊಳ್ಳುತ್ತಿದ್ದೇವೆಂದೂ ಪ್ರಪಂಚದಲ್ಲಿ ನಡೆಯುವ ಎಲ್ಲಾ ಘಟನೆಗಳೂ ಪ್ರಕೃತಿ ನಿಯಮಾನುಸಾರ ನಡೆಯುತ್ತವೆಂದು ಮತ್ತೂ ಮತ್ತೂ ಸ್ಪಷ್ಟವಾಗುತ್ತದೆಂದೂ ಒಟ್ಟಾರೆ ದೈವವೆಂಬುದೊಂದಿಲ್ಲ; ಎಲ್ಲವೂ ಆ ನಿಯಮವೆಂದು ಸಾಬೀತಾಗಿದೆ ಎಂದಾಗಿದೆ ಆ ವಾದದ ಸಾರ. ಆದರೆ ಇದು ಸಹ ಅತ್ಯಂತ ದುರ್ಬಲ ಮತ್ತು ಆಧಾರ ರಹಿತವಾದೊಂದು ವಾದವಾಗಿದೆ. ಲೋಕವು ಯಾವುದಾದರೂ ನಿಯಮಕ್ಕಾಗಲಿ ಕಾರಣ ಶೃಂಖಲೆಗಾಗಲಿ ವಿಧೇಯವಲ್ಲವೆಂದು ನಾವು ಎಂದೂ ಹೇಳಿಲ್ಲ ಯಾವುದೇ ನಿಯಮವಿಲ್ಲದೆಯೂ ಮಾಧ್ಯಮ ರಹಿತವಾಗಿಯೂ ದೈವದ ನೇರವಾದ ಪ್ರವರ್ತನೆಯಿಂದ ಎಲ್ಲಾ ನಡೆಯುತ್ತವೆಯೆಂದು ನಾವು ವಾದಿಸಿಯೂ ಇಲ್ಲ. ಪ್ರಪಂಚವೆಂಬ ಈ ಕಾರ್ಯಾಗಾರ ಅತ್ಯಂತ ವಿವೇಕಪೂರ್ಣವಾದ ನಿಯಮಕ್ಕೂ ಅತಿ ಸೂಕ್ಷ್ಮವಾದ ಕಾರಣಶೃಂಖಲೆಗೂ ವಿಧೇಯವಾಗಿ ಪ್ರವರ್ತಿಸುತ್ತಿದೆಯೆಂದು ನಾವು ಒಪ್ಪುತ್ತೇವೆ. ಪವಿತ್ರ ಖುರ್‌ಆನ್ ಸಹ ಹಾಗೆಯೇ ನಮಗೆ ಬೋಧಿಸುತ್ತದೆ. ಇದೇ ನಿಯಮವನ್ನು ದೈವಾಸ್ತಿತ್ವಕ್ಕೆ ಪುರಾವೆಯಾಗಿ ನಾವು ಮುಂದಿಟ್ಟಿರುವೆವು. ಆದ್ದರಿಂದ ಪ್ರಪಂಚದಲ್ಲಿರುವ ಪ್ರತಿಯೊಂದು ವಸ್ತು ವಿಶಿಷ್ಟ ನಿಯಮಾನುಸಾರ ಪ್ರವರ್ತಿಸುತ್ತದೆಯೆಂಬುದು ನಮ್ಮ ವಾದಕ್ಕೆ ಖಂಡನೆಯಾಗುವುದಿಲ್ಲ. ಈ ಪರಿಪೂರ್ಣವಾದ ನಿಯಮ ಎಲ್ಲಿಂದ ಬಂತು ಎಂಬುದಾಗಿದೆ ಸರಿಯಾದ ಪ್ರಶ್ನೆ. ಅದಕ್ಕೆ ತೃಪ್ತಿಕರವಾದ ಉತ್ತರ ಹೇಳಲು ಯಾವ ನಾಸ್ತಿಕನಿಗೂ ಇಂದಿನ ವರೆಗೆ ಸಾಧ್ಯವಾಗಿಲ್ಲ. ಈ ನಿಯಮ ವಸ್ತುಗಳಲ್ಲಿ ಸ್ವಾಭಾವಿಕವಾಗಿಯೇ ಇದೆಯೆಂದೂ ಒಂದು ನಿಯಮ ಇತರ ನಿಯಮಗಳ ಪರಿಣಾಮದಿಂದ ಉಂಟಾಯಿತೆಂದೂ ಈ ಶೃಂಖಲೆ ಹಾಗೆ ನಡೆದು ಬಂತೆಂದೂ ಇನ್ನೂ ಹಾಗೆಯೇ ಮುಂದುವರಿಯುವುದೆಂದೂ ಕೆಲವರು ಹೇಳುತ್ತಾರೆ. ಆದರೆ ಈ ಪ್ರಕೃತಿ ಸ್ವಭಾವ ಎಲ್ಲಿಂದ ಬಂತು ಎಂಬುದಾಗಿದೆ ಮತ್ತೂ ನಮಗೆ ಕೇಳಲಿಕ್ಕಿರುವುದು. ಕೆಲವು ಸಲ ಒಂದು ನಿಯಮ ಇತರ ನಿಯಮಗಳ ಪರಿಣಾಮದಿಂದ ಉಂಟಾಗುತ್ತದೆಂಬುದು ಸರಿ. ಆದರೆ ಈ ಕಾರ್ಯಕಾರಣಗಳ ಶೃಂಖಲೆಯನ್ನು ಎಷ್ಟು ಉದ್ದಕ್ಕೆ ಎಳೆದುಕೊಂಡು ಹೋದರೂ ಕೊನೆಗೆ ಅದಕ್ಕೊಂದು ಮೂಲವಿದೆಯೆಂದೂ ಅಲ್ಲಿಂದ ಇವೆಲ್ಲಾ ಹೊರಟಿವೆಯೆಂದೂ ಒಪ್ಪಬೇಕಾದೀತು. ಉದಾಹರಣೆಗೆ, ಭೂಮಿ ಸೂರ್ಯನನ್ನು ಸುತ್ತುತ್ತಿದೆ ಎಂಬುದು ಒಂದು ಪ್ರಕೃತಿ ನಿಯಮವೆಂದೂ ಆ ನಿಯಮ ಇನ್ನೊಂದು ಪ್ರಕೃತಿ ನಿಯಮದ ಪರಿಣಾಮವೆಂದೂ ವಿಜ್ಞಾನಿಗಳು ಹೇಳುತ್ತಾರೆ. ಎಂದರೆ ಒಂದು ವಸ್ತುವಿನ ವಿವಿಧ ಭಾಗಗಳಿಂದ ಎರಡು ಅಥವಾ ಹೆಚ್ಚು ಬಲಗಳು ಆಕರ್ಷಿಸುವಾಗ ಆ ವಸ್ತುವಿಗೆ ಹೊಸತಾದೊಂದು ಬಲ ಬಂದು ಅದು ಇನ್ನೊಂದು ಕಡೆ ಚಲಿಸಲು ತೊಡಗುತ್ತದೆ. ಇಂಗ್ಲಿಷಿನಲ್ಲಿ ಇದನ್ನು Resultant (ಪ್ರತಿರೋಧ ಬಲಗಳ ಸಂಘಟಿತ ಫಲ) ಎಂದು ಹೇಳುತ್ತಾರೆ. ಭೂಮಿಯು ಸಹ ವಿವಿಧ ಭಾಗಗಳಿಂದ ಆಕರ್ಷಿಸಲ್ಪಡುತ್ತದೆ. ಅದರ ಫಲವಾಗಿ ಭೂಮಿ ಸೂರ್ಯನನ್ನು ಸುತ್ತಲು ತೊಡಗಿತು. ಈ ವಾದವನ್ನು ತಾತ್ವಿಕವಾಗಿ ನಾವು ಒಪ್ಪುತ್ತೇವೆ. ಆದರೆ ಆಕರ್ಷಿಸುವಂಥ ಬಲ ಎಲ್ಲಿಂದ ಬಂತೆಂಬ ನಮ್ಮ ಪ್ರಶ್ನೆ ಇನ್ನೂ ಬಾಕಿಯುಳಿಯುತ್ತದೆ. ಈ ಬಲ ಇಂತಿಂತಹ ಕಾರಣದಿಂದ ಉಂಟಾಯಿತು ಎಂದು ಹೇಳುವುದಾದರೆ ಆ ಕಾರಣ ಹೇಗುಂಟಾಯಿತು ಎಂಬ ಪ್ರಶ್ನೆ ಮತ್ತೂ ಉದ್ಭವಿಸುತ್ತದೆ. ಒಟ್ಟಾರೆ, ಇಂದಿನ ಈ ಪ್ರಪಂಚ

ಹಾಗೂ ಇಂದಿನ ವ್ಯವಸ್ಥೆಯು ಪ್ರಾರಂಭವಾಗಿ ಬೀಜವೊಂದಿದೆಯೆಂದೂ ಆ ಬೀಜದಲ್ಲಿ ಇಂದು ಲೋಕದಲ್ಲಿ ಗೋಚರಿಸಲ್ಪಡುವ ಎಲ್ಲಾ ಪರಿಪೂರ್ಣತೆ, ನಿಯಮ ಮತ್ತು ವೈಶಿಷ್ಟ್ಯಗಳ ಶಕ್ತಿ ಅಡಕವಾಗಿದೆಯೆಂದೂ ಸಮ್ಮತಿಸಬೇಕಾದೀತು. ಈ ವಿಧದಲ್ಲೂ ವಿವಾದವು ಮೇಲೆ ಉತ್ತರ ನೀಡಲಾದ ಅದೇ ಪಾಯ್ಂಟಿಗೆ ಬರುತ್ತದೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಈ ಮಧ್ಯಮ ನಿಯಮಗಳನ್ನೂ ಮಧ್ಯಮ ಪರಿಣಾಮಗಳನ್ನೂ ಎತ್ತಿ ಹಿಡಿದು ದೈವಾಸ್ತಿತ್ವವನ್ನು ನಿರಾಕರಿಸುವ ಮಾರ್ಗವನ್ನು ಹುಡುಕುವುದು ನಿರರ್ಥಕ. ಪಾಶ್ಚಾತ್ಯ ವಿಜ್ಞಾನಿಗಳ ಒಂದು ವಿಭಾಗ ಹೇಗೆ ಅದರಲ್ಲಿ ತೃಪ್ತಿಪಡುತ್ತಾರೆಂದು ಮನವರಿಕೆಯಾಗುವುದಿಲ್ಲ. ನಮ್ಮ ಬಗ್ಗೆ ಹೇಳುವುದಾದರೆ ವೈಜ್ಞಾನಿಕ ಸಂಶೋಧನೆ ಎಷ್ಟರ ಮಟ್ಟಿಗೆ ಅಭಿವೃದ್ಧಿ ಹೊಂದುತ್ತದೋ, ಪ್ರಕೃತಿ ನಿಯಮದ ರಹಸ್ಯ ಎಷ್ಟು ಹೆಚ್ಚಾಗಿ ಬಹಿರಂಗಗೊಳ್ಳುತ್ತದೋ ಅಷ್ಟೇ ಹೆಚ್ಚು ವಿವೇಕಯುತವಾದ ನಿಯಮಗಳಿಂದ ಕೂಡಿದ ಈ ಪ್ರಪಂಚ ಸೃಷ್ಟಿಕರ್ತನೂ ಒಡೆಯನೂ ಬುದ್ಧಿಶಾಲಿಯೂ ಸೂತ್ರಧಾರಿಯೂ ಆದ ಒಬ್ಬನ ನಿಯಂತ್ರಣದಲ್ಲಿ ಚಲಿಸುತ್ತದೆಂಬ ವಿಶ್ವಾಸ ಬುದ್ಧಿಪರವಾಗಿಯೇ ಹೆಚ್ಚಿನ ಪ್ರಕಾಶಸಹಿತ ದೃಢೀಕರಿಸಲ್ಪಡುತ್ತದೆ. ಒಂದು ಸಾಮಾನ್ಯ ವಸ್ತುವನ್ನು ನೋಡಿ ಅದು ಒಬ್ಬ ಕುಶಲಕರ್ಮಿಯ ಸೃಷ್ಟಿಯೆಂದು ನಾವು ಹೇಳುವುದಾದರೆ, ಅದಕ್ಕಿಂತ ಎಷ್ಟೋ ಅದ್ಭುತಕರವೂ ರಹಸ್ಯಗರ್ಭಿತವೂ ಆದ ಒಂದು ವಸ್ತುವನ್ನು ಕಂಡರೆ ಅದು ತನ್ನಷ್ಟಕ್ಕೇ ಉಂಟಾದುದಲ್ಲ, ಯಾವುದೋ ಒಂದು ಪರಾಶಕ್ತಿಯ ಶಕ್ತಿ ಪ್ರಕಟನೆ ಎಂಬ ನಂಬಿಕೆ ನಮಗೆ ಇನ್ನೂ ಹೆಚ್ಚು ಉಂಟಾಗಬೇಕಾಗಿದೆ. ಸ್ನೇಹಿತರೇ, ನೀವು ಚೆನ್ನಾಗಿ ತಿಳಿದುಕೊಳ್ಳಬೇಕು-ಈ ನವೀನ ವಿಜ್ಞಾನ ಮತ್ತು ಸಂಶೋಧನೆಗಳ ಫಲವಾಗಿ ಪ್ರಪಂಚ ನಿಯಮವು ಪೂರ್ವಕಾಲದಲ್ಲಿ ತಿಳಿಯಲ್ಪಟ್ಟದ್ದಕ್ಕಿಂತ ಅಧಿಕ ಸ್ಪಷ್ಟವೂ ವಿಪುಲವೂ ಆಗಿದೆಯೆಂದೂ ಪ್ರಪಂಚದಲ್ಲಿರುವ ವಿವಿಧ ವಸ್ತುಗಳು ಬೇರೆ ಬೇರೆ ನಿಯಮಗಳಿಗೆ ಮಾತ್ರವಲ್ಲದೆ ವಿವೇಕಯುತವಾದ ಒಂದು ಸಾರ್ವತ್ರಿಕ ನಿಯಮಕ್ಕೆ ವಿಧೇಯವಾಗಿ ಪ್ರವರ್ತಿಸುತ್ತಿವೆಯೆಂದೂ ಒಂದು ಇನ್ನೊಂದರ ಮೇಲೆ ಪ್ರಭಾವ ಬೀರುತ್ತವೆಯೆಂದೂ ಲೋಕದಲ್ಲಿರುವ ಯಾವ ವಸ್ತುವಾಗಲಿ ಅನಾವಶ್ಯಕ ಯಾ ಆಧಿಕ್ಯ ಅಲ್ಲವೆಂದೂ ಬದಲಾಗಿ ಪ್ರತಿಯೊಂದು ವಸ್ತು ಆಯಾಯ ವಲಯದಲ್ಲಿ ಆಯಾಯ ನಿಯಮಕ್ಕೆ ವಿಧೇಯವಾಗಿ ಆಯಾಯ ಕೆಲಸ ಮಾಡುತ್ತದೆಯೆಂದೂ ಸಾಬೀತಾಗಿದೆ. ಆದರೆ ಈ ಸಂಶೋಧನೆ—ಇದನ್ನು ಸಂಶೋಧನೆಯೆಂದು ಹೇಳುವುದಾದರೆ—ನಮ್ಮ ವಾದಕ್ಕೆ ವಿರುದ್ಧವಲ್ಲ; ಪರವಾಗಿದೆ. ಏಕೆಂದರೆ, ಅದರಿಂದ ದೈವಾಸ್ತಿತ್ವಕ್ಕೆ ವಿರುದ್ಧವಾಗಿ ಯಾವ ಪುರಾವೆಯನ್ನೂ ಉದ್ಧರಿಸಲು ಸಾಧ್ಯವಿಲ್ಲ. ತದ್ವಿರುದ್ಧವಾಗಿ, ದೈವಿಕ ಶಕ್ತಿಯ ಪ್ರಭಾವ ಹೆಚ್ಚು ಹೆಚ್ಚಾಗಿ ಸ್ಪಷ್ಟವಾಗುತ್ತದೆ.

ಆದರೆ ವಾಸ್ತವದಲ್ಲಿ ಈ ಸಂಶೋಧನೆ ಮೌಲಿಕವಾಗಿ ಹೊಸ ಸಂಶೋಧನೆಯಲ್ಲ. ಪವಿತ್ರ ಖುರ್‌ಆನ್ 13 ಶತಮಾನಗಳ ಮೊದಲೇ ಸಮಗ್ರವಾಗಿ ಈ ರಹಸ್ಯವನ್ನು ಬಹಿರಂಗ ಪಡಿಸಿದೆ. ಅದು ಹೀಗೆ ಹೇಳುತ್ತದೆ:

"ಜನರು ಅಲ್ಲಾಹನ ಸೃಷ್ಟಿಗಳನ್ನು ಕಾಣುವುದಿಲ್ಲವೇ ? ಪ್ರಪಂಚದಲ್ಲಿರುವ ಎಲ್ಲಾ ವಸ್ತುಗಳು ದೈವಾಜ್ಞೆಗೆ ವಿಧೇಯವಾಗಿದ್ದುಕೊಂಡು ಅವುಗಳ ಎಡ-ಬಲಗಳಲ್ಲಿ ಹೇಗೆ ಪ್ರಭಾವ ಬೀರುತ್ತಿವೆ ? ಆಕಾಶ ಮತ್ತು ಭೂಮಿಯಲ್ಲಿರುವ ಪ್ರತಿಯೊಂದು ವಸ್ತುವೂ ನಿರ್ದಿಷ್ಟ ನಿಯಮಕ್ಕೆ ವಿಧೇಯವಾಗಿ ಪ್ರವರ್ತಿಸುತ್ತಿದೆ."[1] "ನಾವು ಆಕಾಶ ಮತ್ತು ಭೂಮಿಯನ್ನು ಹಾಗೂ ಅವುಗಳ ಮಧ್ಯದಲ್ಲಿರುವ ಸಕಲ ವಸ್ತುಗಳನ್ನು ಯಾವ ಉದ್ದೇಶವಾಗಲಿ ಇಲ್ಲದೆ ನಿರರ್ಥಕವಾಗಿ ಸೃಷ್ಟಿಸಲಿಲ್ಲ."[2]

ಯುರೋಪ್ ಮತ್ತು ಅಮೇರಿಕದ ಅನ್ವೇಷಕರು ವಿಶದ ವಿವರ ತಿಳಿಯಲಿಕ್ಕಾಗಿ ತಮ್ಮ ಜೀವನವನ್ನು ವ್ಯಯಿಸುತ್ತಿರುವ ರಹಸ್ಯ ಇದಾಗಿದೆ. ಆದರೆ ಮತೀಯ ದೃಷ್ಟಿ ಕುರುಡಾದುದರಿಂದ ತಮ್ಮ ಅನ್ವೇಷಣೆ ಮತ ಮತ್ತು ದೈವಾಸ್ತಿತ್ವ ವಿರುದ್ಧವಾದ ಒಂದು ಆಕ್ರಮಣವೆಂದು ನಿರ್ಭಾಗ್ಯವಶಾತ್ ಅವರ ಪೈಕಿ ಕೆಲವರು ತಿಳಿದುಕೊಂಡಿದ್ದಾರೆ. ವಾಸ್ತವದಲ್ಲಿ, ಪ್ರಪಂಚ ವ್ಯವಸ್ಥೆ ಮತ್ತು ಪ್ರಕೃತಿ ನಿಯಮಗಳ ರಹಸ್ಯ ಎಷ್ಟರ ಮಟ್ಟಿಗೆ ಭೇದಿಸಲ್ಪಡುತ್ತದೋ ಅಷ್ಟರ ಮಟ್ಟಿಗೆ ಅದು ಬುದ್ಧಿಶಾಲಿಯೂ ಸರ್ವಜ್ಞನೂ ಸರ್ವಶಕ್ತನೂ ಸೂತ್ರಧಾರಿಯೂ ಆದ ಒಬ್ಬ ಸೃಷ್ಟಿಕರ್ತನ ಸಂಬಂಧಿಸಿ ಸ್ಪಷ್ಟ ಸೂಚನೆಗಳನ್ನು ನೀಡುತ್ತಿದೆ. ಆದ್ದರಿಂದಲೇ ಪಾಶ್ಚಾತ್ಯ ಚಿಂತನಶೀಲರಲ್ಲಿ ಅನೇಕ ಮಂದಿ ದೈವಾಸ್ತಿತ್ವದಲ್ಲಿ ವಿಶ್ವಾಸವುಳ್ಳವರಾಗಿದ್ದಾರೆ.

---

1. ಸೂರ ನಹಲ್ : 49, 50
2. ಸೂರ ಅಂಬಿಯಾ : 17

# ಅರಬಿಯರಿಗೋಸ್ಕರ ಪ್ರಾರ್ಥಿಸಿರಿ :

## ಅಹ್ಮದಿಯಾ ಖಲೀಫರ ಕರೆ

ಅಹ್ಮದಿಯಾ ಜಮಾಅತಿನ ಖಲೀಫರಾದ ಹಜ್ರತ್ ಮಿರ್ಜಾ ತಾಹಿರ್ ಅಹ್ಮದ್ ಸಾಹೇಬರು ಕಳೆದ ಜನವರಿ 6ರಂದು ರಬ್ವಾದ (ಪಾಕಿಸ್ತಾನ) ಮಸ್ಜಿದ್ ಅಖ್ಸಾದಲ್ಲಿ ನಡೆಸಿದ ಜುಮಾ ಖುತ್ಬಾದಲ್ಲಿ ಅರಬಿ ಲೋಕದ ದುರವಸ್ಥೆಗಳನ್ನು ವಿವರಿಸುತ್ತಾ ಅವರ ರಕ್ಷಣೆಗಾಗಿ ನೊಂದ ಹೃದಯದಿಂದ ಪ್ರಾರ್ಥಿಸಬೇಕೆಂದು ಉಪದೇಶಿಸಿದರು. ಮುಂದುವರಿಸುತ್ತಾ ಅವರು ಹೀಗೆ ಹೇಳಿದರು: ಒಮ್ಮೆಯಾಗಲಿ ಎರಡು ಸಲವಾಗಲಿ ಸಾಲದು, ಸದಾ ಅತ್ಯಂತ ಕಳಕಳಿಯಿಂದಲೂ ಹೃತ್ಪೂರ್ವಕವಾಗಿಯೂ ನೀವು ಅರಬಿಯರಿಗೋಸ್ಕರ ಪ್ರಾರ್ಥಿಸಬೇಕು. ಎಲ್ಲಾ ನಮಾಜುಗಳಲ್ಲೂ ಮುಖ್ಯವಾಗಿ ತಹಜ್ಜುದ್ ನಮಾಜುಗಳಲ್ಲಿ ನಿತ್ಯ ಪ್ರಾರ್ಥಿಸಿರಿ. ಅಲ್ಲಾಹನು ಅರಬಿ ಸಹೋದರರ ಮೇಲೆ ಕರುಣೆದೋರಿ, ಸಂಕಷ್ಟಗಳಿಂದ ಅವರನ್ನು ರಕ್ಷಿಸಿ ಅವರ ಅಪರಾಧಗಳನ್ನು ಕ್ಷಮಿಸಲಿ.

ಅರಬಿಯರ ಕುರಿತು ಹಜ್ರತ್ ರಸೂಲ್ ಕರೀಂ (ಸ) ಮತ್ತು ಹಜ್ರತ್ ಮಸೀಹ್ ಮೌಊದ್ (ಅ) ನುಡಿದ ವಚನಗಳನ್ನು ಉದ್ಧರಿಸುತ್ತಾ ಅರಬಿಯರನ್ನು ಸ್ನೇಹಿಸಬೇಕಾದ ಆವಶ್ಯಕತೆಯನ್ನು ಖಲೀಫರು ವಿವರಿಸಿದರು. ಅರಬಿಯರು ಗುಂಪು ಗುಂಪಾಗಿ ಅಲ್ಲಾಹನ ಜಮಾಅತಿನಲ್ಲಿ ಪ್ರವೇಶಿಸುವ ದಿನ ಬರಲಿದೆಯೆಂಬ ಹಜ್ರತ್ ಮಸೀಹ್ ಮೌಊದ್ (ಅ) ರವರ ಭವಿಷ್ಯನುಡಿಯನ್ನೂ ಶುಭ ವಾರ್ತೆಯನ್ನೂ ಉದ್ಧರಿಸಿ ಅವರು ಹೀಗೆ ಹೇಳಿದರು: "ಅತ್ಯಂತ ಕಳಕಳಿಯಿಂದ ನೀವು ಪ್ರಾರ್ಥಿಸಿರಿ; ಈ ಭವಿಷ್ಯನುಡಿಗಳನ್ನೆಲ್ಲಾ ಅಲ್ಲಾಹನು ಅತಿ ಬೇಗ ಈಡೇರಿಸಿಕೊಡಲಿ. ಆಮೀನ್." ●

---

( 6ನೇ ಪುಟದಿಂದ )

ಹೊಸ ಅನ್ವೇಷಣೆ ಅವರ ದೈವ ವಿಶ್ವಾಸಕ್ಕೆ ಏನೂ ತಡೆಯಾಗುವುದಿಲ್ಲ; ಮಾತ್ರವಲ್ಲ, ಅವರದನ್ನು ನಾಸ್ತಿಕತೆಗೆ ವಿರುದ್ಧವಾದ ಒಂದು ಆಯುಧವಾಗಿ ಉಪಯೋಗಿಸುತ್ತಲೂ ಇದ್ದಾರೆ. ಪ್ರಿಯ ಸ್ನೇಹಿತರೆ, ನೀವು ಈ ಹೊಸ ವಿಜ್ಞಾನದ ಕುರಿತು ದಿಗ್ಭ್ರಮೆಗೊಳ್ಳಬೇಡಿರಿ. ಅವೆಲ್ಲಾ ನಿಮಗೆ ಅನುಕೂಲಕರವಾಗಿವೆ. ಅದರ ಪರಿಣಾಮವಾಗಿ ನಿಮ್ಮ ದೇವನ ಬುದ್ಧಿಪೂರ್ಣವಾದ ಶಕ್ತಿಪ್ರಭಾವದ ಕಿರಣಗಳು ಇನ್ನೂ ಹೆಚ್ಚು ಸ್ಪಷ್ಟವಾಗಿಯೂ ದೃಢವಾಗಿಯೂ ಜನರ ದೃಷ್ಟಿಗೆ ಗೋಚರಿಸುತ್ತದೆ ಹಾಗೂ ಆಕಾಶ ಮತ್ತು ಭೂಮಿಯಲ್ಲಿರುವ ಸಕಲ ವಸ್ತುಗಳು ಪ್ರತ್ಯಕ್ಷವಾಗಿ ಯಾ ಪರೋಕ್ಷವಾಗಿ ಮನುಷ್ಯನ ಅವಶ್ಯಕ್ಕಾಗಿ ಸೃಷ್ಟಿಸಲ್ಪಟ್ಟಿವೆಯೆಂದು ಮನದಟ್ಟಾಗುತ್ತದೆ. ಅದರ ಕುರಿತು ಪವಿತ್ರ ಖುರ್‌ಆನ್ ಹದಿಮೂರು ಶತಮಾನಗಳ ಹಿಂದೆ ಹೀಗೆ ಹೇಳಿರುತ್ತದೆ :

"ಲೋಕದಲ್ಲಿರುವ ಎಲ್ಲಾ ವಸ್ತುಗಳು ನಿಮ್ಮ ಅವಶ್ಯಕ್ಕಾಗಿ ಸೃಷ್ಟಿಸಲ್ಪಟ್ಟಿವೆ" (2:30). "ಆಕಾಶ ಮತ್ತು ಭೂಮಿಯಲ್ಲಿರುವ ಸಕಲ ವಸ್ತುಗಳನ್ನೂ ಅಲ್ಲಾಹು ನಿಮಗೆ ಅಧೀನಪಡಿಸಿರುವನು– ನೀವು ಅವುಗಳ ರಹಸ್ಯವನ್ನರಿತು ಅವುಗಳಿಂದ ಪ್ರಯೋಜನ ಪಡೆಯಲಿಕ್ಕಾಗಿ." (45 : 14).

ಆದರೆ, ಅಕಟಾ! ಯಾವೆಲ್ಲಾ ವಸ್ತುಗಳನ್ನು ಮನುಷ್ಯನ ಮಾರ್ಗದರ್ಶನ ಮತ್ತು ಅಭಿವೃದ್ಧಿಗಾಗಿ ಅವನ ಒಡೆಯನಾದ ದೇವನು ಸೃಷ್ಟಿಸಿರುವನೋ ಆ ವಸ್ತುಗಳನ್ನು ಅವನು ತನ್ನ ಮಾರ್ಗಭ್ರಂಶಕ್ಕೂ ನಾಶಕ್ಕೂ ಹೇತು ಮಾಡಿದ್ದಾನೆ. "ಕುತಿಲಲ್ ಇನ್ಸಾನು ಮಾ ಅಕ್‌ಫರಹು" – "ಖಂಡಿತವಾಗಿಯೂ ಕೃತಘ್ನ ಮನುಷ್ಯನನ್ನು ನಾಶದತ್ತ ವಿನಾ ಬೇರೆಡೆಗೆ ಕೊಂಡೊಯ್ಯಲಾಗುವುದಿಲ್ಲ." ( ಸಶೇಷ )

[ "ಹಮಾರಾ ಖುದಾ"ದಿಂದ ಅನುವಾದಿತ ]

★

## ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ–5

# ಅಬಿಸೀನಿಯಕ್ಕೆ ವಲಸೆ

★ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್

ಇಸ್ಲಾಂ ಧರ್ಮವನ್ನು ಸ್ವೀಕರಿಸಿದವರ ಮೇಲೆ ಮಕ್ಕಾ ನಿವಾಸಿಗಳ ದೌರ್ಜನ್ಯವು ದಿನೇ ದಿನೇ ಉಗ್ರ ರೂಪವನ್ನು ತಾಳುತ್ತಿತ್ತು. ಅದು ಅತ್ಯಂತ ಘೋರವೂ ಅಸಹನೀಯವೂ ಆದ ಮಟ್ಟವನ್ನು ತಲಪಿದಾಗ, ಒಂದು ದಿನ ಹಝ್ರತ್ ಮುಹಮ್ಮದ್ ಪೈಗಂಬರರು ತನ್ನ ಅನುಯಾಯಿಗಳನ್ನು ಕರೆದು ಈ ರೀತಿ ಹೇಳಿದರು: "ಪಶ್ಚಿಮದ ಕಡೆ, ಸಮುದ್ರದಾಚೆ ಒಂದು ರಾಜ್ಯವಿದೆ. ಅಲ್ಲಿ ಎಲ್ಲರಿಗೂ ಮತ ಸ್ವಾತಂತ್ರ್ಯ ನೀಡಲಾಗುತ್ತಿದೆ. ಏಕ ದೇವನನ್ನು ಆರಾಧಿಸುವ ಕಾರಣಕ್ಕಾಗಿ ಅಲ್ಲಿ ಜನರನ್ನು ಪೀಡಿಸಲಾಗುವುದಿಲ್ಲ. ಮತ ಪರಿವರ್ತನೆಯ ಕಾರಣದಿಂದ ಅಲ್ಲಿ ಜನರನ್ನು ಕೊಲ್ಲುವುದಿಲ್ಲ. ಆ ರಾಜ್ಯವನ್ನು ಒಬ್ಬ ನೀತಿವಂತ ರಾಜನು ಆಳುತ್ತಿರುವನು. ಆದುದರೀದ ನೀವು ಹಿಜ್ರತ್* ಮಾಡಿ ಅಲ್ಲಿಗೆ ಹೋಗಿರಿ. ಬಹುಶಃ ಅಲ್ಲಿ ನಿಮಗೆ ನೆಮ್ಮದಿಯ ಮಾರ್ಗ ತೆರೆಯಲ್ಪಡಬಹುದು."

ಈ ನಿರ್ದೇಶದ ಮೇರೆಗೆ ಕೆಲವು ಮುಸ್ಲಿಂ ಪುರುಷರೂ ಸ್ತ್ರೀಯರೂ ಮಕ್ಕಳೂ ಅಬಿಸೀನಿಯಕ್ಕೆ ವಲಸೆ ಹೋಗಲು ತಯಾರಾದರು. ಆ ದೃಶ್ಯವು ಬಹಳ ಕರುಣಾಜನಕವಾಗಿತ್ತು. ಅಂದಿನ ಮಕ್ಕಾ ನಿವಾಸಿಗಳಿಗೆ ಆ ಪಟ್ಟಣವನ್ನು ತ್ಯಜಿಸಿ ಅನ್ಯ ಕಡೆ ಹೋಗಿ ನೆಲೆಸುವುದು ಒಂದು ಸಾಮಾನ್ಯ ಸಂಗತಿಯಾಗಿರಲಿಲ್ಲ. ಅವರು ತಮ್ಮನ್ನು 'ಕಅಬಾ' ದೇವ ಮಂದಿರದ ಪರಿಪಾಲಕರೆಂದು ಭಾವಿಸುತ್ತಿದ್ದರು. ಮಕ್ಕಾ ನಗರವನ್ನು ಪರಿತ್ಯಜಿಸುವುದೆಂದರೆ ಅವರಿಗೆ ಸಹನಾತೀತವಾಗಿತ್ತು. ಯಾರಿಗೆ ಜಗತ್ತಿನಲ್ಲಿ ಬೇರೆ ಯಾವ ಮಾರ್ಗವೂ ಉಳಿದಿಲ್ಲವೋ ಅಂತಹವರು ಮಾತ್ರ ಈ ಕೆಲಸ ಮಾಡಬಹುದಾಗಿತ್ತು. ಅದೂ ಅಲ್ಲದೆ, ಅವರು ಮಕ್ಕಾದಿಂದ ಗೌಪ್ಯವಾಗಿಯೇ ಹೊರಡಬೇಕಾಯಿತು. ಕಾರಣ, ತಮ್ಮ ನಿರ್ಗಮನವನ್ನು ವಿರೋಧಿಗಳು ಪತ್ತೆ ಹಚ್ಚಿದಲ್ಲಿ ಅಲ್ಲಿಂದ ಕಾಲ್ದೆಗೆಯಲೂ ಅವರು ಬಿಡಲಾರರೆಂದು ಅವರಿಗೆ ತಿಳಿದಿತ್ತು. ಹೀಗೆ ತಮ್ಮ ಹತ್ತಿರದ ಬಂಧುಗಳನ್ನೂ ಮಿತ್ರರನ್ನೂ ಕೊನೆಯದಾಗಿ ಒಮ್ಮೆ ಭೇಟಿಯಾಗಿ ವಿದಾಯ ಹೇಳಲು ಸಹ ಅವರಿಗೆ ಸಾಧ್ಯವಾಗಲಿಲ್ಲ. ಅವರ ಅವಸ್ಥೆಯು ಹೇಗಿತ್ತೆಂದರೆ, ಆ ಕಷ್ಟ ಪರಿಸ್ಥಿತಿಯನ್ನು ನೋಡುವವರಿಗೂ ಸಹ ತಡೆಯಲಾರದ ದುಃಖವುಂಟಾಗುತ್ತಿತ್ತು. ಮುಂದೆ ಇಸ್ಲಾಂ ಧರ್ಮದ ಎರಡನೆಯ ಖಲೀಫರಾಗಿ ನಿಯುಕ್ತರಾದ ಹಝ್ರತ್ ಉಮರ್, ಆಗ ಇನ್ನೂ ಇಸ್ಲಾಂ ಧರ್ಮವನ್ನು ಸ್ವೀಕರಿಸಿರಲಿಲ್ಲ. ಮುಸ್ಲಿಮರನ್ನು ವಿರೋಧಿಸುವುದರಲ್ಲಿ ಮತ್ತು ಕ್ರೂರವಾಗಿ ಹಿಂಸಿಸುವುದರಲ್ಲಿ ಅವರು ಅಗ್ರಗಣ್ಯರಾಗಿದ್ದರು. ಅಬಿಸೀನಿಯಕ್ಕೆ ಗುಪ್ತವಾಗಿ ವಲಸೆ ಹೋಗಲು ತಯಾರಾದ ಈ ತಂಡದ ಕೆಲವು ವ್ಯಕ್ತಿಗಳು ಅಕಸ್ಮಾತ್ತಾಗಿ ಅವರ ಕಣ್ಣಿಗೆ ಬಿದ್ದರು. ಉಮ್ಮ್ ಅಬ್ದುಲ್ಲ ಎಂಬ ಒಬ್ಬ ಮಹಿಳೆಯನ್ನು ಗಂಟುಮೂಟೆ ಕಟ್ಟಿ ಯಾತ್ರೆಗೆ ಅಣಿಯಾದಂತೆ ಕಂಡ ಉಮರ್, ಒಡನೆಯೇ ಈ ಜನರು ಮಕ್ಕಾ ಬಿಟ್ಟು ಎಲ್ಲಿಗೋ ಹೋಗಲು ನಿರ್ಧರಿಸಿದ್ದಾರೆಂದು ಊಹಿಸಿದರು. ಅವರು ಆಕೆಯೊಡನೆ: "ಉಮ್ಮ್ ಅಬ್ದುಲ್ಲ, ಇದೇನು ದೇಶತ್ಯಾಗದ ಲಕ್ಷಣಗಳು ಕಾಣುತ್ತಿವೆಯಲ್ಲಾ!" ಎಂದು ಕೇಳಿದರು. ಉಮ್ಮ್ ಅಬ್ದುಲ್ಲ ಈ ರೀತಿ ಉತ್ತರ ನೀಡಿದರು: "ಹೌದು, ಪರಮಾತ್ಮನಾಣೆಯಾಗಿ ನಾವು ಬೇರೆ ಯಾವುದಾದರೂ ದೇಶಕ್ಕೆ ಹೋಗಿ ನೆಲೆಸಲು ತೀರ್ಮಾನಿಸಿದ್ದೇವೆ. ಯಾಕೆಂದರೆ, ನೀವು ನಮಗೆ ಬಹಳಷ್ಟು ಕಷ್ಟಗಳನ್ನೂ ದುಃಖವನ್ನೂ ನೀಡಿದಿರಿ. ನಮ್ಮನ್ನು ಮನ ಬಂದರಂತೆ ಹಿಂಸಿಸಿದಿರಿ. ಅಲ್ಲಾಹನು ಪರಿಸ್ಥಿತಿಯನ್ನು ಬದಲಾಯಿಸಿ ನಮಗೆ ರಕ್ಷಣೆಯ ಮಾರ್ಗವನ್ನು ಉಂಟು ಮಾಡುವ ವರೆಗೂ ನಾವು ಈ ಊರಿಗೆ ಹಿಂದಿರುಗಲಾರೆವು." ಉಮ್ಮ್ ಅಬ್ದುಲ್ಲ ಹೇಳುತ್ತಾರೆ:

* ಹಿಜ್ರತ್ = ಮತ ಸಂರಕ್ಷಣೆಗಾಗಿ ಸ್ವದೇಶವನ್ನು ತ್ಯಜಿಸಿ ಬೇರೆಡೆಗೆ ಅಭಯಾರ್ಥಿಗಳಾಗಿ ಹೋಗಿ ನೆಲೆಸುವುದು

"ನನ್ನ ಈ ಮಾತುಗಳನ್ನು ಕೇಳಿದ ಉಮರ್, 'ಹಾಂ, ಪರಮಾತ್ಮನು ನಿಮ್ಮೊಂದಿಗಿರಲಿ' ಎಂಬುದಾಗಿ ದುಃಖ ಭರಿತ ಸ್ವರದಲ್ಲಿ ನುಡಿದರು. ಮೊದಲೆಂದೂ ಕಾಣದಂತಹ ಒಂದು ಬದಲಾವಣೆಯನ್ನು ಅಂದಿನ ಅವರ ಮಾತಿನಲ್ಲಿ ನಾನು ಕಂಡೆ. ನಂತರ ಅವರು ಬೇಗನೇ ತಲೆ ತಗ್ಗಿಸಿಕೊಂಡು ದೂರ ನಡೆದರು. ನಮ್ಮ ಪರಿಸ್ಥಿತಿಯನ್ನು ನೋಡಿ ಅವರು ಅತ್ಯಂತ ಕಳವಳಗೊಂಡವರಂತೆ ಕಂಡು ಬರುತ್ತಿತ್ತು."

ವಿಶ್ವಾಸಿಗಳ ಈ ಚಿಕ್ಕ ತಂಡವು ದೇಶವನ್ನು ಬಿಟ್ಟು ಹೋಗುವ ವಿವರವು ಮಕ್ಕಾದ ವಿರೋಧಿ ನಾಯಕರಿಗೆ ತಿಳಿಯುತ್ತಲೇ ಅವರು ಜನರನ್ನು ಕಳುಹಿಸಿ ಇವರನ್ನು ಬೆನ್ನಟ್ಟಿಸಿದರು. ಸಮುದ್ರ ಕಿನಾರೆಯ ವರೆಗೂ ಅವರು ಈ ಸಮೂಹವನ್ನು ಹಿಂಬಾಲಿಸಿದರಾದರೂ ಅವರು ತಲಪುವ ಮೊದಲೇ ಈ ತಂಡದವರು ಅಬಿಸೀನಿಯದ ಕಡೆ ಹೊರಟು ಹೋಗಿದ್ದರಿಂದ ಅವರನ್ನು ತಡೆಯಲು ಸಾಧ್ಯವಾಗಲಿಲ್ಲ. ಆಗ ಮಕ್ಕಾ ನಿವಾಸಿಗಳು ಮತ್ತೊಂದು ಉಪಾಯವನ್ನು ಹೂಡಿದರು. ಅವರು ಗೂಢಾಲೋಚನೆ ನಡೆಸಿ, ಕೆಲವು ವ್ಯಕ್ತಿಗಳನ್ನೊಳಗೊಂಡ ಒಂದು ನಿಯೋಗವನ್ನು ಅಬಿಸೀನಿಯಕ್ಕೆ ಕಳುಹಿಸಿ, ಅಲ್ಲಿಯ ರಾಜನ ಬಳಿ ಈ ಮುಸ್ಲಿಂ ವಿಶ್ವಾಸಿಗಳ ಬಗ್ಗೆ ಪಿತೂರಿ ನಡೆಸಲು ತೀರ್ಮಾನಿಸಿದರು. ಮಕ್ಕಾ ಬಿಟ್ಟು ಪಲಾಯನ ಮಾಡಿದ ಈ ನವ ವಿಶ್ವಾಸಿಗಳ ತಪ್ಪಿಗೆ ತಕ್ಕ ಶಾಸ್ತಿಯನ್ನು ಮಾಡಲಿಕ್ಕಾಗಿ ಅವರನ್ನು ಮಕ್ಕಾದ ಜನರಿಗೇ ಹಿಂದಿರುಗಿಸಿ ಕೊಡಬೇಕೆಂದು ಅಬಿಸೀನಿಯದ ಅರಸನೊಡನೆ ಈ ನಿಯೋಗವು ಮನವಿ ಮಾಡಬೇಕೆಂದೂ ತೀರ್ಮಾನಿಸಲಾಯಿತು. ನಂತರದ ಕಾಲದಲ್ಲಿ ಇಸ್ಲಾಂ ಧರ್ಮವನ್ನು ಸ್ವೀಕರಿಸಿ ಈಜಿಪ್ತನ್ನು ಜಯಿಸಲು ನೇತೃತ್ವ ವಹಿಸಿದ ಉಮರಿಬ್ನುಲ್ ಆಸ್ ಎಂಬವರು ಸಹ, ಮುಸ್ಲಿಮರ ವಿರುದ್ಧ ದೂರು ನೀಡಲು ಅಬಿಸೀನಿಯಕ್ಕೆ ತೆರಳಿದ ಈ ನಿಯೋಗದ ಒಬ್ಬ ಸದಸ್ಯರಾಗಿದ್ದರು.

ನಿಯೋಗವು ಅಬಿಸೀನಿಯಕ್ಕೆ ತಲಪಿತು. ಅವರು ಅಲ್ಲಿಯ ರಾಜ ದರ್ಬಾರಿನಲ್ಲಿ ಹಾಜರಾಗಿ, ಮುಸ್ಲಿಮರನ್ನು ಮಕ್ಕಾದ ಜನರಿಗೆ ವಹಿಸಿಕೊಡುವಂತೆ ಕೇಳಿಕೊಂಡರು. ದರ್ಬಾರಿನ ಇತರ ಸದಸ್ಯರೆಲ್ಲರೂ ಈ ನಿಯೋಗದವರ ಕೇಳಿಕೆಯನ್ನು ಬೆಂಬಲಿಸಿದರಾದರೂ ಸರ್ವಶಕ್ತನಾದ ಅಲ್ಲಾಹನು ಆ ರಾಜನ ಹೃದಯದಲ್ಲಿ ನೀತಿಪ್ರಜ್ಞೆಯನ್ನು ದೃಢಗೊಳಿಸಿದನು. ನಿಯೋಗದ ಸದಸ್ಯರು ಬಗೆ ಬಗೆಯಾಗಿ ಕೇಳಿಕೊಂಡರೂ, ತನ್ನ ದರ್ಬಾರಿನ ಸದಸ್ಯರು ಕೂಡ ಅದನ್ನು ಬೆಂಬಲಿಸಿದರೂ ಸಹ, ವಿರೋಧಿಗಳ ದಬ್ಬಾಳಿಕೆಯನ್ನು ಸಹಿಸಲಾರದೆ ತನ್ನ ರಾಜ್ಯಕ್ಕೆ ಅಭಯಾರ್ಥಿಗಳಾಗಿ ಬಂದ ಮುಸ್ಲಿಮರನ್ನು ಪುನಃ ಮಕ್ಕಾದ ನೇತಾರರಿಗೆ ಒಪ್ಪಿಸಲು ರಾಜನು ಸುತರಾಂ ಒಪ್ಪಲಿಲ್ಲ. ನಿಯೋಗವು ನಿರಾಶೆಯಿಂದ ಹಿಂದಿರುಗಬೇಕಾಯಿತು.

ತಮ್ಮ ಈ ಉಪಾಯವು ಫಲಿಸದೆ ಹೋದುದನ್ನು ಕಂಡ ಮಕ್ಕಾ ನಿವಾಸಿಗಳು, ದೇಶ ಬಿಟ್ಟು ಹೋದ ಮುಸ್ಲಿಮರು ಪುನಃ ಬರುವಂತೆ ಇನ್ನೊಂದು ತಂತ್ರವನ್ನು ಹೂಡಿದರು. ಅದೇನೆಂದರೆ, ಅಬಿಸೀನಿಯದ ಮಾರ್ಗವಾಗಿ ವ್ಯಾಪಾರಕ್ಕೆ ತೆರಳುವ ವರ್ತಕ ತಂಡಗಳ ಮೂಲಕ, ಮಕ್ಕಾದ ಎಲ್ಲಾ ಜನರೂ ಇಸ್ಲಾಂ ಧರ್ಮವನ್ನು ಸ್ವೀಕರಿಸಿರುವುದಾಗಿ ಸುಳ್ಳು ವದಂತಿಯನ್ನು ಹಬ್ಬಿಸಲು ಏರ್ಪಾಡು ಮಾಡಿದರು. ಅಬಿಸೀನಿಯದಲ್ಲಿ ಈ ವದಂತಿಯು ಹಬ್ಬಿದಾಗ ಹರ್ಷಪುಳಕಿತರಾದ ಮುಸ್ಲಿಮರಲ್ಲಿ ಹಲವರು ತಮ್ಮ ತಾಯ್ನಾಡಿಗೆ ಹಿಂದಿರುಗಿದರು. ಆದರೆ, ಮಕ್ಕಾ ಪಟ್ಟಣವನ್ನು ತಲಪುತ್ತಲೇ ತಾವು ಕೇಳಿದ ವದಂತಿಯಲ್ಲಿ ಸತ್ಯಾಂಶವಿಲ್ಲವೆಂದೂ ಇದು ತಮ್ಮನ್ನು ವಾಪಸು ಕರೆಸಲು ವಿರೋಧಿಗಳು ಹೂಡಿದ ಕುತಂತ್ರವೆಂದೂ ಅವರಿಗೆ ಮನದಟ್ಟಾಯಿತು. ಆಗ ಅವರಲ್ಲಿ ಕೆಲವರು ಪುನಃ ಅಬಿಸೀನಿಯಕ್ಕೆ ಮರಳಿದರು. ಕೆಲವರು ಮಕ್ಕಾದಲ್ಲಿಯೇ ಉಳಿಯಲು ತೀರ್ಮಾನಿಸಿದರು. ಈ ರೀತಿ ಮಕ್ಕಾದಲ್ಲೇ ಉಳಿದವರಲ್ಲಿ ಉಸ್ಮಾನ್-ಬಿನ್-ಮಸ್‌ಊನ್ ಒಬ್ಬರು. ಅವರು ಮಕ್ಕಾದ ಒಬ್ಬ ಬಹು ದೊಡ್ಡ ನೇತಾರನ ಪುತ್ರ. ಈ ಸಲ ಉಸ್ಮಾನ್ ಬಿನ್ ಮಸ್‌ಊನ್‌ರಿಗೆ ಅವರ ತಂದೆಯ ಆಪ್ತ ಸ್ನೇಹಿತರಾಗಿದ್ದ ವಲೀದಿಬ್ನು ಮುಗೀರ ಎಂಬವರು ರಕ್ಷಣೆಯನ್ನು ನೀಡಿದರು. ಆದುದರಿಂದ ಅವರು ಮಕ್ಕಾದಲ್ಲಿ ನೆಮ್ಮದಿಯಿಂದ ಜೀವಿಸುತ್ತಿದ್ದರು. ಅದೇ ವೇಳೆ ಇತರ ಮುಸ್ಲಿಮರು ವಿರೋಧಿಗಳಿಂದ ಅನುಭವಿಸುತ್ತಿದ್ದ ನರಕ ಯಾತನೆಗಳನ್ನೂ ಹಿಂಸೆಯನ್ನೂ ಅವರು ಕಾಣುತ್ತಲೇ ಇದ್ದರು. ಸ್ವಾಭಿಮಾನಿಯಾದ ಈ ಯುವಕನಿಗೆ, ತಾನು ಪೀಡನೆಗಳಿಂದ ಮುಕ್ತನಾಗಿದ್ದು ಇತರ ಮುಸ್ಲಿಮರು ಕಷ್ಟಕ್ಕೆ ಗುರಿಯಾಗುತ್ತಿರುವುದನ್ನು ಕಂಡು ಸಹಿಸಲಾಗಲಿಲ್ಲ. ಅವರು ವಲೀದರ ಬಳಿ ಹೋಗಿ ತನಗೆ ನೀಡಿದ ಅಭಯದಾನವನ್ನು ಹಿಂತೆಗೆಯಬೇಕೆಂದೂ ಯಾಕೆಂದರೆ, ಇತರ

ಸಹೋದರರು ದೌರ್ಜನ್ಯಕ್ಕೆ ಗುರಿಯಾಗುತ್ತಿದ್ದು ತಾನು ಮಾತ್ರ ಸೌಖ್ಯದಿಂದ ಬಾಳುವುದನ್ನು ತಾನು ಇಷ್ಟಪಡುವುದಿಲ್ಲವೆಂದೂ ತಿಳಿಸಿದರು. ಅದರಂತೆ, ಉಸ್ಮಾನ್ ಇನ್ನು ಮುಂದೆ ತನ್ನ ಆಶ್ರಯದಲ್ಲಿ ಇಲ್ಲವೆಂಬುದಾಗಿ ವಲೀದರು ಘೋಷಿಸಿದರು.

ಒಂದು ದಿನ, ಅರೇಬಿಯಾದ ಸುಪ್ರಸಿದ್ಧ ಕವಿ ಲಬೀದ್ ಎಂಬವರು ಮಕ್ಕಾದ ಖುರೈಷಿ ಮುಂದಾಳುಗಳ ದರ್ಬಾರಿನಲ್ಲಿ ಕೂತು ತನ್ನ ಕವಿತೆಗಳನ್ನು ಹಾಡುತ್ತಾ ಇದ್ದರು. ಅವರ ಕವಿತೆಯ ಒಂದು ಪಂಕ್ತಿ ಈ ರೀತಿಯಿತ್ತು:

ವ ಕುಲ್ಲು ನಈಮಿನ್ ಲಾ ಮಹಾಲತ ಸಾಇಲುನ್

(ಅಂದರೆ–ಎಲ್ಲಾ ಪ್ರಕಾರದ ಸುಖ ಸಂತೋಷಗಳೂ ಒಂದು ದಿನ ಕೊನೆಗೊಳ್ಳುವಂತಹದ್ದಾಗಿವೆ.)

ಉಸ್ಮಾನ್ ಬಿನ್ ಮಸ್‌ಊನ್ ತಕ್ಷಣವೇ ಇದನ್ನು ಪ್ರತಿಭಟಿಸಿದರು: "ಅದು ಸರಿಯಲ್ಲ, ಸ್ವರ್ಗದ ಸುಖ ಐಶ್ವರ್ಯಗಳು ಕೊನೆಗೊಳ್ಳದಂತಹವೂ ನಿತ್ಯ ನಿರಂತವೂ ಆಗಿವೆ." ಎಂದವರು ಹೇಳಿದರು. ಲಬೀದ್ ಅಂದಿನ ಅರಬರೆಡೆಯಲ್ಲಿ ಬಹಳಷ್ಟು ಪ್ರತಿಷ್ಠೆಯುಳ್ಳ ಒಬ್ಬ ವ್ಯಕ್ತಿಯಾಗಿದ್ದರು. ಉಸ್ಮಾನ್‌ರವರ ಈ ಅನಿರೀಕ್ಷಿತ ಉತ್ತರವು ಅವರನ್ನು ತಳಮಳಗೊಳಿಸಿರಬೇಕು. ಅವರು ಕೋಪಾವಿಷ್ಠರಾಗಿ ಈ ರೀತಿ ಹೇಳಿದರು: "ಎಲೈ ಖುರೈಷಿ ಜನರೇ, ನಿಮ್ಮ ಅತಿಥಿಗಳನ್ನು ಮೊದಲೆಂದೂ ಈ ರೀತಿ ಅಪಮಾನಿಸಲಾಗುತ್ತಿರಲಿಲ್ಲ! ಯಾವಾಗಿನಿಂದ ಈ ಹೊಸ ಸಂಪ್ರದಾಯ ತೊಡಗಿತು?" ಆಗ ಸಭಿಕರಲ್ಲಿ ಒಬ್ಬ ಎದ್ದು ನಿಂತು – "ಅವನೊಬ್ಬ ಮೂರ್ಖ; ಅವನ ಮಾತಿಗೆ ಅಷ್ಟೊಂದು ಗಮನ ಕೊಡಬೇಕಾದ ಅವಶ್ಯಕತೆಯಿಲ್ಲ," ಎಂದು ಹೇಳಿ ಸಾಂತ್ವನ ಪಡಿಸಿದರು. ಆಗ ಉಸ್ಮಾನ್: "ಇದರಲ್ಲಿ ಮೂರ್ಖತೆಯ ಮಾತೆಲ್ಲಿ ಬಂತು? ನಾನು ಹೇಳಿದ್ದು ಸತ್ಯವೇ ಆಗಿದೆ." ಎಂದು ಪ್ರತ್ಯುತ್ತರ ನೀಡಿದರು. ಆಗ ರೇಗಿದ ಆ ವ್ಯಕ್ತಿ ಎದ್ದು ಉಸ್ಮಾನ್‌ರ ಮುಖಕ್ಕೆ ರಭಸದಿಂದ ಒಂದು ಬಾರಿಸಿದ. ಅದರಿಂದ ಉಸ್ಮಾನ್‌ರವರ ಒಂದು ಕಣ್ಣು ಕಿತ್ತು ಬಂತು. ಆ ಸಭೆಯಲ್ಲಿ ವಲೀದ್ ಸಹ ಉಪಸ್ಥಿತರಿದ್ದರು. ಈ ಎಲ್ಲಾ ದೃಶ್ಯವೂ ಅವರ ಕಣ್ಣೆದುರಿನಲ್ಲೇ ನಡೆಯಿತು. ಗತಿಸಿ ಹೋದ ತನ್ನ ಪ್ರಿಯ ಸ್ನೇಹಿತನ ಮಗನಿಗೆ ಎದುರಾದ ಈ ದುರವಸ್ಥೆಯನ್ನು ಅವರಿಂದ ನೋಡಲಾಗಲಿಲ್ಲ. ಆದರೆ, ಮಕ್ಕಾದ ರಿವಾಜಿನ ಪ್ರಕಾರ ಆಗ ತನ್ನ ಆಶ್ರಯದಲ್ಲಿ ಇಲ್ಲವಾಗಿದ್ದ ಉಸ್ಮಾನ್‌ರನ್ನು ರಕ್ಷಿಸಲು ಅವರಿಂದ ಆಗುತ್ತಿರಲಿಲ್ಲ. ಉಸ್ಮಾನರ ಪರವಾಗಿ ಅವರು ಏನನ್ನೂ ಮಾಡುವಂತಿರಲಿಲ್ಲ. ಸಹ ತಾಪವೂ ಸಿಟ್ಟೂ ಒಂದೇ ವೇಳೆ ಅವರಲ್ಲಿ ಉಮ್ಮಳಿಸಿತು. ಉಸ್ಮಾನರ ಕಡೆಗೇ ಮುಖ ಮಾಡಿ ಅವರು ಹೇಳಿದರು: "ಎಲಾ ನನ್ನ ಸ್ನೇಹಿತನ ಪುತ್ರನೇ, ದೇವರಾಣೆಗೂ, ನೀನು ಒಂದು ಬಲಯುತ ರಕ್ಷಣೆಯಲ್ಲಿ ಮುಂದುವರಿಯುತ್ತಿದ್ದರೆ ಇಂದು ನಿನ್ನ ಆ ಕಣ್ಣಿಗೆ ಇಂತಹ ಪರಿಸ್ಥಿತಿ ಒದಗುತ್ತಿರಲಿಲ್ಲ. ಆದರೆ, ನೀನು ಸ್ವಯಂ ಆ ರಕ್ಷಣೆಯನ್ನು ನಿರಾಕರಿಸಿದೆಯಲ್ಲಾ!" ಉಸ್ಮಾನ್ ಹೇಳಿದರು – "ನನ್ನ ಮೇಲೆ ನಡೆದ ಈ ದೌರ್ಜನ್ಯವನ್ನು ನಾನು ಬಯಸುತ್ತಲೇ ಇದ್ದೆನು. ನನ್ನ ಘಾಸಿಗೊಂಡ ಕಣ್ಣಿನ ಬಗ್ಗೆ ನೀವು ದು:ಖಪಡುತ್ತಿದ್ದೀರಿ. ಆದರೆ, ನನ್ನ ಇನ್ನೊಂದು ಕಣ್ಣು ಅದೇ ಘಟನೆ ತನ್ನ ಮೇಲೆ ನಡೆಯಲಿಲ್ಲವಲ್ಲ ಎಂದು ದುಃಖಿಸುತ್ತಿದೆ. ನೆನಪಿಟ್ಟುಕೊಳ್ಳಿರಿ, ಹಜ್ರತ್ ಮುಹಮ್ಮದ್ ಪೈಗಂಬರರ ಜೀವನದ ಮಾದರಿಯೇ ನಮಗೆ ಪರ್ಯಾಪ್ತವಾಗಿದೆ. ಅವರು ಕಷ್ಟ ಯಾತನೆಗಳನ್ನು ಅನುಭವಿಸುತ್ತಿರುವರೆಂದಾದರೆ ನಾನೇಕೆ ಅನುಭವಿಸಬಾರದು ? ನನಗಂತೂ ಪರಮಾತ್ಮನ ರಕ್ಷಣೆಯೇ ಸಾಕು!"

## ಹಜ್ರತ್ ಉಮರ್ ಇಸ್ಲಾಂ ಧರ್ಮಕ್ಕೆ

ಇದೇ ವೇಳೆ, ಮಕ್ಕಾದಲ್ಲಿ ಉರಿಯುತ್ತಿದ್ದ ಬೆಂಕಿಯನ್ನು ಮತ್ತಷ್ಟು ಭುಗಿಲೆಬ್ಬಿಸುವಂತಹ ಒಂದು ಘಟನೆ ನಡೆಯಿತು. ನಂತರದ ಕಾಲದಲ್ಲಿ ಇಸ್ಲಾಂ ಧರ್ಮದ ಎರಡನೇಯ ಖಲೀಫರಾಗಿ ಆಯ್ಕೆಗೊಂಡ ಉಮರ್ ಆರಂಭದ ಕಾಲದಲ್ಲಿ ಇಸ್ಲಾಂ ಧರ್ಮದ ಉಗ್ರ ವಿರೋಧಿಯೂ ಪೈಗಂಬರರ ಪ್ರಬಲ ಶತ್ರುವೂ ಆಗಿದ್ದರು. ಅವರು ಒಂದು ದಿನ ಕುಳಿತಲ್ಲೇ ಯೋಚನಾಮಗ್ನರಾದರು: ಈ ಹೊಸ ಪಿತೂರಿಯನ್ನು ಕೊನೆಗಾಣಿಸಲು ಇದು ವರೆಗೂ ಅನೇಕ ಕಾರ್ಯಕ್ರಮಗಳನ್ನು ಕೈಗೊಂಡರೂ ಸಹ ಅವುಗಳು ಯಶಸ್ವಿಯಾಗಲಿಲ್ಲ. ಆದುದರಿಂದ ಇಸ್ಲಾಂ ಧರ್ಮವನ್ನು ನಿರ್ಮೂಲನ ಮಾಡಲು ಕೈಕೊಳ್ಳಬೇಕಾದ ಏಕ ಮಾತ್ರ ಪರಿಣಾಮಕಾರಿ ಕ್ರಮವೆಂದರೆ, ಮುಹಮ್ಮದರನ್ನು ಕೊಲ್ಲುವುದು. ಅವರನ್ನು ವಧಿಸುವುದರಿಂದ ಮಾತ್ರವೇ ಈ ಕುತಂತ್ರದ ಹುಟ್ಟಡಗಿಸಲು ಸಾಧ್ಯ. ಅಲ್ಲದೆ, ಬೇರೆ ಯಾವ ವಿಧಾನದಿಂದಲೂ ಈ ಕುತಂತ್ರವು ಅಡಗಲಾರದು.

ಹಾಗೆ ಯೋಚಿಸಿದ ಉಮರ್ ತಕ್ಷಣವೇ ತನ್ನ ಖಡ್ಗವನ್ನು ಕೈಗೆತ್ತಿಕೊಂಡು ಮುಹಮ್ಮದ್ ಪೈಗಂಬರರನ್ನು ಅರಸುತ್ತಾ ಮನೆಯಿಂದ ಹೊರಬಿದ್ದರು. ದಾರಿಯಲ್ಲಿ ಅವರ ಒಬ್ಬ ಮಿತ್ರ ಅವರನ್ನು ಈ ಅವಸ್ಥೆಯಲ್ಲಿ ಕಂಡು ಅವಾಕ್ಕಾಗಿ ಇದೆಲ್ಲಿಗೆ ಹೋಗುತ್ತಿರುವೆಯೆಂದು ಕೇಳಿದರು. "ಮುಹಮ್ಮದನನ್ನು ಕೊಲ್ಲಲು" ಉಮರ್ ಉತ್ತರಿಸಿದರು. ಆಗ ಉಮರರ ಆ ಮಿತ್ರ ಹೇಳಿದರು: "ಮುಹಮ್ಮದನನ್ನು ಕೊಂದು ಆತನ ಗೋತ್ರದವರಿಂದ ಸುರಕ್ಷಿತವಾಗಿರ ಬಹುದೆಂದು ನೀನು ಗ್ರಹಿಸಿದೆಯಾ? ನಿನ್ನ ಸ್ವಂತ ಮನೆಯ ಕಡೆಗಾದರೂ ಸ್ವಲ್ಪ ಗಮನ ಹರಿಸು, ನಿನ್ನ ಸಹೋದರಿ ಮತ್ತು ಆಕೆಯ ಗಂಡ ಸಹ ಇಸ್ಲಾಂ ಧರ್ಮವನ್ನು ಸ್ವೀಕರಿಸಿರುವರು!" ಮಿತ್ರನ ಈ ಮಾತುಗಳನ್ನು ಕೇಳಿ ಉಮರ್‌ರಿಗೆ ಸಿಡಿಲು ಬಡಿದಂತಾಯಿತು. ಅವರು ಯೋಚಿಸಿದರು—ನಾನಾದರೆ ಇಸ್ಲಾಂ ಧರ್ಮದ ಕಠಿಣ ವಿರೋಧಿಯಾಗಿರುವೆನು. ಮುಹಮ್ಮದ್‌ನನ್ನೇ ಕೊಲ್ಲಲು ನಾನು ಹೊರಟಿದ್ದೇನೆ. ನನ್ನ ಸಹೋದರಿ ಮತ್ತು ಆಕೆಯ ಗಂಡನೇ ಇಸ್ಲಾಂ ಧರ್ಮವನ್ನು ಸ್ವೀಕರಿಸುವುದೆಂದರೇನು? ಸಾಧ್ಯವಿಲ್ಲ! ಮೊದಲು ಅವರನ್ನೇ ನೋಡಿಕೊಳ್ಳುತ್ತೇನೆ ಹಾಗೆ ಯೋಚಿಸಿ ಹಲ್ಲುಕಚ್ಚುತ್ತಾ ತನ್ನ ದಾರಿಯನ್ನು ಸಹೋದರಿಯ ಮನೆಯ ಕಡೆ ಬದಲಾಯಿಸಿದರು. ಮನೆಯನ್ನು ತಲಪಿ ಬಾಗಿಲ ಬಳಿ ಬರುತ್ತಿದ್ದಂತೆಯೇ ಒಳಗಿನಿಂದ ಮಧುರ ಸ್ವರದಲ್ಲಿ ಏನೋ ಪಠಿಸುತ್ತಿರುವ ಶಬ್ದವು ಕೇಳಿಸಿತು. ಆ ಶಬ್ದವು ಖಬ್ಬಾಬ್ ಎಂಬವರದ್ದಾಗಿತ್ತು. ಅವರು ಉಮರ್‌ನ ಸಹೋದರಿ ಮತ್ತು ಆಕೆಯ ಪತಿಗೆ ಪವಿತ್ರ ಖುರ್‌ಆನನ್ನು ಕಲಿಸುತ್ತಿದ್ದರು. ಉಮರ್ ಕೋಪಾವೇಶದಿಂದ ಮನೆಯೊಳಗೆ ನುಗ್ಗಿದರು. ಅವರ ಕಾಲ ಸಪ್ಪಳ ಕೇಳಿಯೇ ಖಬ್ಬಾಬ್ ಎಲ್ಲೋ ಅಡಗಿ ಕುಳಿತರು. ತಂಗಿ ಫಾತಿಮ ತಾವು ಓದುತ್ತಿದ್ದ ಪವಿತ್ರ ಖುರ್‌ಆನಿನ ಹಾಳೆಗಳನ್ನು ಅಡಗಿಸಿಟ್ಟರು. ಮನೆಯೊಳಗೆ ಪ್ರವೇಶಿಸಿದ ಉಮರ್ ಗುಡುಗುತ್ತಾ: "ನೀವು ನಮ್ಮ ಧರ್ಮವನ್ನು ತ್ಯಜಿಸಿರುವುದಾಗಿ ನಾನು ಕೇಳಿದೆ ನಿಜವಾ?" ಎಂದು ಕೇಳಿ ತನ್ನ ಚಿಕ್ಕಪ್ಪನ ಮಗನೂ ಕೂಡಾ ಆಗಿದ್ದ ಸಹೋದರಿಯ ಪತಿಗೆ ಬಲವಾಗಿ ಹೊಡೆಯಲು ಕೈಯೆತ್ತಿದರು. ಇದನ್ನು ಕಂಡ ಫಾತಿಮ ತನ್ನ ಗಂಡನ ರಕ್ಷಣೆಗಾಗಿ ಮಧ್ಯಕ್ಕೆ ಬಂದರು. ಉಮರ್‌ರ ಬಲವಾದ ಹೊಡೆತವು ಗುರಿತಪ್ಪಿ ಫಾತಿಮರ ಮುಖದ ಮೇಲೆ ಬಿತ್ತು. ಅವರ ಮೂಗಿನಿಂದ ರಕ್ತವು ಹರಿಯತೊಡಗಿತು. ಪ್ರಹಾರಕ್ಕೆ ಗುರಿಯಾದರೂ ಅವರು ಧೈರ್ಯದಿಂದ ಹೇಳಿದರು: "ಹೌದು, ನಾವು ಇಸ್ಲಾಂ ಧರ್ಮವನ್ನು ಸ್ವೀಕರಿಸಿರುವುದು ನಿಜ. ಆದರೆ, ನಿಮ್ಮ ಬೆದರಿಕೆಗೆ ಮಣಿದು ನಾವು ಅದನ್ನು ಬಿಟ್ಟು ಬಿಡಲಾರೆವೆಂಬುದು ನಿಮಗೆ ತಿಳಿದಿರಲಿ!"

ಉಮರ್ ಒಬ್ಬ ವೀರ ವ್ಯಕ್ತಿಯಾಗಿದ್ದರು. ಒರಟಾಗಿದ್ದರೂ ಒಬ್ಬ ಧೀರ ಪುರುಷ. ಅಬಲೆಯಾದ ಹೆಂಗಸೊಬ್ಬಳ, ಅದು ಕೂಡಾ ತನ್ನ ಸ್ವಂತ ತಂಗಿಯ, ಮುಖವು ತನ್ನ ಕೈಯಿಂದ ಬಿದ್ದ ಏಟಿನಿಂದಾಗಿ ರಕ್ತಸಿಕ್ತವಾಗಿರುವುದನ್ನು ನೋಡಿ ಅವರಿಗೆ ನಾಚಿಕೆಯಾಯಿತು. ತಂಗಿಯ ಮೂಗಿನಿಂದ ರಕ್ತವು ಹರಿಯುತ್ತಲೇ ಇತ್ತು. ಉಮರ್‌ರವರ ಕೋಪವೂ ಇಳಿಯುತ್ತಿತ್ತು. ಅವರು ಸಂಪೂರ್ಣ ಬದಲಾವಣೆ ಹೊಂದಿದ ಒಬ್ಬ ವ್ಯಕ್ತಿಯಂತಾದರು. ಸಹೋದರಿಯೊಡನೆ ಕ್ಷಮೆ ಕೇಳಬೇಕೆಂದೆನಿಸಿತು. ಅವರು ಹೇಳಿದರು: "ನೀವು ಓದುತ್ತಿದ್ದ ಆ ವಚನಗಳನ್ನು ತಂದು ನನಗೂ ಸ್ವಲ್ಪ ಓದಿ ಕೇಳಿಸಿರಿ." ಪವಿತ್ರ ಖುರ್‌ಆನ್ ವಚನಗಳನ್ನೊಳಗೊಂಡ ಆ ಹಾಳೆಗಳನ್ನು ಹರಿದು ಬಿಸಾಡುವ ಉದ್ದೇಶ ನಿಮಗಿದೆಯೆಂದೂ ಆದುದರಿಂದ ತೋರಿಸಲಾರೆನೆಂದೂ ಫಾತಿಮ ಹೇಳಿದರು. ಹಾಗೇನೂ ಮಾಡಲಾರೆನೆಂದು ಉಮರ್ ಭರವಸೆಯಿತ್ತಾಗ ಅವರಂದರು: "ನಿಮ್ಮ ಮನಸ್ಸಿನಿಂದ ದ್ವೇಷಾಗ್ನಿಯು ಮಾಯವಾದಂತೆಯೇ ಶರೀರದಿಂದಲೂ ಅಶುದ್ಧಿಯು ನೀಗಲಿ. ನೀವು ಸ್ನಾನ ಮಾಡಿ ಬಂದರೆ ಅದನ್ನು ನಿಮ್ಮ ಕೈಗೆ ಕೊಡುವೆನು." ಉಮರ್ ಅದಕ್ಕೊಪ್ಪಿಕೊಂಡು ಸ್ನಾನಕ್ಕೆ ತೆರಳಿದರು. ಅವರು ಸ್ನಾನ ಮಾಡಿ ಶುದ್ಧರೂ ಶಾಂತರೂ ಆಗಿ ಬಂದ ಬಳಿಕ ಫಾತಿಮ ಖುರ್‌ಆನ್ ವಚನಗಳುಳ್ಳ ಆ ಹಾಳೆಗಳನ್ನು ಉಮರ್‌ರವರ ಕೈಗಿತ್ತರು. ಅದು ಪವಿತ್ರ ಖುರ್‌ಆನಿನ "ತಾಹಾ" ಎಂಬ ಅಧ್ಯಾಯದ ಕೆಲವು ವಚನಗಳಾಗಿದ್ದವು. ಉಮರ್ ಅದನ್ನು ಪಠಿಸುತ್ತಾ ಮುಂದುವರಿದು ಈ ವಚನಗಳನ್ನು ತಲಪಿದರು:—

ಇನ್ನನೀ- ಅನಲ್ಲಾಹು ಲಾ ಇಲಾಹ ಇಲ್ಲಾ ಅನಾ ಫಅ್‌ಬುದ್‌ನೀ ವ ಅಖಿಮಿಸ್ಸಲಾತ ಲಿದಿಕ್‌ರೀ. ಇನ್ನಸ್ಸಾಅತ ಆತಿಯತುನ್ ಅಕಾದು ಉಖ್‌ಫೀಹಾ ಲಿ ತುಜ್‌ಸಾ ಕುಲ್ಲು ನಫ್‌ಸಿನ್ ಬಿಮಾ ತಸ್‌ಅ. (20:15,16)

(ನಿಶ್ಚಯವಾಗಿಯೂ ನಾನು ಅಲ್ಲಾಹನಾಗಿದ್ದೇನೆ. ನನ್ನ ಹೊರತು ಬೇರೆ ಆರಾಧ್ಯನಿಲ್ಲ. ಆದುದರಿಂದ ನನ್ನನ್ನೇ ಆರಾಧಿಸಿರಿ. ನನ್ನ ಸ್ಮರಣಾರ್ಥವಾಗಿ ನಮಾಜು ಮಾಡಿರಿ. ಆ ಕಾಲವು ಸಮೀಪಿಸಿದೆ; ನಾನದನ್ನು ಪ್ರಕಟಿಸಲಿರುವೆನು; ಅದರ ಫಲವಾಗಿ ಖಂಡಿತವಾಗಿಯೂ ಪ್ರತಿಯೊಂದು ಜೀವಾತ್ಮವೂ ಕರ್ಮಕ್ಕೆ ತಕ್ಕುದಾದ ಪ್ರತಿಫಲವನ್ನು ಪಡೆಯುವುದು.)

ದೈವಾಸ್ತಿತ್ವದ ಬಗ್ಗೆ ದೃಢವಾದ ಘೋಷಣೆ. ಜಾರಿಯಲ್ಲಿರುವ ಮೂಢಾಚಾರಗಳ ಜಾಗದಲ್ಲಿ ಸಾಕ್ಷಾತ್ ಪರಮಾತ್ಮನ ಆರಾಧನೆಯನ್ನು ಪುನಃ ಸ್ಥಾಪಿಸುವ ಹಾಗೂ ಇಸ್ಲಾಮಿನ ಜಯಭೇರಿಯ ಕುರಿತು ಸ್ಪಷ್ಟವಾದ ಭವಿಷ್ಯವಾಣಿ! ಈ ವಾಕ್ಯಗಳನ್ನು ಓದುತ್ತಲೇ ಹಝ್ರತ್ ಉಮರ್‌ರವರ ಹೃದಯವು ಉದ್ವೇಗ ಭರಿತವಾಯಿತು. ಅವರರಿಯದೆಯೇ ಅವರ ಬಾಯಿಯಿಂದ ಈ ಮಾತುಗಳು ಹೊರ ಬಂದವು — "ಇವು ನಿಜವಾಗಿಯೂ ಎಷ್ಟೊಂದು ಅದ್ಭುತಕರವೂ ಪವಿತ್ರವೂ ಆದ ವಚನಗಳಾಗಿವೆ!"

ಉಮರ್‌ರವರ ಈ ಮಾತುಗಳನ್ನು ಕೇಳುತ್ತಲೇ ಖಬ್ಬಾಬ್ ತಾನು ಅಡಗಿದ್ದ ಸ್ಥಳದಿಂದ ಎದ್ದು ಬಂದು ಈ ರೀತಿ ಹೇಳ ತೊಡಗಿದರು: "ಖಂಡಿತವಾಗಿಯೂ ಇದು ಮುಹಮ್ಮದ್ ಪೈಗಂಬರರ ಪ್ರಾರ್ಥನೆಯ ಫಲವಾಗಿದೆ. ಪರಮಾತ್ಮನಾಣೆ, ಪೈಗಂಬರರ ಪ್ರಾರ್ಥನೆಯನ್ನು ನಾನೇ ಕೇಳಿರುವೆನು. ನಿನ್ನೆ ತಾನೇ ಅವರು ಪ್ರಾರ್ಥಿಸಿದರು — ಅಲ್ಲಾಹನೇ, ಉಮರಿಬ್ನುಲ್ ಖತ್ತಾಬ್ ಅಥವಾ ಅಮರಿಬ್ನು ಹಿಶಾಮ್ ಇವರಿಬ್ಬರಲ್ಲಿ ಒಬ್ಬರನ್ನಾದರೂ ಇಸ್ಲಾಮಿನೆಡೆ ಶೀಘ್ರದಲ್ಲೇ ಪರಿವರ್ತಿಸು–ಎಂದು." ಉಮರ್ ಎದ್ದು ನಿಂತು ಹಝ್ರತ್ ಮುಹಮ್ಮದ್ ಪೈಗಂಬರರು ಈಗ ಎಲ್ಲಿರುವರೆಂದು ವಿಚಾರಿಸಿದರು. ಪೈಗಂಬರರು 'ದಾರುಲ್ ಅರ್‌ಖಮ್'ನಲ್ಲಿರುವರೆಂದು ಅವರಿಗೆ ತಿಳಿಸಲಾಯಿತು. ಉಮರ್ ನಡೆದರು. ಒರೆಯಿಂದ ಹೊರ ತೆಗೆದ ನಗ್ನ ಖಡ್ಗವು ಆಗಲೂ ಅವರ ಕೈಯಲ್ಲಿತ್ತು. ಉಮರ್ ಬಾಗಿಲು ತಟ್ಟಿದಾಗ ಬಾಗಿಲ ಸಂದಿಯಿಂದಲೇ ಪೈಗಂಬರರ ಅನುಯಾಯಿಗಳು ಖಡ್ಗಧಾರಿಯಾಗಿ ನಿಂತಿರುವ ಉಮರ್‌ರನ್ನು ಕಂಡು ಭಯಗೊಂಡರು. ಅವರು ಒಳನುಗ್ಗಿ ಏನು ಮಾಡುವರೋ ಎಂಬ ಭೀತಿಯಿಂದ ಪೈಗಂಬರರ ಅನುಯಾಯಿಗಳಾರೂ ಬಾಗಿಲು ತೆರೆಯಲೇ ಇಲ್ಲ. ಆಗ ಪೈಗಂಬರರು "ಬಾಗಿಲು ತೆರೆಯಿರಿ; ಅವರು ಒಳ ಬರಲಿ" ಎಂದರು. ಉಮರ್ ಅದೇ ರೀತಿ ನಗ್ನ ಖಡ್ಗವನ್ನು ಕೈಯಲ್ಲಿ ಹಿಡಿದುಕೊಂಡೇ ಒಳ ನಡೆದರು. ಹಝ್ರತ್ ಪೈಗಂಬರರು ಮುನ್ನುಗ್ಗಿ ವಿಚಾರಿಸಿದರು—"ಉಮರ್, ಯಾವ ಉದ್ದೇಶದಿಂದ ಇಲ್ಲಿಗೆ ಬಂದಿರುವಿರಿ?" ಉಮರ್ ಉತ್ತರಿಸಿದರು: "ಓ ಅಲ್ಲಾಹನ ಸಂದೇಶವಾಹಕರೇ, ನಾನು ಮುಸ್ಲಿಮನಾಗಲು ಬಂದಿರುವೆನು." ಇದನ್ನು ಕೇಳಿದಾಗ ಪೈಗಂಬರರು ಉಚ್ಚ ಸ್ವರದಲ್ಲಿ "ಅಲ್ಲಾಹು ಅಕ್‌ಬರ್" ಎಂದು ಹೇಳಿದರು. ಅಂದರೆ ಅಲ್ಲಾಹು ಸರ್ವೋನ್ನತನು. ಅಲ್ಲಿ ನೆರೆದಿದ್ದ ಅವರ ಎಲ್ಲಾ ಅನುಯಾಯಿಗಳೂ "ಅಲ್ಲಾಹು ಅಕ್‌ಬರ್" ಎಂದು ಅದನ್ನು ಪುನರುಚ್ಚರಿಸಿದರು. ಆ ಶಬ್ದವು ಮಕ್ಕಾದ ಪರ್ವತಗಳಿಂದ ಪ್ರತಿಧ್ವನಿಗೊಂಡಿತು. ತಡವಿಲ್ಲದೆ ಈ ವಾರ್ತೆಯು ಮಕ್ಕಾದಲ್ಲೆಲ್ಲಾ ಬೆಂಕಿ ಜ್ವಾಲೆಯಂತೆ ಹಬ್ಬಿತು.

ಹಝ್ರತ್ ಉಮರ್‌ರವರ ಮೇಲೂ ಇತರರಿಗೆಂಬಂತೆ ದಬ್ಬಾಳಿಕೆಯೂ ಅತ್ಯಾಚಾರವೂ ಪ್ರಾರಂಭವಾಯಿತು. ಆದರೆ, ಈಗ ಹಝ್ರತ್ ಉಮರ್ ಸಂಪೂರ್ಣವಾಗಿ ಬದಲಾವಣೆ ಹೊಂದಿದ ಒಬ್ಬ ವ್ಯಕ್ತಿಯಾಗಿದ್ದರು. ಮೊದಲು ಹೊಡೆಯುವುದರಲ್ಲೂ ಕೊಲ್ಲುವುದರಲ್ಲೂ ಖುಷಿಪಡುತ್ತಿದ್ದ ಅವರು, ಈಗ ಹೊಡೆತ ಮತ್ತು ಬೈಗಳನ್ನು ತಿನ್ನುವುದರಲ್ಲಿ ಸಂತುಷ್ಟರಾಗುತ್ತಿದ್ದರು. ಉಮರ್‌ರವರ ಸ್ವಂತ ಹೇಳಿಕೆಯಂತೆ, ಅವರು ಇಸ್ಲಾಂ ಧರ್ಮವನ್ನು ಸ್ವೀಕರಿಸಿದ ನಂತರ ಮಕ್ಕಾದ ಬೀದಿಗಳಲ್ಲಿ ಅವರು ಇತರರಿಂದ ಥಳಿಸಲ್ಪಡುತ್ತಿದ್ದರು.

# ಕ್ರೈಸ್ತ ಮಿತ್ರರಿಗೊಂದು ಸುವಾರ್ತೆ

★ ಬಶೀರ್ ಅಹ್ಮದ್ ಓರ್ಚರ್ಡ್

( ಕಳೆದ ಸಂಚಿಕೆಯಿಂದ ಮುಂದುವರಿದುದು )

ಹಝ್ರತ್ ಮುಹಮ್ಮದ್ ಪೈಗಂಬರ್‌ರವರ ಸಂದೇಶ ಏನಾಗಿತ್ತು? ಹೊಸತಾದ ಯಾವ ಧರ್ಮಶಾಸ್ತ್ರವನ್ನು ಅವರು ತಂದರು? ಆ ರೀತಿಯ ನವೀನವಾದೊಂದು ಧರ್ಮಶಾಸ್ತ್ರದ ಆವಶ್ಯಕತೆ ಏನಿತ್ತು? ಖಂಡಿತವಾಗಿಯೂ ಈ ರೀತಿಯ ಪ್ರಶ್ನೆಗಳು ನಿಮ್ಮಲ್ಲಿ ಉದ್ಭವಿಸುತ್ತಿರಬಹುದು. ಹಝ್ರತ್ ಮುಹಮ್ಮದ್ ಪೈಗಂಬರರ ಆಧ್ಯಾತ್ಮಿಕ ದೌತ್ಯದ ಒಂದು ಸಂಕ್ಷಿಪ್ತ ವಿವರಣೆಯನ್ನು ನೀಡಲು ದೈವಾನುಗ್ರಹದಿಂದ ನನಗೆ ಸಾಧ್ಯವಾಗಬಹುದೆಂದು ನಾನು ತಿಳಿಯುತ್ತೇನೆ.

ಜಗತ್ತಿನ ಎಲ್ಲಾ ಜನ ವರ್ಗದವರೂ ಒಂದೇ ಧರ್ಮದ ಪತಾಕೆಯಡಿಯಲ್ಲಿ ಒಂದುಗೂಡಬೇಕೆಂಬುದು ಸೃಷ್ಟಿಕರ್ತನಾದ ದೇವರ ಇಚ್ಛೆಯಾಗಿತ್ತು. ಇದಕ್ಕಾಗಿ ಇಸ್ಲಾಂ ಧರ್ಮ ಸ್ಥಾಪಕರಾದ ಹಝ್ರತ್ ಮುಹಮ್ಮದ್ ಪೈಗಂಬರರ ಕಾಲದ ವರೆಗೂ ವಿವಿಧ ಕಾಲಘಟ್ಟಗಳಲ್ಲಿ, ವಿಭಿನ್ನ ಜನಸಮುದಾಯದವರೆಡೆಯಲ್ಲಿ ಪರಮಾತ್ಮನು ತನ್ನ ದಿವ್ಯ ಸಂದೇಶಗಳನ್ನು ನೀಡುತ್ತಿದ್ದನು. ಈ ದಿವ್ಯ ಪ್ರಬೋಧನೆಗಳು ಆಯಾ ಕಾಲದ ಆಯಾ ಕಾಲದ ಆವಶ್ಯಕತೆಗನುಸಾರವಾಗಿಯೂ ಆಯಾ ಕಾಲಕ್ಕೆ ಪರ್ಯಾಪ್ತವಾಗಿಯೂ ಇದ್ದುವು. ಈ ರೀತಿಯಾಗಿ ಲೋಕಾರಂಭ ಮೊದಲ್ಗೊಂಡು ಪರಮಾತ್ಮನು ವಿಭಿನ್ನ ಕಾಲಗಳಲ್ಲಿ ಸರ್ವ ಜಾತಿಗೋತ್ರದ ಜನರೆಡೆಯಲ್ಲೂ ತನ್ನ ಸಂದೇಶವಾಹಕರನ್ನು ನಿಯೋಗಿಸಿಕೊಂಡು ಮನುಷ್ಯ ಸಮುದಾಯದ ಪ್ರತಿಯೊಂದು ವಿಭಾಗದವರೂ ತನ್ನ ಕುರಿತು ಯಥಾರ್ಥ ಜ್ಞಾನವನ್ನು ಹೊಂದಿಕೊಳ್ಳಲು ಅವಕಾಶ ಮಾಡಿಕೊಟ್ಟಿರುವುದಾಗಿ ಪವಿತ್ರ ಖುರ್‌ಆನ್ ತಿಳಿಸಿಕೊಡುತ್ತದೆ. ಆ ಪವಿತ್ರ ಗ್ರಂಥದಲ್ಲಿ ಈ ರೀತಿ ಹೇಳಲಾಗಿದೆ:

"ವ ಇನ್ ಮಿನ್ ಉಮ್ಮತಿನ್ ಇಲ್ಲಾ ಖಲಾ ಫೀಹಾ ನದೀರ್"-ಒಬ್ಬ ಮುನ್ನೆಚ್ಚರಿಕೆದಾರ (ಸಂದೇಶವಾಹಕ)ನು ಬಂದಿರದ ಯಾವುದೇ ಜನ ವಿಭಾಗವೂ ಇಲ್ಲ. (ಪ. ಖು. 35:25).

ಭೂಮಿಯ ಯಾವುದೇ ಭಾಗದಲ್ಲಾದರೂ ತನ್ನ ಸಂದೇಶವಾಹಕರು ನಿಯೋಗಿಸಲ್ಪಡದ ಜನ ಸಮುದಾಯವು ಇರುವುದಿಲ್ಲವೆಂಬುದಾಗಿ ಇಲ್ಲಿ ಅಲ್ಲಾಹನು ವ್ಯಕ್ತಪಡಿಸಿರುವನು. ಇದು ವಿಚಾರವಂತನಾದ ಯಾರನ್ನೂ ಸಹ ಚಿಂತನೆಗೀಡುಮಾಡುವ ಒಂದು ವಿಷಯವಾಗಿದೆ. ಯಾಕೆಂದರೆ, ದೇವರು ತಾನು ಸೃಷ್ಟಿಸಿದ ಲಕ್ಷೋಪ ಲಕ್ಷ ಜನರಿಗೆ ತನ್ನ ಕುರಿತು ತಿಳಿದುಕೊಳ್ಳುವ ಅವಕಾಶವನ್ನು ನೀಡದೆ, ಅವರ ಜನ್ಮೋದ್ದೇಶವನ್ನೇ ಅವರು ತಿಳಿದುಕೊಳ್ಳದಂತಹ ನಿತ್ಯಾಂಧಕಾರದಲ್ಲಿ ಅವರನ್ನು ಉಪೇಕ್ಷಿಸಿದನೆಂದು ತಿಳಿಯುವುದು ವಿವೇಕಯುತವಲ್ಲ. ಅದೇ ರೀತಿಯಲ್ಲಿ ದೇವರು ತನ್ನ ಸೃಷ್ಟಿಗಳಲ್ಲಿ ಒಂದು ಪ್ರತ್ಯೇಕ ವಿಭಾಗದವರಿಗೆ ಮಾತ್ರವೇ ತನ್ನ ಅನುಗ್ರಹಗಳನ್ನು ಕರುಣಿಸುತ್ತಾ ಅವರಲ್ಲಿ ಮೇಲಿಂದ ಮೇಲೆ ಪ್ರವಾದಿಗಳನ್ನು ಕಳುಹಿಸಿ ಕೊಟ್ಟು ಅವರಿಗೆ ಆತ್ಮಿಕ ಜ್ಞಾನದ ಕವಾಟವನ್ನು ತೆರೆದುಕೊಟ್ಟನೆಂದೂ ಸೃಷ್ಟಿಗಳಲ್ಲಿ ಇತರ ವಿಭಾಗದವರನ್ನು ಅವನು ಏನೇನೂ ಗಮನಿಸದೆ ಅವರ ಆಧ್ಯಾತ್ಮಿಕ ಅಭಿವೃದ್ಧಿಯ ಬಾಗಿಲನ್ನು ಮುಚ್ಚಿ ಬಿಟ್ಟನೆಂದೂ ತಿಳಿಯುವುದು ಸಹ ತೀರಾ ಅಸಂಗತವಾಗಿರುತ್ತದೆ. ಈ ರೀತಿಯ ವಿಶ್ವಾಸಗಳು ದೇವರಿಂದ ನಿಯುಕ್ತರಾದ ಯಾವ ಪ್ರವಾದಿಗಳಿಂದಲೂ ಪ್ರಬೋಧಿಸಲ್ಪಟ್ಟಿರಲಿಲ್ಲ. ಆದರೂ ಇಂದಿನ ಕ್ರೈಸ್ತ ಜನಾಂಗದ ವಿಶ್ವಾಸವು ಇದೇ ರೀತಿಯಿದೆ ಎಂಬುದನ್ನು ನಿಮಗೆ ಒಪ್ಪದೆ ನಿರ್ವಾಹವಿಲ್ಲ. ಕ್ರೈಸ್ತ ಧರ್ಮೀಯರ ವಿಶ್ವಾಸ ಪ್ರಕಾರ, ಇಸ್ರಾಯೇಲನ ಕಾಲದ ಮೊದಲ್ಗೊಂಡು ಸೃಷ್ಟಿಕರ್ತನು ಕೇವಲ ಇಸ್ರಾಯೀಲ್ ಸಂತತಿಗಳಲ್ಲಿ ಮಾತ್ರವೇ ತನ್ನ ಪ್ರವಾದಿಗಳನ್ನು ಕಳುಹಿಸಿರುವನು. ಇತರ ಯಾವ ಜನಾಂಗದಲ್ಲೂ ಪ್ರವಾದಿ ನಿಯೋಗವುಂಟಾಗಲಿಲ್ಲವೆಂಬುದಾಗಿ ನೀವು ನಂಬುತ್ತೀರಿ. ಭಾರತೀಯರಿಗಾಗಲೀ ಚೈನಾದವರಿಗಾಗಲೀ ದೇವರ ಸಂದೇಶವನ್ನು ತಲಪಿ

ಸುವ ದಿವ್ಯ ದೂತರು ನಿಯೋಗಿಸಲ್ಪಟ್ಟುದಾಗಿ ನಂಬಲು ಕ್ರೈಸ್ತ ಮಿತ್ರರು ತಯಾರಿಲ್ಲ. ಇತರ ಜನಾಂಗಗಳೆಡೆಯಲ್ಲಿ ದಿವ್ಯ ದೂತರ ನಿಯೋಗವು ಉಂಟಾಗಲಿಲ್ಲವೆಂಬ ಈ ಮಿಥ್ಯಾವಿಶ್ವಾಸದ ಅಸಾಂಗತ್ಯವನ್ನು ದೇವರು ಪವಿತ್ರ ಖುರ್‌ಆನ್ ಮೂಲಕ ವ್ಯಕ್ತಪಡಿಸಿ, ಆ ಮೂಲಕ ತಾನು ಸರ್ವ ದಯಾಮಯನೂ ಕೃಪಾನಿಧಿಯೂ ಆಗಿರುವನೆಂಬ ಮಹತ್ವಪೂರ್ಣ ತತ್ವವನ್ನು ಲೋಕಕ್ಕೆ ತಿಳಿಸಿಕೊಟ್ಟಿದ್ದಾನೆ. ಪವಿತ್ರ ಖುರ್‌ಆನಿನ ಈ ಅಧ್ಯಾಪನೆಯ ಸತ್ಯತೆಯು ಅತ್ಯಂತ ಸ್ಪಷ್ಟವಿದೆ. ಯಾಕೆಂದರೆ, ಇದು ವಿವೇಕ ಸಮ್ಮತವಾಗಿದೆ ಮಾತ್ರವಲ್ಲ, ಲೋಕದ ವಿವಿಧ ಜನಾಂಗದವರೆಡೆಯಲ್ಲೂ ಇದರ ಸತ್ಯತೆಯು ಗೋಚರವಾಗುತ್ತಿದೆ. ಮಾನವ ಜನಾಂಗದ ವಿವಿಧ ವರ್ಗದವರಲ್ಲೂ ಲೋಕದ ಯಾವುದೇ ಮೂಲೆಯಲ್ಲಿ ವಾಸಿಸುವವರಾದರೂ ಅವರು ದೇವರ ಅಸ್ತಿತ್ವದಲ್ಲಿ ನಂಬಿಕೆಯಿಟ್ಟಿರುವುದನ್ನು ನಾವು ಕಾಣುತ್ತೇವೆ. ಪುರಾತನ ಕಾಲದಲ್ಲಿ ಯಾತ್ರಾ ಸೌಲಭ್ಯಗಳು ಇರದಿದ್ದ ಕಾರಣ ಬೇರೆ ಬೇರೆ ಜನಾಂಗದವರೂ ರಾಜ್ಯದವರೂ ಅನ್ಯೋನ್ಯ ಸಂಪರ್ಕವಿಲ್ಲದೆಯೂ ಪರಸ್ಪರ ತಿಳುವಳಿಕೆಯಿಲ್ಲದೆಯೂ ಇದ್ದರಷ್ಟೆ. ಹೀಗೆ ಅನ್ಯೋನ್ಯ ಯಾವುದೇ ರೀತಿಯ ಪರಿಚಯ ಇಲ್ಲದೇ ಇದ್ದಾ ಕೂಡ ಪ್ರತಿಯೊಂದು ರಾಜ್ಯದವರೂ ಅವರವರ ವಿಶ್ವಾಸ ಪ್ರಕಾರದ ಸರ್ವಶ್ರೇಷ್ಠವಾದೊಂದು ಪರಾಶಕ್ತಿಯಲ್ಲಿ ವಿಶ್ವಾಸ ಹೊಂದಿದ್ದುದನ್ನು ನಮಗೆ ಕಾಣಬಹುದು. ದೇವರ ಅಸ್ತಿತ್ವದ ಕುರಿತು ಯಾವ ವಿಧಾನದಿಂದ ಅವರಿಗೆ ತಿಳುವಳಿಕೆ ಲಭಿಸಿತು ಎಂಬುದನ್ನು ಸ್ವಲ್ಪ ಆಲೋಚಿಸಿ ನೋಡಿರಿ. ಈ ಆಸ್ತಿಕ್ಯ ಪ್ರಜ್ಞೆಯನ್ನು ದೇವರು ಸ್ವಯಂ ಅವನ ದಿವ್ಯ ಸಂದೇಶಗಳ ಮೂಲಕ ಜನರಲ್ಲಿ ಮೂಡಿಸಿರುವನೆಂಬುದಾಗಿ ನಂಬಲು ನಾವು ನಿರ್ಬಂಧಿತರಾಗುತ್ತೇವೆ. ಪರಮಾತ್ಮನ ಸ್ವಭಾವ–ಗುಣ–ಕರ್ಮಗಳ ಬಗ್ಗೆ ವಿವಿಧ ಜನರೆಡೆಯಲ್ಲಿ ನೆಲೆಸಿರುವ ವಿಶ್ವಾಸದಲ್ಲೂ ಒಂದು ಏಕರೂಪದ ಸಾಮ್ಯತೆಯನ್ನು ಕಾಣಲು ಸಾಧ್ಯವಿದೆ. ಇದು, ದೇವರು ಅವನ ದಿವ್ಯ ಪ್ರವಾದಿಗಳ ಮೂಲಕವಾಗಿ ತನ್ನನ್ನು ಅವರಿಗೆ ಪರಿಚಯಿಸುತ್ತಿದ್ದಾನೆಂಬುದಕ್ಕೆ ಪರ್ಯಾಪ್ತವಾದ ಪುರಾವೆಯಾಗಿದೆ.

ಸಂಕ್ಷಿಪ್ತವಾಗಿ, ಪೂರ್ವಕಾಲದ ಜನ ಸಮುದಾಯಗಳ ಅಂದಿನ ಸ್ಥಿತಿಗತಿಗನುಸಾರವಾಗಿ ಪ್ರತಿಯೊಂದು ವಿಭಾಗದವರೆಡೆಯಲ್ಲೂ ಪರಮಾತ್ಮನು ಬೇರೆ ಬೇರೆಯಾಗಿ ತನ್ನ ಪ್ರವಾದಿಗಳನ್ನು ನಿಯೋಜಿಸಿಕೊಂಡು ತನ್ನ ದಿವ್ಯ ಸಂದೇಶಗಳನ್ನು ಅವರ ಮೂಲಕ ತಿಳಿಸಿಕೊಡುತ್ತಾ ಜನರಲ್ಲಿ ದೇವರ ಬಗ್ಗೆ ಜ್ಞಾನವುಂಟಾಗುವಂತೆ ಮಾಡಿದನು. ಸರ್ವ ಮಾನವ ಕುಲವೂ ಒಂದೇ ಒಂದು ಧರ್ಮದಲ್ಲಿ ನೆಲೆಯೂರಬೇಕೆಂಬುದು ಪರಮಾತ್ಮನ ಯೋಜನೆಯಾಗಿತ್ತು. ಹಾಗೆ, ಕಾಲವು ಪಕ್ವವಾದಾಗ, ಇಸ್ಲಾಂ ಧರ್ಮವನ್ನು ಪರಿಪೂರ್ಣ ಧರ್ಮವನ್ನಾಗಿ ಮಾಡಿ, ಸರ್ವ ಮಾನವ ಜನಾಂಗಕ್ಕೂ ಅನುಸರಣಾಯೋಗ್ಯವಾದ ರೀತಿಯಲ್ಲಿ ಅದನ್ನು ನಿರ್ದೇಶಿಸಿದನು.

ಈ ರೀತಿಯಲ್ಲಿ, ಇತರ ಎಲ್ಲಾ ಪ್ರವಾದಿಗಳೂ ದಿವ್ಯ ಸಂದೇಶವಾಹಕರೂ ಆಯಾ ಕಾಲದ ಆವಶ್ಯಕತೆಗಳಿಗನುಸಾರವಾಗಿಯೂ ಆಯಾ ಪ್ರದೇಶದ ಜನ ವರ್ಗಕ್ಕೆ ಮಾತ್ರವಾಗಿಯೂ ಕಳುಹಿಸಲ್ಪಟ್ಟವರಾಗಿದ್ದು ಇಸ್ಲಾಂ ಧರ್ಮದ ಪ್ರವಾದಿಯಾದ ಹಝ್ರತ್ ಮುಹಮ್ಮದ್ ಪೈಗಂಬರರು ಸರ್ವ ಮಾನವ ಕುಲಕ್ಕೂ ಸಮಸ್ತ ಲೋಕಕ್ಕೂ ಅನ್ವಯವಾಗುವಂತಹ ಒಂದು ಪರಿಪೂರ್ಣ ಸಂದೇಶದೊಂದಿಗೆ ಆಗತರಾದರೆಂಬುದು ಇತರ ಪ್ರವಾದಿಗಳಿಗಿಂತಲೂ ಆ ಮಹಾತ್ಮರಿಗಿರುವ ಪ್ರಧಾನವಾದ ವೈಶಿಷ್ಟ್ಯವಾಗಿದೆ. ವಿಶ್ವ ವ್ಯಾಪಕವೂ ಸರ್ವ ಸಂಪೂರ್ಣವೂ ಆದ ಇಸ್ಲಾಂ ಸಂದೇಶದ ಕುರಿತು ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಈ ರೀತಿ ಹೇಳುತ್ತಾನೆ:

"ಈ ದಿನ ನಾನು ನಿಮ್ಮ ಧರ್ಮವನ್ನು ಸಂಪೂರ್ತಿಗೊಳಿಸಿರುವೆನು; ನಿಮ್ಮ ಮೇಲೆ ನನ್ನ ಅನುಗ್ರಹವನ್ನು ಪೂರ್ಣಗೊಳಿಸಿ ನಿಮಗೆ ಇಸ್ಲಾಂ ಧರ್ಮವನ್ನು ಪರಿಪೂರ್ಣಮತವಾಗಿ ನಾನು ತೃಪ್ತಿ ಪಟ್ಟಿರುವೆನು." (5:4)

"ನಿಶ್ಚಯವಾಗಿಯೂ ಅಲ್ಲಾಹನ ಬಳಿಯಲ್ಲಿ ಯಥಾರ್ಥ ಧರ್ಮವು ಇಸ್ಲಾಂ (ಸಂಪೂರ್ಣ ಶರಣಾಗತಿ) ಆಗಿರುತ್ತದೆ." (3:20)

ಮೇಲಿನ ಖುರ್‌ಆನ್ ಸೂಕ್ತಗಳಿಂದ ತಿಳಿದು ಬರುವುದೇನೆಂದರೆ, ದೇವರ ಬಳಿಯಲ್ಲಿ ಸ್ವೀಕಾರ ಯೋಗ್ಯವೂ ಪರಿಪೂರ್ಣವೂ ಆದ ಧರ್ಮವು ಇಸ್ಲಾಂ ಆಗಿರುವುದೆಂದೂ ಅದರ ಮೂಲಕ ಮಾತ್ರವೇ ಯಥಾರ್ಥವಾದ ಮೋಕ್ಷವು ಲಭಿಸುವುದೆಂದೂ ಆಗಿದೆ. ಯಾಕೆಂದರೆ, ಸಮರ್ಪಕವೂ ಪರ್ಯಾಪ್ತವೂ ಆದ ದೇವರ ಧರ್ಮಶಾಸ್ತ್ರಗಳು ಅದರಲ್ಲಿ ಮಾತ್ರವೇ ಒಳಗೊಂಡಿರುತ್ತವೆ. "ಇಸ್ಲಾಂ" ಎಂಬುದರ

ತಾತ್ಪರ್ಯ ಅಲ್ಲಾಹನ ಇಚ್ಛೆಗಳಿಗೆ ಸಂಪೂರ್ಣವಾಗಿ ತಲೆ ಬಾಗುವುದು ಎಂದು. ಎಲ್ಲಿಯ ವರೆಗೆ ಒಬ್ಬನು ಸಂಪೂರ್ಣವಾದ ಅನುಸರಣೆಯೊಂದಿಗೆ ದೈವಾಭೀಷ್ಟಗಳಿಗೆ ತಲೆಬಾಗುವುದಿಲ್ಲವೋ ಅದುವರೆಗೂ ಅವನು ಆ ಪರಮಾತ್ಮನ ಅಪಾರವಾದ ಅನುಗ್ರಹಗಳಿಗೆ ಪಾತ್ರನಾಗಲಾರ.

ಆದಿಕಾಲ ಮೊದಲ್ಗೊಂಡು ಹಝ್ರತ್ ಮುಹಮ್ಮದ್ ಪೈಗಂಬರರ ಕಾಲದ ವರೆಗೂ ದೈವನಿಯುಕ್ತರಾಗಿ ಆಗತರಾದ ಸಕಲ ಪ್ರವಾದಿಗಳ ಹಾಗೂ ದಿವ್ಯ ಸಂದೇಶ ವಾಹಕರ ಸತ್ಯತೆಯನ್ನು ಇಸ್ಲಾಂ ಧರ್ಮವು ಎತ್ತಿ ಹಿಡಿದಿದೆ ಎಂಬುದನ್ನು ಇಷ್ಟರಲ್ಲೇ ನೀವು ತಿಳಿದಿರುವಿರಾಗಿ ಭಾವಿಸುತ್ತೇನೆ. ಆ ರೀತಿ ಆಗತರಾದ ಎಲ್ಲಾ ದಿವ್ಯಾತ್ಮರನ್ನೂ ಅಲ್ಲಾಹನ ದೂತರೆಂಬುದಾಗಿ ನಂಬಲು ಇಸ್ಲಾಂ ಧರ್ಮವು ಅದರ ಅನುಯಾಯಿಗಳನ್ನು ನಿರ್ಬಂಧಿಸುತ್ತದೆ. ಮಾತ್ರವಲ್ಲ, ಆ ರೀತಿ ವಿಶ್ವಾಸ ಹೊಂದದವರನ್ನು ಮುಸ್ಲಿಮರಾಗಿ ಪರಿಗಣಿಸಲು ಸಾಧ್ಯವಿಲ್ಲವೆಂದು ಸಹ ಇಸ್ಲಾಂ ಧರ್ಮವು ಕಲಿಸುತ್ತದೆ. ಆದರೆ, ಹಝ್ರತ್ ಮುಹಮ್ಮದ್ ಪೈಗಂಬರರ ಆಗಮನದೊಂದಿಗೆ ಪರಮಾತ್ಮನು, ಪೂರ್ವ ಪ್ರವಾದಿಗಳ ಮೂಲಕ ಸ್ಥಾಪಿಸಲಾದ ಎಲ್ಲಾ ಧರ್ಮಶಾಸ್ತ್ರಗಳನ್ನೂ ರದ್ದುಗೊಳಿಸಿಕೊಂಡು ಅವುಗಳ ಬದಲಾಗಿ ಸಮಸ್ತ ಮಾನವ ಕುಲಕ್ಕೂ ಎಲ್ಲಾ ಕಾಲಕ್ಕೂ ಅನ್ವಯವಾಗುವಂತಹ ಒಂದು ಪರಿಪೂರ್ಣ ಧರ್ಮಶಾಸ್ತ್ರವನ್ನು ಜಾರಿಗೊಳಿಸಿರುವನು. ಇಸ್ಲಾಂ ಧರ್ಮಶಾಸ್ತ್ರವು ಎಲ್ಲಾ ಮಾನವರಿಗೂ ಆಚರಣಾಯೋಗ್ಯವೂ ಪ್ರಾಯೋಗಿಕವೂ ಆಗಿರುತ್ತದೆ; ಯಾವ ಜಾತಿ ವರ್ಗದವನೇ ಆದರೂ ಜೀವಿತದ ಯಾವುದೇ ರಂಗಕ್ಕೆ ಸಂಬಂಧಿಸಿದವನಾದರೂ ಸರಿಯೆ. ಅದೇ ರೀತಿಯಲ್ಲಿ ಇಸ್ಲಾಂ ಧರ್ಮದ ಅಧ್ಯಾಪನ ಯಾವ ಕಾಲದಲ್ಲೂ ಅನುಷ್ಠಾನ ಯೋಗ್ಯವಾದದ್ದಾಗಿರುತ್ತದೆ. ಯಾವ ರೀತಿಯಲ್ಲಿ ಅದು 14 ಶತಮಾನಗಳ ಹಿಂದೆ ಆಚರಣಾ ಯೋಗ್ಯವಾಗಿತ್ತೋ ಅದೇ ರೀತಿ ಇಂದು ಕೂಡ, ಇನ್ನು ಮುಂದೆ ಎಂದೆಂದಿಗೂ ಕೂಡ ಆಚರಣಾ ಯೋಗ್ಯವಾಗಿಯೇ ಇರುವುದು.

ಇಸ್ಲಾಂ ಧರ್ಮಶಾಸ್ತ್ರದ ಸಂದರ್ಭೋಚಿತ ಗುಣವನ್ನೂ ಸಾರ ಸಂಪೂರ್ಣತೆಯನ್ನೂ ಸಾರ್ವಲೌಕಿಕ ಸ್ವರೂಪವನ್ನೂ ವಿವರಿಸಲಿಕ್ಕಾಗಿ, ಆತ್ಮ ಸಂರಕ್ಷಣೆಯ ವಿಷಯದಲ್ಲಿ ಇಸ್ಲಾಂ ಧರ್ಮವು ನಿರ್ದೇಶಿಸುವ ವಿಧಿಗಳನ್ನೂ ತದ್ವಿಷಯದಲ್ಲಿ ಯೇಸು ಮಸೀಹಾ ನೀಡಿರುವ ಉಪದೇಶಗಳನ್ನೂ ತುಲನೆಮಾಡಿ ತೋರಿಸುವೆನು. ಅದಕ್ಕೆ ಮೊದಲಾಗಿ ಒಂದು ವಿಷಯ ಇಲ್ಲಿ ಸ್ಪಷ್ಟಪಡಿಸಲು ನಾನು ಬಯಸುತ್ತೇನೆ. ಅದೇನೆಂದರೆ, ಕ್ರೈಸ್ತ ಧರ್ಮ ತತ್ವಗಳ ನ್ಯೂನತೆಗಳನ್ನು ಎತ್ತಿ ತೋರಿಸುವ ಉದ್ದೇಶ ನನಗಿಲ್ಲ; ಬದಲಾಗಿ ಆ ತತ್ವೋಪದೇಶಗಳು ಮಸೀಹಾ ಅವತರಿಸಿದ ಆ ಕಾಲಕ್ಕೆ ಮಾತ್ರವೇ ಅನ್ವಯಿಸುವಂತಹ ತತ್ವಗಳಾಗಿದ್ದುವೆಂದು ತಿಳಿಸಿಕೊಡುವುದು ಮಾತ್ರವೇ ನನ್ನ ಉದ್ದೇಶವಾಗಿದೆ.

ಕ್ರೈಸ್ತ ಜನಸ್ತೋಮವು ನಂಬಿ ಬರುವಂತೆ ಕ್ರೈಸ್ತ ಧರ್ಮ ಸಿದ್ಧಾಂತಗಳು ಎಲ್ಲಾ ಕಾಲಕ್ಕೂ ಅನ್ವಯವಾಗುವಂತಹ ತತ್ವವಾಗಿದ್ದಲ್ಲಿ ಯೇಸು ಮಸೀಹಾರ ಪ್ರತಿಯೊಂದು ನಿರ್ದೇಶಗಳನ್ನು ಅದೇ ರೂಪದಲ್ಲಿ ಆಚರಿಸಬೇಕಾದುದು ಆ ಮಹಾತ್ಮರ ನಿಜವಾದ ಅನುಯಾಯಿಯಾಗಲು ಬಯಸುವ ಪ್ರತಿಯೊಬ್ಬ ಕ್ರೈಸ್ತ ವಿಶ್ವಾಸಿಯ ಕರ್ತವ್ಯವಾಗಿರಬೇಕಾಗಿದೆ. ಆದರೆ, ಒಬ್ಬನೇ ಒಬ್ಬ ಕ್ರೈಸ್ತ ಧರ್ಮೀಯನಿಗೂ ಅವುಗಳನ್ನು ಅನುಸರಿಸಿ ಜೀವಿಸಲು ಸಾಧ್ಯವಾಗಲಾರದೆಂಬುದು ಒಂದು ಯಥಾರ್ಥವಾಗಿದೆ. ಅವರು ಪರ್ವತದ ಮೇಲೆ ಮಾಡಿದ ಉಪದೇಶ ಭಾಷಣದಲ್ಲಿ ಈ ರೀತಿ ಹೇಳಿದ್ದಾರೆ:

"ಕಣ್ಣಿಗೆ ಪ್ರತಿಯಾಗಿ ಕಣ್ಣನ್ನು ಹಲ್ಲಿಗೆ ಪ್ರತಿಯಾಗಿ ಹಲ್ಲನ್ನು ತೆಗಿಸು ಅಂತ ಹೇಳಿಯದೆ ಎಂದು ಕೇಳಿದ್ದೀರಷ್ಟೆ. ಆದರೆ, ನಾನು ನಿಮಗೆ ಹೇಳುವದೇನೆಂದರೆ–ಕೆಡುಕನನ್ನು ಎದುರಿಸಬೇಡ. ಒಬ್ಬನು ನಿನ್ನ ಬಲಗೆನ್ನೆಯ ಮೇಲೆ ಹೊಡೆದರೆ ಅವನಿಗೆ ಮತ್ತೊಂದು ಕೆನ್ನೆಯನ್ನೂ ಒಡ್ಡು." (ಮತ್ತಾಯ 5:38, 39).

ಮೇಲಿನ ವಾಕ್ಯವು ಯಾವುದೇ ವ್ಯಾಖ್ಯಾನದ ಅಗತ್ಯವಿಲ್ಲದಂತೆ ಸುಸ್ಪಷ್ಟವಾಗಿದೆ. ನಾನು ನಿಮ್ಮೊಡನೆ ಕೇಳುತ್ತೇನೆ–ಇದು ಅನುಸರಣಾ ಯೋಗ್ಯವೂ ಸರ್ವಜನೀನವೂ ಆದ ತತ್ವವೇ? ಎರಡನೇ ಲೋಕ ಮಹಾಯುದ್ಧದ ವೇಳೆ ಜರ್ಮನ್ ಆಕ್ರಮಣದ ಸಂಭಾವ್ಯತೆಯನ್ನು ಭಯಪಟ್ಟು ರಕ್ಷಣಾತ್ಮಕವಾದ ಒಂದು ಸೇನಾ ವ್ಯೂಹವನ್ನು ಸಿದ್ಧಪಡಿಸುವ ಆವಶ್ಯಕತೆಯಿರಲಿಲ್ಲವೆಂಬುದಾಗಿ ನೀವು ಹೇಳುವಿರಾ? ಯಾವ ಪ್ರತಿರೋಧವನ್ನೂ ತೋರಿಸದೆ, ಜರ್ಮನ್ ಸೇನೆಯನ್ನು ಇಂಗ್ಲೆಂಡಿನ ಮೇಲೆ ಆಕ್ರಮಣ ನಡೆಸಲು ಬಿಟ್ಟುಬಿಡಬೇಕಾಗಿತ್ತೆಂಬುದು ನಿಮ್ಮ ಅಭಿಮತವೇ? ಆ ರೀತಿಯೇ ನಿಮ್ಮ ಅಭಿಪ್ರಾಯವೆಂದಾದರೆ, ನೀವು ನಿಮ್ಮ ಧರ್ಮಾದೇಶಗಳನ್ನು ಅನುಸರಿಸುವವರೇ ಆಗಿರುವಿರಿ. ಆದರೆ,

ನಿಮ್ಮ ಅಭಿಪ್ರಾಯ ಆ ರೀತಿಯಲ್ಲವೆಂದಾದರೆ ಈ ಅಧ್ಯಾಪನೆಯು ಸರ್ವತ್ರ ಅನುಕರಣೀಯವೆಂಬ ನೆಲೆಯಲ್ಲಿ ಅನುಸರಣಾ ಯೋಗ್ಯವಲ್ಲ ಎಂಬ ನನ್ನ ಅಭಿಪ್ರಾಯದೊಂದಿಗೆ ನೀವು ಕೂಡಾ ಸಹಮತವುಳ್ಳರಾಗಬೇಕು. ಅದೇ ರೀತಿ ಈ ತತ್ವೋಪದೇಶವು ಎಲ್ಲಾ ಕಾಲಕ್ಕೂ ಅನ್ವಯವಾಗುವಂತಹದ್ದಲ್ಲ ಎಂಬುದನ್ನೂ ನೀವು ಒಪ್ಪಬೇಕಾಗಿದೆ. ಕ್ರೈಸ್ತ ಸಾಮ್ರಾಜ್ಯಗಳಿಗೂ ಕ್ರೈಸ್ತೇತರ ರಾಷ್ಟ್ರಗಳಿಗೂ ಇಂದು ಎದುರಾಗುತ್ತಿರುವ ಸಂಕೀರ್ಣವಾದ ಅನೇಕ ಅಂತಾರಾಷ್ಟ್ರೀಯ ಸಮಸ್ಯೆಗಳಿಗೆ ಯೇಸು ಮಸೀಹಾ ಏನೊಂದು ಪರಿಹಾರವನ್ನೂ ಸೂಚಿಸಲಿಲ್ಲವೆಂಬುದು ಸುವ್ಯಕ್ತ. ಮಾತ್ರವಲ್ಲ ಅವರು ತನ್ನ ಅನುಯಾಯಿಗಳಿಗೆ ನೀಡಿದ ಉಪದೇಶವಾದರೋ ಅನುಸರಣಾಯೋಗ್ಯವಲ್ಲದ್ದೂ ಆಗಿರುತ್ತದೆ.

ಆದರೆ, ತತ್ಸಂಬಂಧವಾಗಿ ಇಸ್ಲಾಂ ಧರ್ಮವು ನಿರ್ದೇಶಿಸುವಂತಹ ಪರಿಹಾರ ಮಾರ್ಗವು ಸರ್ವ ಸಂಪೂರ್ಣವೂ ಎಲ್ಲಾ ಸಂದರ್ಭದಲ್ಲೂ ಪ್ರಯೋಗಾತ್ಮಕವೂ ಆಗಿದೆ. ಪ್ರವಾದಿ ಮೋಶೆ ಹಾಗೂ ಯೇಸು ಮಸೀಹಾ ನೀಡಿದಂತಹ ಉಪದೇಶಗಳು ಎರಡು ವಿರುದ್ಧ ತುದಿಗಳಲ್ಲಿ ನಿಲ್ಲುತ್ತವೆ. ಆ ಅಗ್ರಸ್ಥಿತ ಪ್ರಬೋಧನೆಗಳಲ್ಲಿ ಯಾವುದನ್ನು ಸ್ವೀಕರಿಸಲಿಕ್ಕೂ ಇಸ್ಲಾಂ ಧರ್ಮವು ನಿರ್ದೇಶಿಸುವುದಿಲ್ಲ. ಬದಲಾಗಿ, ಮನುಷ್ಯನು ಒಂದು ತೀರ್ಮಾನವನ್ನು ಕೈಗೊಳ್ಳುವಾಗ ತನ್ನ ವಿವೇಕ ಮತ್ತು ಬುದ್ಧಿಶಕ್ತಿಯನ್ನು ಉಪಯೋಗಿಸಿಕೊಳ್ಳಬೇಕೆಂದು ಅದು ನಿರ್ದೇಶಿಸುತ್ತದೆ. ಅಪರಾಧಿಯನ್ನು ಶಿಕ್ಷಿಸಬೇಕೇ? ಅಥವಾ ಆತನನ್ನು ಕ್ಷಮಿಸಬೇಕೇ? ಎಂಬುದಾಗಿ ವಿವೇಚಿಸಿ ನೋಡಿಕೊಳ್ಳಬೇಕೆಂದೂ ಅವನು ತನ್ನ ತಪ್ಪನ್ನು ತಿದ್ದಿಕೊಂಡು ಸರಿದಾರಿಗೆ ಬರುವ ನಿರೀಕ್ಷೆಯಿದ್ದಲ್ಲಿ ಆತನಿಗೆ ಕ್ಷಮೆ ನೀಡಬೇಕೆಂದೂ ಅಥವಾ ಕ್ಷಮಾಭಿಕ್ಷೆಯಿಂದ ಆತನಲ್ಲಿ ಯಾವ ಪರಿವರ್ತನೆಯೂ ಉಂಟಾಗಲಾರದೆಂದು ತೋರುವುದಿದ್ದಲ್ಲಿ ಕೆಡುಕನ್ನು ತಡೆಗಟ್ಟಲು ಪರ್ಯಾಪ್ತವಾದಂತಹ ಶಿಕ್ಷೆಯಿಂದ ಆತನನ್ನು ದಂಡಿಸಬೇಕೆಂದೂ ಪವಿತ್ರ ಖುರ್‌ಆನ್ ಹೇಳುತ್ತದೆ. ಅದು ಈ ರೀತಿಯಿದೆ:

"ಕೆಡುಕಿಗೆ ತಕ್ಕ ಶಾಸ್ತಿ ಅದರ ಸಮಾನವಾದ ಶಿಕ್ಷೆಯಾಗಿದೆ; ಆದರೆ, ಯಾರು ಕ್ಷಮೆಯನ್ನು ನೀಡಿ ಆ ಮೂಲಕ ಒಳಿತನ್ನುಂಟುಮಾಡುವರೋ ಅವರಿಗೆ ಅಲ್ಲಾಹನು ಸತ್ಫಲವನ್ನು ನೀಡುವನು. ನಿಸ್ಸಂದೇಹವಾಗಿಯೂ ಅಲ್ಲಾಹನು ಅಕ್ರಮಿಗಳನ್ನು ಪ್ರೀತಿಸುವುದಿಲ್ಲ." (42 : 41).

ಮತಸ್ವಾತಂತ್ರ್ಯವೂ ಜೀವಿತ ಸ್ವಾತಂತ್ರ್ಯವೂ ಭಂಗಗೊಳ್ಳುವಾಗ ಆತ್ಮ ಸಂರಕ್ಷಣೆಗಾಗಿ ಆಯುಧವನ್ನು ಬಳಸಲು ಇಸ್ಲಾಂ ಧರ್ಮವು ಅನುಮತಿ ನೀಡುತ್ತದೆ. ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹು ಹೇಳುತ್ತಾನೆ:

"ಮರ್ದನ ಇಲ್ಲದಾಗುವ ವರೆಗೂ ಧರ್ಮವು ಅಲ್ಲಾಹನಿಗಾಗಿ (ಸ್ವೀಕರಿಸಲ್ಪಡುವಂತೆ) ಆಗುವ ವರೆಗೂ (ಅಂದರೆ ಧರ್ಮ ವಿಶ್ವಾಸಗಳು ಇತರರ ನಿರ್ಬಂಧಕ್ಕೆ ಒಳಪಟ್ಟದ್ದಾಗಿರದೆ ಸಂಪೂರ್ಣ ಮತ ಸ್ವಾತಂತ್ರ್ಯ ಇರಬೇಕೆಂದು ಅರ್ಥ) ನೀವು ಅವರೊಡನೆ (ಧರ್ಮ ವ್ಯತ್ಯಾಸದ ಕಾರಣದಿಂದ ನಿಮ್ಮೊಡನೆ ಯುದ್ಧಕ್ಕೆ ಬರುವವರೊಡನೆ) ಯುದ್ಧ ಮಾಡಿರಿ" (8 : 40).

ಹೀಗೆ, ಇಸ್ಲಾಂ ಧರ್ಮವು ಈ ವಿಷಯದಲ್ಲಿ ಪರಿಪೂರ್ಣವೂ ಪ್ರಾಯೋಗಿಕವೂ ಅನುಕರಣೀಯವೂ ಆದ ತತ್ವೋಪದೇಶಗಳನ್ನು ನೀಡುತ್ತದೆ. ಮಿತ್ರ ರಾಷ್ಟ್ರಗಳು ಫ್ಯಾಸಿಸ್ಟ್ ಸೇನೆಯ ಆಕ್ರಮಣ ವಲಯದಲ್ಲಿ ಸಿಲುಕಿದಾಗ ಪವಿತ್ರ ಖುರ್‌ಆನಿನ ಅರ್ಥಗರ್ಭಿತವಾದ ಈ ಅಧ್ಯಾಪನವನ್ನು ಸ್ವೀಕರಿಸದೆ ಅವರಿಗೆ ಗತ್ಯಂತರವಿರಲಿಲ್ಲ. ಹಾಗೆ, ಅವರು ತಮ್ಮ ಕೃತ್ಯದ ಮೂಲಕ ಯೇಸು ಮಸೀಹಾರ ತತ್ವೋಪದೇಶಗಳು ಕಾಲಬಾಹಿರವಾಗಿವೆಯೆಂದೂ, ಕೆಡುಕನ್ನು ಯಾವತ್ತೂ ವಿರೋಧಿಸಬಾರದೆಂಬ ಅವರ ಉಪದೇಶವು ಲೋಕದ ಇಂದಿನ ಸಮಸ್ಯೆಗಳಿಗೆ ಪರಿಹಾರವಲ್ಲವೆಂದೂ ತೋರಿಸಿಕೊಟ್ಟಿದ್ದಾರೆ.

ಇಸ್ಲಾಂ ಧರ್ಮದ ಮೇಲೆ ಆರೋಪಿಸಲಾಗುವ ಹಾಗೂ ಕ್ರೈಸ್ತರೆಡೆಯಲ್ಲಿ ಪ್ರಚಾರದಲ್ಲಿರುವ ಒಂದು ತಪ್ಪು ತಿಳುವಳಿಕೆಯನ್ನು ಸಹ ಈ ಸಂದರ್ಭದಲ್ಲಿ ನೀಗಿಸಬೇಕಾದುದು ಅಗತ್ಯವೆಂದು ಭಾವಿಸುತ್ತೇನೆ. ಆ ವಿಶ್ವಾಸವನ್ನು ಕ್ರೈಸ್ತ ಮಿಶನರಿಗಳು ಇಸ್ಲಾಂ ಧರ್ಮದ ವಿರುದ್ಧವಾಗಿ ಕುಪ್ರಚಾರ ನಡೆಸಲು ಒಂದು ಆಯುಧವಾಗಿ ಬಳಸುವುದು ಕಂಡು ಬರುತ್ತಿದೆ. ಅದೇನೆಂದರೆ, ಇಸ್ಲಾಂ ಧರ್ಮವು ಖಡ್ಗ ಬಲದಿಂದ ಹರಡಿದ ಧರ್ಮವೆಂದೂ ಅನ್ಯರನ್ನು ಬಲಾತ್ಕಾರದಿಂದ ಇಸ್ಲಾಂ ಧರ್ಮಕ್ಕೆ ಮತಾಂತರಿಸುವ ಆಕ್ರಮಣಕಾರಿ ಜಿಹಾದ್–ಧರ್ಮಯುದ್ಧ–ನಡೆಸಲು ಅನುಮತಿ ನೀಡಿರುವ ಒಂದು ಧರ್ಮ ವ್ಯವಸ್ಥೆ ಅದಾಗಿದೆಯೆಂದೂ ಆರೋಪಿಸಲಾಗುತ್ತಿದೆ. ಈ ಸಂಬಂಧವಾದ ಇಸ್ಲಾಂ

## ಇಸ್ಲಾಮಿನಲ್ಲಿ ಪ್ರವಾದಿತ್ವ-3

# ಲಾ ನಬಿಯ್ಯ ಬಅದೀ—ಅನ ಆಖಿರುಲ್ ಅಂಬಿಯಾ

★ ಎಂ. ಪಿ. ಇಬ್ರಾಹಿಂ

ಹಜ್ರತ್ ಮುಹಮ್ಮದ್ ಪೈಗಂಬರ್ (ಸ)ರವರ ಆವಿರ್ಭಾವದ ಬಳಿಕ ಇನ್ನು ಯಾರೂ ಪ್ರವಾದಿ ಬರಲಾರರೆಂದು ಸಾಬೀತು ಪಡಿಸಲು "ಪ್ರವಾದಿತ್ವ ಪರಿಸಮಾಪ್ತಿ" ವಾದಿಗಳು ಸಾಮಾನ್ಯವಾಗಿ ಕೆಲವು ಹದೀಸ್ ವಚನಗಳನ್ನು ಉದಾಹರಿಸುವುದಿದೆ. ಈ ವಿಷಯದಲ್ಲಿ ಇಸ್ಲಾಂ ಧರ್ಮದ ಮೂಲಭೂತ ಆಧಾರ ಗ್ರಂಥವಾದ ಪವಿತ್ರ ಖುರ್‌ಆನಿನಿಂದ ಸಾಕ್ಷ್ಯಾಧಾರಗಳನ್ನು ಉಲ್ಲೇಖಿಸಲು ಅವರಿಗೆ ಸಾಧ್ಯವಾಗುವುದಿಲ್ಲ. ಆದರೆ, ಹಜ್ರತ್ ಮುಹಮ್ಮದ್ ಪೈಗಂಬರ್ (ಸ)ರವರನ್ನು ಖಾತಮುನ್ನಬಿಯ್ಯೀನ್ ಎಂಬುದಾಗಿ ಪವಿತ್ರ ಖುರ್‌ಆನಿನಲ್ಲಿ ಗೌರವಿಸಿ ಹೇಳಿದ ಒಂದು ವಚನಕ್ಕೆ ಅಂತ್ಯಪ್ರವಾದಿಯೆಂಬ ತಪ್ಪು ಅರ್ಥವನ್ನು ಕೆಲವರು ನೀಡುವುದಿದೆ. ಆದರೆ, ಖಾತಮುನ್ನಬಿಯ್ಯೀನ್ ಎಂಬುದರ ನಿಜವಾದ ಅರ್ಥವು ಅಂತ್ಯಪ್ರವಾದಿಯೆಂದಲ್ಲವೆಂದೂ ಅದು ಯಾವ ರೀತಿಯಲ್ಲೂ ಪ್ರವಾದಿತ್ವದ ಪರಿಸಮಾಪ್ತಿಗೆ ಆಧಾರವಾಗುವುದಿಲ್ಲವೆಂಬುದರ ಬಗ್ಗೆಯೂ ಹಿಂದಿನ ಲೇಖನದಲ್ಲಿ ವಿವರಿಸಿದ್ದೇನೆ. ಖಾತಮುನ್ನಬಿಯ್ಯೀನ್ ಎಂಬುದರ ಸರಿಯಾದ ಅರ್ಥವೂ ವ್ಯಾಖ್ಯಾನವೂ ಏನೆಂಬುದನ್ನು ಸಹ ವಾಚಕರು ಆ ಲೇಖನದಿಂದ ತಿಳಿದಿರಬಹುದು.

ಈ ಲೇಖನದ ಮೂಲಕ ತದ್ವಿಷಯದಲ್ಲಿ ಉಲ್ಲೇಖಿಸಲ್ಪಡುವಂತಹ ಹದೀಸ್‌ಗಳ ಬಗ್ಗೆ ವಿವರಿಸಬಯಸುತ್ತೇವೆ. ಆದರೆ, ಅದಕ್ಕಿಂತಲೂ ಮೊದಲಾಗಿ ಒಂದು ಪ್ರಾಮುಖ್ಯ ವಿಷಯವನ್ನು ಇಲ್ಲಿ ವಿವರಿಸಬೇಕಾಗಿದೆ. ಅದೇನೆಂದರೆ,

---

(16ನೇ ಪುಟದಿಂದ)

ಧರ್ಮದ ಆದೇಶಗಳನ್ನು ನಾನು ಬಹಳ ಅವಧಾನತೆಯಿಂದ ಅಧ್ಯಯನ ನಡೆಸಿರುವೆನು. ನಾನು ಮನಗಂಡಂತೆ ಇದಕ್ಕಿಂತಲೂ ಮಿಗಿಲಾದ ಸತ್ಯಕ್ಕೆ ದೂರವಾದ ಮಿಥ್ಯಾರೋಪವು ಬೇರೆ ಇರಲಾರದು. ಈ ದುಷ್ಪ್ರೇರಿತ ಪ್ರಚಾರಕ್ಕೆ ಕಾರಣ ಕರ್ತರಾದವರು ಒಂದೋ ಇಸ್ಲಾಂ ಧರ್ಮದೊಡನಿರುವ ವೈರ ಬುದ್ಧಿಯಿಂದ ಈ ರೀತಿಯ ಕುಪ್ರಚಾರವನ್ನು ಹಬ್ಬಿಸುತ್ತಿದ್ದಾರೆ, ಅಥವಾ ಇಸ್ಲಾಂ ಧರ್ಮದ ಮನೋಜ್ಞವಾದ ಅಧ್ಯಾಪನಗಳ ಕುರಿತು ಅವರು ತಿಳುವಳಿಕೆಯಿಲ್ಲದವರಾಗಿರಬಹುದು. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಈ ರೀತಿ ಪ್ರಸ್ತಾಪಿಸಿರುವನು:

"ಲಾ ಇಕ್‌ರಾಹ ಫಿದ್ದೀನ್"—
"ಧರ್ಮದಲ್ಲಿ ಯಾವುದೇ ಬಲಾತ್ಕಾರವಿಲ್ಲ" (2:257)

ಮೇಲೆ ವಿವರಿಸಿದ ಪ್ರಕಾರ ಇಸ್ಲಾಂ ಧರ್ಮವು ಆತ್ಮಸಂರಕ್ಷಣಾರ್ಥವಾಗಿ ಯುದ್ಧ ಮಾಡಲು ಅನುಮತಿ ನೀಡುತ್ತಿದೆಯಾದರೂ ಧರ್ಮವನ್ನು ಸ್ವೀಕರಿಸುವ ವಿಷಯದಲ್ಲಿ ಯಾವ ಪ್ರಕಾರದ ಬಲಾತ್ಕಾರವನ್ನೂ ಅದು ಒಪ್ಪುವುದಿಲ್ಲ. ಬದಲಾಗಿ, ಆ ರೀತಿ ಧರ್ಮಕಾರ್ಯಗಳಲ್ಲಿ ಬಲಾತ್ಕಾರ ಹೇರುವುದನ್ನು ಅದು ಶಕ್ತಿಯುತವಾಗಿ ವಿರೋಧಿಸುತ್ತದೆ.

ಇಸ್ಲಾಂ ಧರ್ಮದ ಧರ್ಮಗ್ರಂಥವಾದ ಪವಿತ್ರ ಖುರ್‌ಆನ್ ಮತ್ತೊಂದೆಡೆ ಈ ರೀತಿ ಹೇಳುತ್ತದೆ:

"ನಿಶ್ಚಯವಾಗಿಯೂ ನ್ಯಾಯ, ಪರೋಪಕಾರ ಹಾಗೂ ಸಂಬಂಧಿಕರಿಗೆ ನೀಡಬೇಕಾದ ದಾನ ಧರ್ಮಗಳ ಕುರಿತು ಅಲ್ಲಾಹು ನಿಮ್ಮೊಡನೆ ಆಜ್ಞಾಪಿಸಿರುತ್ತಾನೆ; ಮತ್ತು ಅಶ್ಲೀಲ ಕಾರ್ಯಗಳನ್ನೂ ಕೆಡುಕು ಮತ್ತು ಅನ್ಯಾಯವನ್ನೂ ಅತಿಕ್ರಮಣಗಳನ್ನೂ ನಿಮಗೆ ನಿರೋಧಿಸಿರುತ್ತಾನೆ." (16:91)

ಇಸ್ಲಾಂ ಧರ್ಮದ ತತ್ವೋಪದೇಶಗಳನ್ನು ಪ್ರತಿಬಿಂಬಿಸುವ ಶಾಂತ ಸುಂದರವೂ ಸರಳ ಕೋಮಲವೂ ಆದ ಈ ವಾಕ್ಯಗಳು ವಿವರಣೆ ಅಗತ್ಯವಿಲ್ಲದಂತೆ ಸ್ಪಷ್ಟವಾಗಿವೆ. ಈ ರೀತಿಯ ಪಾವನವಾದ ಅಸಂಖ್ಯಾತ ತತ್ವೋಪದೇಶಗಳು ಪವಿತ್ರ ಖುರ್‌ಆನಿನಲ್ಲಿ ಇರುವಾಗ, ಇಸ್ಲಾಂ ಧರ್ಮವು ಅನ್ಯ ಮತಸ್ಥರ ಮೇಲೆ ಆಕ್ರಮಣ ಮತ್ತು ದಬ್ಬಾಳಿಕೆ ನಡೆಸುವಂತಹ ಒಂದು "ಜಿಹಾದಿ"ಗೆ ಆದೇಶಿಸುತ್ತದೆಯೆಂದು ನೀತಿಪ್ರಜ್ಞೆಯಿರುವ ಯಾರಾದರೂ ಆರೋಪಿಸುವರೋ ? ● (ಇನ್ನೂ ಇದೆ)

ಹಝ್ರತ್ ಮುಹಮ್ಮದ್ ಪೈಗಂಬರ್ (ಸ)ರವರು ತನ್ನ ನಂತರ "ಮಸೀಹಿಬ್ನು ಮರ್‌ಯಂ" ಬರುವರೆಂಬುದಾಗಿ ಭವಿಷ್ಯ ನುಡಿದಿರುವರು. ಈ ಭವಿಷ್ಯವಾಣಿಯು ತನ್ನ ನಂತರ ಪ್ರವಾದಿಯಿಲ್ಲವೆಂದು ಪೈಗಂಬರರು ಹೇಳಿದುದಾಗಿ ತೋರಿಸಲ್ಪಡುವ ವಚನಗಳಿಗಿಂತಲೂ ಹೆಚ್ಚು ಶಕ್ತಿಯುತವೂ ಪ್ರಬಲವೂ ಆಗಿದೆಯೆಂಬುದು ಹದೀಸ್ ಗ್ರಂಥಗಳನ್ನು ಓದುವವರಿಗೆಲ್ಲಾ ತಿಳಿದಿರುವ ಒಂದು ವಿಷಯವಾಗಿದೆ· ಮಾತ್ರವಲ್ಲ ಮಸೀಹರ ಆವಿರ್ಭಾವದ ಬಗ್ಗೆ ಭವಿಷ್ಯ ನುಡಿದಿರುವ ಪೈಗಂಬರರ ವಚನಗಳು, ನಂತರ ಪ್ರವಾದಿಯಿಲ್ಲವೆಂಬುದಾಗಿ ಸೂಚಿಸಲ್ಪಡುವ ವಚನಗಳಿಗಿಂತಲೂ ಗಣನೆಯಲ್ಲಿ ಸಹ ಬಹಳ ಹೆಚ್ಚು ಇವೆ. ಈ ಭವಿಷ್ಯ ವಚನವು ಕಾಣಲ್ಪಡದಂತಹ ಒಂದೇ ಒಂದು ಹದೀಸ್ ಗ್ರಂಥವೂ ಕೂಡ ಇಲ್ಲವೆಂದೇ ಹೇಳಬಹುದು. ಹದೀಸ್ ಗ್ರಂಥಗಳ ಪೈಕಿ ಅತ್ಯಂತ ಹೆಚ್ಚು ಮಹತ್ವದ್ದೆಂದು ಗಣಿಸಲ್ಪಡುವ "ಮುಅತ್ತ ಇಮಾಂ ಮಾಲಿಕ್", "ಸಹೀಹುಲ್ ಬುಖಾರಿ", "ಸಹೀಹುಲ್ ಮುಸ್ಲಿಂ" ಇತ್ಯಾದಿ ಹದೀಸ್ ಗ್ರಂಥಗಳಲ್ಲೂ ಸಾಮಾನ್ಯವಾಗಿ ಇತರ ಎಲ್ಲಾ ಹದೀಸ್ ಗ್ರಂಥಗಳಲ್ಲೂ ಮಸೀಹಿಬ್ನು ಮರ್‌ಯಂ ಬರುವರೆಂಬುದಾಗಿ ಪೈಗಂಬರರು ನುಡಿದಿರುವ ವಚನಗಳು ಉಲ್ಲೇಖಿಸಲ್ಪಟ್ಟಿರುವುದಾಗಿ ಕಾಣಬರುತ್ತದೆ. ಬರಲಿರುವ ಆ ಮಹಾತ್ಮರ ಕುರಿತು "ಈಸಬ್ನು ಮರ್‌ಯಂ" ಎಂದು ಹೇಳಲ್ಪಟ್ಟಿರುವುದರಿಂದಲೇ ಆ ಪುಣ್ಯಾತ್ಮರು ಒಬ್ಬ ಪ್ರವಾದಿಯಾಗಿರುವರೆಂದು ತಿಳಿದುಬರುವುದು. ಅಲ್ಲದೆ, ಸಹೀಹ್ ಮುಸ್ಲಿಂ, ಜಾಮಿಉತ್ತಿರ್‌ಮಿದಿ, ಮುಸ್ನದ್ ಅಹ್ಮದ್ ಎಂಬೀ ಹದೀಸ್ ಗ್ರಂಥಗಳಲ್ಲಿ ಬರಲಿರುವ ಆ ಮಸೀಹ್ ಪ್ರವಾದಿಯಾಗಿರುವರೆಂದೂ ಸ್ಪಷ್ಟವಾಗಿ ಹೇಳಲ್ಪಟ್ಟಿದೆ. ಒಬ್ಬ ಮಸೀಹರ ಆಗಮನದ ಕುರಿತು ಹಝ್ರತ್ ಪೈಗಂಬರರು ಎಷ್ಟು ಗಂಭೀರವಾಗಿ ಭವಿಷ್ಯ ನುಡಿದಿರುವರೆಂಬುದನ್ನು ತೋರಿಸಲು ಇಮಾಂ ಬುಖಾರಿ ಮತ್ತು ಇಮಾಂ ಮುಸ್ಲಿಂ ಇವರ ಸಹೀಹ್‌ಗಳಲ್ಲಿ ಉಲ್ಲೇಖಿತವಾದ ಒಂದು ವಚನವನ್ನು ಮಾತ್ರ ಇಲ್ಲಿ ಉದ್ಧರಿಸುತ್ತೇನೆ. ಹಝ್ರತ್ ಮುಹಮ್ಮದ್ ಪೈಗಂಬರರು (ಸ) ಈ ರೀತಿ ಹೇಳಿದರು:

ವಲ್ಲದೀ ನಫ್‌ಸೀ ಬಿಯದಿಹೀ ಲಯೂಶಿಕನ್ನ ಅನ್ ಯನ್‌ಝಿಲ ಫೀಕುಂ ಇಬ್ನು ಮರ್‌ಯಮ

"ನನ್ನ ಪ್ರಾಣವು ಯಾರೊಬ್ಬನ ಹಿಡಿತದಲ್ಲಿದೆಯೋ ಆ ಪರಮಾತ್ಮನ ಆಣೆಗೂ, ಖಂಡಿತವಾಗಿಯೂ ನಿಮ್ಮಲ್ಲಿ ಇಬ್ನು ಮರ್‌ಯಂ ಆವಿರ್ಭವಿಸುವರು" (ಬುಖಾರಿ, ಮುಸ್ಲಿಂ)

ಐದೋ ಆರೋ ವಚನಗಳಲ್ಲಿ ಮಾತ್ರ ಪೈಗಂಬರರಿಗೆ ನಂತರ ಪ್ರವಾದಿಯಿಲ್ಲವೆಂಬುದಾಗಿ ಹೇಳಲ್ಪಟ್ಟಿರುವುದನ್ನು ಆಸ್ಪದ ಮಾಡಿಕೊಂಡು ಇನ್ನು ಯಾವ ತರದ ಪ್ರವಾದಿಯ ಆಗಮನವೂ ಉಂಟಾಗಲಾರದೆಂದು ಹೇಳುವುದು ನ್ಯಾಯೋಚಿತವಾಗುವುದಾದರೆ, ಎಪ್ಪತ್ತಕ್ಕಿಂತಲೂ ಹೆಚ್ಚು ಹದೀಸ್ ವಚನಗಳಲ್ಲಿ ಮಸೀಹ್ ಬರುವರೆಂಬುದಾಗಿಯೂ ಸಹೀಹ್ ಮುಸ್ಲಿಂ ಮೊದಲಾದ ಗ್ರಂಥಗಳಲ್ಲಿ ಆ ಬರಲಿರುವ ಮಸೀಹ್ ಪ್ರವಾದಿಯಾಗಿರುವರೆಂಬುದಾಗಿಯೂ ಹೇಳಲ್ಪಟ್ಟಿರುವುದರಿಂದ ಪೈಗಂಬರರಿಗೆ ನಂತರವೂ ಪ್ರವಾದಿಗಳ ಆಗಮನವುಂಟಾಗುವುದೆಂಬುದಾಗಿ ಹೇಳುವುದು ಅದಕ್ಕಿಂತಲೂ ಹೆಚ್ಚು ನ್ಯಾಯಯುಕ್ತವಾಗಿರುತ್ತದೆ. ಪ್ರಬಲವೂ ಪ್ರಮಾಣ ಯೋಗ್ಯವೂ ಆದ ಈ ಭವಿಷ್ಯವಾಣಿಗಳಿಂದ ಪೈಗಂಬರರ ನಂತರವೂ ಪ್ರವಾದಿಗಳು ಬರುವರೆಂದು ಸ್ಪಷ್ಟವಾಗಿ ತಿಳಿದು ಬರುವ ಕಾರಣದಿಂದ ತನ್ನ ನಂತರ ಪ್ರವಾದಿಯಿಲ್ಲವೆಂದು ಮುಹಮ್ಮದ್ ಪೈಗಂಬರರು ಹೇಳಿದ್ದರೂ ಸಹ, ಅದು ಬಹುಶಃ ಒಂದು ಪ್ರತ್ಯೇಕ ತರದ ಪ್ರವಾದಿಗಳ ಆಗಮನದ ಕುರಿತು ಹೇಳಿದ್ದೆಂಬುದಾಗಿ ನಾವು ತಿಳಿದುಕೊಳ್ಳಬೇಕಾಗಿದೆ. ಇಲ್ಲವಾದರೆ, ಪರಸ್ಪರ ವಿರುದ್ಧವಾಗಿ ಕಂಡು ಬರುವ ಈ ವಚನಗಳ ಪೈಕಿ ಹೆಚ್ಚು ಪ್ರಾಮಾಣ್ಯವಾಗಿರುವ ಮಸೀಹರ ಆವಿರ್ಭಾವದ ಕುರಿತಿರುವ ಹದೀಸ್‌ಗಳನ್ನು ಮಾತ್ರವೇ ನಾವು ಸ್ವೀಕರಿಸಬೇಕು. ಸಂಕ್ಷಿಪ್ತವಾಗಿ ಹೇಳುವುದಾದರೆ, ತನ್ನ ಸಮುದಾಯದಲ್ಲಿ ಪ್ರವಾದಿಯಾಗಿರುವ ಒಬ್ಬ ಮಸೀಹರ ಆಗಮನವು ಉಂಟಾಗುವುದೆಂದು ಅತ್ಯಂತ ಸ್ಪಷ್ಟವಾಗಿಯೂ ಶಕ್ತಿಯುತವಾಗಿಯೂ ಗಂಭೀರವಾಗಿಯೂ ಪೈಗಂಬರರು ಹೇಳಿರುವಾಗ, ತನ್ನ ನಂತರ ಪ್ರವಾದಿಯಿಲ್ಲವೆಂಬುದಾಗಿ ಆ ಪುಣ್ಯಾತ್ಮರು ಹೇಳಿರುವುದರ ನಿಜವಾದ ಅರ್ಥವು ಖಂಡಿತವಾಗಿಯೂ ತನ್ನ ನಂತರ ಯಾವ ತರದ ಪ್ರವಾದಿಯೂ ಯಾವತ್ತೂ ಬರಲಾರರು ಎಂಬ ಅರ್ಥದಲ್ಲಾಗಲು ಎಂದಿಗೂ ಸಾಧ್ಯವಿಲ್ಲ. ಆ ಪ್ರವಾದಿ ಶ್ರೇಷ್ಠರು ಖಾತಮುನ್ನಬಿಯ್ಯೀನ್ (ಪ್ರವಾದಿಗಳ ಮುದ್ರೆ)ಆಗಿರುವುದರಿಂದ 'ಅವರ ನಂತರ ಅವರ ಶಿಷ್ಯತ್ವವನ್ನು ಸ್ವೀಕರಿಸದ ಅವರ ಅನುಗಾಮಿಯಲ್ಲದ ಪ್ರವಾದಿಗಳು ಬರಲಾರರು' ಎಂದು ಮಾತ್ರವೇ ಆ ವಚನವನ್ನು ವ್ಯಾಖ್ಯಾನಿಸಲು ಸಾಧ್ಯವಿದೆ.

ಪೈಗಂಬರರ ವಚನಗಳ ನಿರೂಪಣೆಯೇ ಇದನ್ನು ಸ್ಪಷ್ಟಪಡಿಸುತ್ತದೆ. ತಾನು ಕೊನೆಯ ಪ್ರವಾದಿಯಾಗಿರುವೆನೆಂದು ಪೈಗಂಬರರು ಹೇಳಿರುವ ವಚನ ಈ ರೀತಿಯಿದೆ:

ಇನ್ನೀ ಆಖಿರುಲ್ ಅಂಬಿಯಾಇ ವ ಇನ್ನ
ಮಸ್‌ಜಿದೀ ಆಖಿರುಲ್ ಮಸಾಜಿದ್

"ನಾನು ಕೊನೆಯ ಪ್ರವಾದಿಯಾಗಿರುವೆನು,
ನನ್ನ ಮಸೀದಿಯು ಕೊನೆಯ ಮಸೀದಿಯಾಗಿದೆ"

(ಮುಸ್ಲಿಂ)

ಇಲ್ಲಿ ನಾವು ಯೋಚಿಸಬೇಕಾಗಿರುವುದು, ಯಾವ ರೀತಿಯಲ್ಲಿ ಮುಹಮ್ಮದ್ ಪೈಗಂಬರರು ತನ್ನನ್ನು ಅಂತ್ಯ ಪ್ರವಾದಿಯೆಂದು ಹೇಳಿರುವರೋ ಅದೇ ರೀತಿಯಲ್ಲಿ ಆ ಮಹಾತ್ಮರು ಮದೀನದಲ್ಲಿ ನಿರ್ಮಿಸಿದ ತನ್ನ ಮಸೀದಿಯನ್ನು ಕೊನೆಯ ಮಸೀದಿಯೆಂದು ಹೇಳಿರುವರು. ಈಗ, ಮುಹಮ್ಮದ್ (ಸ)ರವರು ಮದೀನಾ ನಗರದಲ್ಲಿ ನಿರ್ಮಿಸಿದ ಮಸೀದಿಯ ನಂತರ ಈ ಲೋಕದ ಅವಸಾನದ ಪರ್ಯಂತ ಬೇರೆ ಮಸೀದಿ ಉಂಟಾಗಲಾರದೆಂದೂ ಮಸೀದಿಗಳನ್ನು ನಿರ್ಮಿಸುವ ಕಾರ್ಯವು ಅಂದಿನಿಂದಲೇ ಸ್ಥಗಿತಗೊಂಡಿದೆಯೆಂದೂ ಯಾರಾದರೂ ಹೇಳುವುದಿದ್ದರೆ ಅದು ತಿಳಿಗೇಡಿತನವಾಗಬಹುದು. ಕಾರಣ, ಮುಹಮ್ಮದ್ ಪೈಗಂಬರರ ನಂತರ ಮುಸ್ಲಿಂ ಜಗತ್ತು ಅದೆಷ್ಟೋ ಮಸೀದಿಗಳನ್ನು ನಿರ್ಮಾಣ ಮಾಡಿದೆ. ಎಷ್ಟರ ವರೆಗೆಂದರೆ, ಮಸೀದಿಗಳ ಬಾಹುಳ್ಯದಿಂದ ಕೆಲವು ಕಡೆ ಅವುಗಳಲ್ಲಿ ನಮಾಜು (ಪ್ರಾರ್ಥನೆ) ಮಾಡಲು ಜನರೇ ಇರುವುದಿಲ್ಲ. ಈ ರೀತಿಯಾಗಿ ಹಜ್ರತ್ ಪೈಗಂಬರರ ನಂತರ ಲಕ್ಷಾನು ಲಕ್ಷ ಮಸೀದಿಗಳು ಉಂಟಾಗಲಿದ್ದೂ ಸಹ ಮದೀನದ ಈ ನನ್ನ ಮಸೀದಿಯು ಕೊನೆಯ ಮಸೀದಿಯಾಗಿದೆ ಎಂಬುದಾಗಿ ಪೈಗಂಬರರು ಹೇಳಿರುವುದರ ಔಚಿತ್ಯವೇನೆಂದು ಕೇಳಿದಲ್ಲಿ ಸಾಮಾನ್ಯವಾಗಿ ನೀಡಲ್ಪಡುವ ಉತ್ತರವು ಇದಾಗಿದೆ: "ಮುಹಮ್ಮದ್ ಪೈಗಂಬರ್ (ಸ)ರವರ ನಂತರ ಎಷ್ಟು ಮಸೀದಿಗಳನ್ನು ಮುಸ್ಲಿಮರು ನಿರ್ಮಿಸಿದರೂ ಅವೆಲ್ಲವೂ ಆ ಪುಣ್ಯಾತ್ಮರ ಮಸೀದಿಯ ಪ್ರತಿರೂಪ ಮಾತ್ರವಾಗಿದೆ. ಎಲ್ಲ ಮಸೀದಿಗಳ 'ಖಿಬ್‌ಲ'ವೂ ಆ ಮದೀನದ ಮಸೀದಿಗೆ ಇರುವ 'ಖಿಬ್‌ಲ'ವೇ ಆಗಿದ್ದು ಎಲ್ಲ ಮಸೀದಿಗಳಲ್ಲೂ ಆ ಪುಣ್ಯಾತ್ಮರು ನಿರ್ದೇಶಿಸಿದ ಪ್ರಕಾರ ನಮಾಜು ನಡೆಸಲ್ಪಡುವುದು. ಈಗ ನಿರ್ಮಿಸಲ್ಪಡುವ ಮಸೀದಿಗಳೆಲ್ಲವೂ ಮದೀನದ ಮಸೀದಿಯ 'ಝಿಲ್ಲೀ' (ಪ್ರತಿ ರೂಪ) ಆಗಿರುವುದರಿಂದ ಈ ಮಸೀದಿಗಳನ್ನು ಅದರ ನಂತರದ ಮಸೀದಿಯೆಂದು ಹೇಳಲು ಸಾಧ್ಯವಿಲ್ಲ. ಅದೆಷ್ಟು ಮಸೀದಿಗಳ ನಿರ್ಮಾಣವಾದರೂ ಕೊನೆಯ ಮಸೀದಿಯು ಆ ದಿವ್ಯಾತ್ಮರ ಮಸೀದಿಯೇ ಆಗಿದೆ. ಅದಕ್ಕಿಂತ ಭಿನ್ನವಾದ ಕ್ರಮದ ಒಂದು ಮಸೀದಿಯು ಇನ್ನು ಉಂಟಾಗಲಾರದು ಎಂದು ಮಾತ್ರವೇ ಪೈಗಂಬರರ ವಚನದ ಅರ್ಥವಾಗಿದೆ." ಈ ಉತ್ತರವು ಸರಿಯೂ ಆಗಿದೆ.

ಹಾ! ಮುಹಮ್ಮದ್ ಪೈಗಂಬರರ ನಂತರ ಇನ್ನು ಮುಂದೆ ಯಾರೊಬ್ಬ ಪ್ರವಾದಿಯೂ ಬರಲಾರರೆಂದು ಹೇಳುತ್ತಾ ಪ್ರವಾದಿತ್ವದ ಅನುಗ್ರಹವನ್ನೇ ತಡೆಹಿಡಿಯುವ ಇಂದಿನ ಮುಸ್ಲಿಂ ಬಹುಸಂಖ್ಯಾತರು ಈ ವಿಷಯದಲ್ಲಿ ಸ್ವಲ್ಪವೊಂದು ಆಲೋಚಿಸಿದ್ದರೆ! ಮುಹಮ್ಮದ್ ಪೈಗಂಬರರು ತಾನು ಕೊನೆಯ ಪ್ರವಾದಿಯಾಗಿರುವೆನೆಂದು ಹೇಳಿದುದು ಸಹ ಇದೇ ಅರ್ಥದಲ್ಲೆಂದು ಅವರಿಗೆ ಮನವರಿಕೆಯಾಗುತ್ತಿತ್ತು. ಮುಹಮ್ಮದ್ ಪೈಗಂಬರರ 'ಖಾತಮುನ್ನಬಿಯ್ಯೀನ್' ಆಗಿರುವುದರಿಂದ ಅವರ ಧರ್ಮತತ್ವಶಾಸ್ತ್ರವನ್ನು ರದ್ದುಪಡಿಸಿಕೊಂಡು ಅವರ ಅನುಗಾಮಿಯಲ್ಲದ ಯಾರೊಬ್ಬ ಪ್ರವಾದಿಯೂ ಇನ್ನು ಮುಂದೆ ಬರಲಾರರೆಂದೂ ಇನ್ನು ಬರುವಂತಹ ಪ್ರವಾದಿ ಆ ಮಹಾನ್ ಪ್ರವಾದಿಯ ಪ್ರತಿರೂಪವೂ ಅವರ ಅನುಗಾಮಿಯೂ, ಅವರದೇ ಧರ್ಮವನ್ನು ಪುನರುದ್ಧಾರ ಮಾಡಲು ಬರುವಂತಹವರೂ ಆಗಿದ್ದಾರೆಂದು ಮಾತ್ರವೇ ಆ ವಚನದ ಅರ್ಥವಾಗಿದೆ.

ಶರೀಅತ್ (ಧರ್ಮಶಾಸ್ತ್ರ)ಗಳನ್ನು ತರುವ ಪ್ರವಾದಿಗಳಲ್ಲಿ ಮುಹಮ್ಮದ್ ಪೈಗಂಬರರು ಕೊನೆಯವರಾಗಿರುವರು. ಆದರೆ, ಅವರ ನಂತರ ಅವರದೇ ಧರ್ಮಶಾಸ್ತ್ರವನ್ನು ಜನರಿಗೆ ವಿವರಿಸುತ್ತಾ ಇಸ್ಲಾಂ ಧರ್ಮಕ್ಕೇ ಸೇವೆ ಸಲ್ಲಿಸುವ ಪ್ರವಾದಿ ಆಗಮನವು ಸ್ಥಗಿತಗೊಂಡಿರುವುದಿಲ್ಲ. ಮದೀನದಲ್ಲಿ ಹಜ್ರತ್ ಪೈಗಂಬರರು ನಿರ್ಮಿಸಿದ ಮಸೀದಿಯ ನಂತರ ಅಸಂಖ್ಯಾತ ಮಸೀದಿಗಳು ನಿರ್ಮಿಸಲ್ಪಟ್ಟರೂ ಮದೀನದ ಮಸೀದಿಯು ಕೊನೆಯ ಮಸೀದಿಯೇ ಆಗಿರುವಂತೆ, ಆ ಪೈಗಂಬರರ ನಂತರ ಅವರ ಅನುಸರಣೆಯ ಫಲದಿಂದ ಅವರ ಅನುಯಾಯಿಗಳಲ್ಲಿ ಯಾರಾದರೂ ಇಸ್ಲಾಂ ಧರ್ಮ ಪ್ರಬೋಧಕರಾದ ಪ್ರವಾದಿಯಾಗಿ ನಿಯೋಗಿಸಲ್ಪಟ್ಟರೂ ಸಹ ಮುಹಮ್ಮದ್ ಪೈಗಂಬರರು ಈ ಅರ್ಥದಲ್ಲಿ ಕೊನೆಯ ಪ್ರವಾದಿಯಾಗಿಯೇ ಇರುವರು.

ಶರೀಅತ್ ಗ್ರಂಥಗಳನ್ನು ತರುವ ಪ್ರವಾದಿಗಳ ಪೈಕಿ ಆ ದಿವ್ಯಾತ್ಮರು ಕೊನೆಯ ಪ್ರವಾದಿಯಾಗಿದ್ದಾರೆ. ನವೀನ ಶರೀಅತ್ ಇಲ್ಲದ, ಇಸ್ಲಾಂ ಧರ್ಮವನ್ನೇ ಪುನರುಜ್ಜೀವನಗೊಳಿಸಲು, ಮುಸ್ಲಿಂ ಸಮುದಾಯದ ಅಧಃಪತನಕ್ಕೆ ಒಂದು ಆಶಾಕಿರಣವಾಗಿ ಮುಹಮ್ಮದ್ ಪೈಗಂಬರರ ನಂತರವೂ ಪ್ರವಾದಿ ನಿಯೋಗ ಉಂಟಾಗುವುದು.

ಪ್ರವಾದಿತ್ವ ಪರಿಸಮಾಪ್ತಿ ವಾದಿಗಳು ತದ್ವಿಷಯದಲ್ಲಿ ಉಲ್ಲೇಖಿಸುವ ಇನ್ನೊಂದು ಪ್ರಮಾಣವು "ಲಾ ನಬಿಯ್ಯ ಬಅದೀ" ಎಂಬ ಹದೀಸ್ ವಚನವಾಗಿದೆ. ಪೈಗಂಬರರ ಈ ವಚನಕ್ಕೆ ನನ್ನ ನಂತರ ಪ್ರವಾದಿಯಿಲ್ಲವೆಂಬ ಅರ್ಥವನ್ನು ಹೇಳಿಕೊಂಡು ಹಝ್ರತ್ ಮುಹಮ್ಮದ್ ಪೈಗಂಬರರಿಗೆ ನಂತರ ಯಾವ ತರದ ಪ್ರವಾದಿಯೂ ಬರಲಾರರು ಎಂದು ಇವರು ತರ್ಕಿಸುತ್ತಾರೆ. ಹಝ್ರತ್ ಮುಹಮ್ಮದ್ ಪೈಗಂಬರರ ನಂತರವೂ ಪ್ರವಾದಿತ್ವವು ಜಾರಿಯಲ್ಲಿರುವುದೆಂಬುದು ಪವಿತ್ರ ಖುರ್‌ಆನಿನಿಂದ ಸ್ಪಷ್ಟವಾಗಿ ಸಾಬೀತಾಗುವ ಒಂದು ವಿಚಾರವಾಗಿದೆ. ಮುಹಮ್ಮದ್ ಪೈಗಂಬರರ ವಚನಗಳಿಂದಲೂ ಅವರ ನಂತರ ಒಬ್ಬ ಪ್ರವಾದಿಯ ಬರುವಿಕೆಯು ಸಾಬೀತಾಗುತ್ತದೆ. ಅಲ್ಲದೆ, ಮುಸ್ಲಿಂ ಸಮುದಾಯದ ಅಸಹಾಯಕ ಅವಸ್ಥೆಯೂ ಸಹ ಅಲ್ಲಾಹನ ಕಡೆಯಿಂದಲೇ ಒಬ್ಬ ದೂತನ ಆಗಮನವು ಅನಿವಾರ್ಯವೆಂದು ಕೂಗಿ ಹೇಳುತ್ತದೆ. ಹೀಗಿರುವಾಗ ಇದಕ್ಕೆಲ್ಲಾ ವಿರುದ್ಧವಾಗಿ "ಲಾ ನಬಿಯ್ಯ ಬಅದೀ" ಎಂಬುದಾಗಿ ಹಝ್ರತ್ ಪೈಗಂಬರರು ನುಡಿದಿರುವ ಒಂದು ವಚನವನ್ನು ಮಾತ್ರ ಅವಲಂಬ ಮಾಡಿಕೊಂಡು, ಬೇರೇನನ್ನೂ ಯೋಚಿಸದೆ, ಇನ್ನು ಯಾವ ತರದ ಪ್ರವಾದಿಯೂ ಬರಲಾರರೆಂದು ಹೇಳುವುದು ಯಾವತ್ತೂ ಸರಿಯಲ್ಲ. ತನ್ನ ನಂತರ ಪ್ರವಾದಿಯಾಗಿರುವ ಒಬ್ಬ ಮಸೀಹರ ಆಗಮನವುಂಟಾಗುವುದೆಂದು ಅಲ್ಲಾಹನ ನಾಮದಲ್ಲಿ ಆಣೆಯಿಟ್ಟು ಹೇಳಿರುವ ಪೈಗಂಬರರೇ ತನ್ನ ನಂತರ ಯಾವ ತರದ ಪ್ರವಾದಿಯೂ ಯಾವತ್ತೂ ಬರಲಾರರು ಎಂದು ಹೇಳಿದುದಾಗಿ ನಾವು ತಿಳಿಯುವುದು ಹೇಗೆ? ಆದುದರಿಂದ ಪವಿತ್ರ ಖುರ್‌ಆನಿನ ಪ್ರಬೋಧನೆಗೂ ಪೈಗಂಬರರ ಇತರ ಅಸಂದಿಗ್ಧ ವಚನಗಳಿಗೂ ಅನುಯೋಜ್ಯವಾಗಿ ಮಾತ್ರ ನಾವು ಈ ವಚನವನ್ನು ವ್ಯಾಖ್ಯಾನಿಸಬೇಕಾಗಿದೆ.

ಮೇಲಿನ ಹದೀಸ್ ವಚನದಲ್ಲಿ ಪ್ರಯುಕ್ತವಾಗಿರುವ "ಲಾ" ಮತ್ತು "ಬಅ್‌ದ್" ಎಂಬ ಶಬ್ದಗಳು ಅರಬಿ ಭಾಷೆಯಲ್ಲಿ ಪ್ರಯೋಗಿಸಲ್ಪಡುವ ರೀತಿಯನ್ನು ಗಮನಿಸಿದರೆ, ಮೇಲಿನ ವಚನದಲ್ಲಿ ಪೈಗಂಬರರು ತನ್ನ ನಂತರ ಒಂದು ಪ್ರತ್ಯೇಕ ತರದ ಪ್ರವಾದಿತ್ವವನ್ನು ಮಾತ್ರ ನಿಷೇಧಿಸಿದ್ದಾರೆಂದೂ ಅವರಿಗೆ ವಿರುದ್ಧವಾಗಿ, ನವೀನವಾದೊಂದು ಶರೀಅತ್‌ನೊಂದಿಗೆ ಪ್ರವಾದಿ ಬರಲಾರರೆಂಬುದೇ ಈ ವಚನದ ನಿಜವಾದ ಅರ್ಥವೆಂದೂ ಮನದಟ್ಟಾಗಬಹುದು. ಈ ರೀತಿಯ ಪ್ರಯೋಗಕ್ಕೆ ಪೈಗಂಬರರ ವಚನಗಳಿಂದಲೂ ಇತರ ಅರಬಿ ಸಾಹಿತ್ಯಗಳಿಂದಲೂ ಅನೇಕ ಉದಾಹರಣೆಗಳನ್ನು ನೀಡಬಹುದು. "ಲಾ ಹಿಜ್‌ರತ ಬಅದಲ್ ಫತಹಿ" (ಮಕ್ಕಾ ವಿಜಯದ ನಂತರ ಹಿಜ್ರತ್ ಇಲ್ಲ) ಎಂದೂ "ಲಾ ದೀನ ಲಿಮನ್ ಲಾ ಅಮಾನತಲಹು" (ಅಮಾನತ್ತು ಅಥವಾ ಪ್ರಾಮಾಣಿಕತೆಯಿಲ್ಲದವನಿಗೆ ಧರ್ಮವಿಲ್ಲ) ಎಂದೂ ಮುಹಮ್ಮದ್ ಪೈಗಂಬರರು ನುಡಿದಿರುವರು. ಇದೇ ರೀತಿ "ಲಾ ಸೈಫ ಇಲ್ಲಾ ಝುಲ್‌ಫಿಖಾರ್" (ಜುಲ್‌ಫಿಕಾರ್ ಅಲ್ಲದೆ ಬೇರೆ ಖಡ್ಗವಿಲ್ಲ) "ಲಾ ಫತಾ ಇಲ್ಲಾ ಅಲಿಯ್ಯುನ್" (ಅಲಿ ಅಲ್ಲದೆ ಮತ್ತೊಬ್ಬ ಯುವಕನಿಲ್ಲ) ಎಂಬ ಅರಬಿ ನಾಣ್ಣುಡಿಯೂ ಇದಕ್ಕೆ ಉದಾಹರಣೆಗಳಾಗಿವೆ. ಮೇಲಿನ ವಾಕ್ಯಗಳಲ್ಲೆಲ್ಲಾ "ಲಾ" ಎಂಬ ಶಬ್ದವು ಒಂದು ವಿಶೇಷ ಗುಣವನ್ನು ಮಾತ್ರ ನಿಷೇಧಿಸಲು ಪ್ರಯುಕ್ತವಾಗಿದೆ ಎಂಬುದು ಸ್ಪಷ್ಟ. ಸಂಪೂರ್ಣ ನಿಷೇಧಾತ್ಮಕ ಅರ್ಥದಲ್ಲಿ 'ಲಾ' ಶಬ್ದಗಳು ಇಲ್ಲಿ ಪ್ರಯೋಗಿಸಲ್ಪಟ್ಟಿಲ್ಲ. "ಅಲಿ ಅಲ್ಲದೆ ಬೇರೆ ಯುವಕನಿಲ್ಲ" ಎಂದು ಹೇಳುವುದರ ತಾತ್ಪರ್ಯ, ಹಝ್ರತ್ ಅಲಿ (ರ) ರಂತೆ ಯೌವನದ ಸಕಲ ಸಂಪೂರ್ಣ ಗುಣಗಳೂ ಹೊಂದಿರುವ ಬೇರೊಬ್ಬ ಯುವಕ ಇಲ್ಲವೆಂದಾಗಿದೆಯೇ ಹೊರತು ಪ್ರಪಂಚದಲ್ಲಿ ಅಲಿ ಅಲ್ಲದೆ ಬೇರೆ ಯುವಕರೇ ಇಲ್ಲ ಎಂಬುದಾಗಿ ಅದಕ್ಕೆ ಅರ್ಥವಿರಲು ಸಾಧ್ಯವಿಲ್ಲವಷ್ಟೆ. ಅದೇ ರೀತಿ "ಜುಲ್‌ಫಿಕಾರ್ ಅಲ್ಲದೆ ಬೇರೊಂದು ಖಡ್ಗವಿಲ್ಲ"ವೆಂದು ಹೇಳುವುದರ ಅರ್ಥವೂ ಅವರಂತಹ ಮಹತ್ವದ ಖಡ್ಗ ಬೇರೆ ಇಲ್ಲವೆಂದಲ್ಲದೆ ಈ ಲೋಕದಲ್ಲಿ ಬೇರೆ ಖಡ್ಗವೇ ಇಲ್ಲವೆಂದಾಗಲು ಸಾಧ್ಯವಿಲ್ಲ. ಅದೇ ರೀತಿಯಲ್ಲಿ "ಅಮಾನತ್ ಇಲ್ಲದವನಿಗೆ ಧರ್ಮವಿಲ್ಲ"ವೆಂದು ಹೇಳಿದಾಗ ಅವನಿಗೆ ಜಾತಿಯೇ ಇಲ್ಲವೆಂದು ಅದರ ಅರ್ಥವಲ್ಲ. ಅವನ ಧರ್ಮನಿಷ್ಠೆ ಪೂರ್ಣವಾಗಿಲ್ಲ ಎಂಬುದೇ ಅದರ ತಾತ್ಪರ್ಯ.

ಹೀಗೆಯೇ "ಮಕ್ಕಾ ವಿಜಯದ ನಂತರ ಹಿಜ್ರತ್ ಇಲ್ಲ" ಎಂಬುದಾಗಿ ಪೈಗಂಬರರು ಹೇಳಿದುದರ ತಾತ್ಪರ್ಯವೂ ಅದರ ನಂತರ ಹಿಜ್ರತ್ ಇಲ್ಲವೇ ಇಲ್ಲ ಎಂದಾಗಲು ಸಾಧ್ಯ ವಿಲ್ಲ. ಬದಲಾಗಿ, ಮಕ್ಕಾ ವಿಜಯದ ಮೊದಲಿನಂತಹ ಅಷ್ಟೊಂದು ಮಹತ್ವದ ಹಿಜ್ರತ್ ಇಲ್ಲವೆಂದೋ ಮಕ್ಕಾ ದಿಂದ ಹಿಜ್ರತ್ ಮಾಡಬೇಕಾದ ಅಗತ್ಯವಿಲ್ಲವೆಂದೋ ಮಾ ತ್ರವಾಗಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, "ಲಾ ನಬಿ ಯ್ಯ ಬಅದೀ" ಎಂಬ ವಚನದ 'ಲಾ' ಎಂಬ ಪದವೂ ಸಹ ಎಲ್ಲಾ ವರ್ಗದ ಪ್ರವಾದಿತ್ವವನ್ನು ಉದ್ದೇಶಿಸಿ ಪ್ರಯೋಗಿಸಲ್ಪಟ್ಟಿಲ್ಲ. ಬದಲಾಗಿ, ಕೆಲವು ವಿಶೇಷ ತರದ ಪ್ರವಾದಿತ್ವವನ್ನು ಮಾತ್ರ ಉದ್ದೇಶಿಸಿ ಅಂತಹ ಪ್ರವಾದಿ ಬರಲಾರರು ಎಂದು ಹೇಳಿದುದಾಗಿದೆ. ಹಝ್ರತ್ ಮುಹಮ್ಮದ್ ಪೈಗಂಬರರು ಖಾತಮುನ್ನಬಿಯ್ಯೀನ್ ಆಗಿ ರುವುದರಿಂದಲೂ ಅವರು ತಂದ ಶರೀಅತ್ ಗ್ರಂಥವು ಸರ್ವ ಸಂಪೂರ್ಣವೂ ಆಗಿರುವುದರಿಂದ "ಶರೀಅತಿನೊಂದಿಗೆ ಅವ ತರಿಸುವ ಪ್ರವಾದಿ ನನ್ನ ನಂತರ ಇಲ್ಲ" ಎಂಬುದಾಗಿ ಈ ಹದೀಸ್ ವಚನವನ್ನು ವ್ಯಾಖ್ಯಾನಿಸಬೇಕಾಗಿದೆ.

ಹಝ್ರತ್ ಪೈಗಂಬರರ ಇನ್ನೊಂದು ವಚನ ಸಹ ಈ ತಾತ್ಪರ್ಯವನ್ನು ಬೆಂಬಲಿಸುತ್ತದೆ. ಪೈಗಂಬರರು ಇರಾನ್ ಮತ್ತು ರೋಂ ಸಾಮ್ರಾಜ್ಯಗಳ ಚಕ್ರವರ್ತಿಗಳ ಕುರಿತು ಈ ರೀತಿ ಹೇಳಿದರು :

> ಇದಾ ಹಲಕ ಕಿಸ್‌ರಾ ಫಲಾ ಕಿಸ್‌ರಾ ಬಅದ ಹು, ವಇದಾ ಹಲಕ ಖೈಸರು ಫಲಾಖೈಸರ ಬಅ ದಹು. "ಕಿಸ್ರಾ ಮರಣವಾದರೆ ಆತನ ನಂತರ ಬೇರೆ ಕಿಸ್ರಾ ಇಲ್ಲ; ಖೈಸರ್ ಗತಿಸಿದರೆ ಆತನ ನಂತರ ಬೇರೆ ಖೈಸರ್ ಇರಲಾರರು."
>
> (ಸಹೀಹುಲ್ ಬುಖಾರಿ)

ಯಾವ ಕಿಸ್ರಾ ಮತ್ತು ಖೈಸರ್ ಚಕ್ರವರ್ತಿಗಳ ಕುರಿತು ಮುಹಮ್ಮದ್ ಪೈಗಂಬರರು ಈ ರೀತಿ ಹೇಳಿದ ರೋ ಅವರ ನಂತರವೂ ಅನೇಕ ಕಿಸ್ರಾ ಮತ್ತು ಖೈಸರ್ ರಾಜರುಗಳು ಸಿಂಹಾಸನವೇರಿದ್ದಾರೆ. ಆದುದರಿಂದ ಅವರ ನಂತರ ಕಿಸ್ರಾ ಮತ್ತು ಖೈಸರ್ ಇಲ್ಲವೆಂಬುದಾಗಿ ಪೈಗಂಬ ರರು ಹೇಳಿರುವುದು "ಇಲ್ಲವೇ ಇಲ್ಲ" ಎಂಬ ಅರ್ಥದಲ್ಲಾ ಗಲು ಸಾಧ್ಯವಿಲ್ಲ. ಅಂದಿನ ಚಕ್ರವರ್ತಿಗಳಂತಹ ಪ್ರತಾಪ ಶಾಲಿಗಳೂ ಪರಾಕ್ರಮಿಗಳೂ ಆದ ಕಿಸ್ರಾ ಖೈಸರ್ ಚಕ್ರ ವರ್ತಿಗಳು ನಂತರ ಉಂಟಾಗಲಾರರು ಎಂಬುದೇ ಈ ವಚನಕ್ಕೆ ಅರ್ಥ. ಹದೀಸ್ ಪಂಡಿತರೆಲ್ಲರೂ ಈ ವಚನಕ್ಕೆ ಇದೇ ತಾತ್ಪರ್ಯವನ್ನು ನೀಡಿದ್ದಾರೆ. ಸಹೀಹುಲ್ ಬುಖಾರಿಯ ವ್ಯಾಖ್ಯಾನ ಗ್ರಂಥವಾದ "ಫತಹುಲ್ ಬಾರೀ" ಎಂಬ ಗ್ರಂಥದಲ್ಲಿ ಈ ರೀತಿ ಕಾಣಲ್ಪಡುತ್ತದೆ: "ಅವರ ನಂತರ ಖೈಸರ್ ಇಲ್ಲ ಎಂದು ಹೇಳಿದುದರ ಅರ್ಥವು ಅವ ರಂತೆ ರಾಜ್ಯಾಡಳಿತವಿರುವ ಖೈಸರ್ ಇರಲಾರರು ಎಂಬು ದಾಗಿ ಖತ್ತಾಬಿ ಹೇಳಿರುವರು." "ಅವರೀರ್ವರಿಗೂ ನಂತರ ಇತರ ಕಿಸ್ರಾ ಮತ್ತು ಖೈಸರರು ಸಿಂಹಾಸನಾರೂಢ ರಾಗಿರುವರಲ್ಲ? ಎಂದು ನೀವು ಕೇಳಿದಲ್ಲಿ ಅವರಂತಹ ಪ್ರತಾಪಶಾಲಿಗಳಾದ ಕಿಸ್ರಾ ಖೈಸರರು ನಂತರ ರಾಜ್ಯಭಾರ ಮಾಡಲಿಲ್ಲವೆಂಬುದಾಗಿ ನಾನು ಹೇಳುತ್ತೇನೆ." (ಫತಹುಲ್ ಬಾರಿ). ಈ ಹದೀಸ್ ವಚನದ ಅರ್ಥ ಈ ರೀತಿಯಾಗಿ ರುವಾಗ, "ನನ್ನ ನಂತರ ಪ್ರವಾದಿಯಿಲ್ಲ"ವೆಂದು ಪೈಗಂಬ ರರು ನುಡಿದಿರುವುದರ ಅರ್ಥ ಮುಹಮ್ಮದ್ ಪೈಗಂಬರ ರಂತಹ ಪ್ರವಾದಿಯೂ ಪ್ರತ್ಯೇಕ ಧರ್ಮ ಶಾಸ್ತ್ರವನ್ನು ತರುವ ಪ್ರವಾದಿಯೂ ನಂತರ ಬರಲಾರರು ಎಂದಾಗಿರು ತ್ತದೆ. ಬದಲಾಗಿ, ಪೈಗಂಬರರ ನಂತರ ಇನ್ನು ಯಾವ ತರದ ಪ್ರವಾದಿಯೂ ಬರಲಾರರು ಎಂದು ಅದಕ್ಕೆ ಅರ್ಥ ವಿಲ್ಲ.

ಪ್ರಸ್ತುತ ಹದೀಸ್ ವಚನಕ್ಕೆ ನಾವು ನೀಡುತ್ತಿರುವ ಈ ಅರ್ಥವನ್ನೇ ಇಸ್ಲಾಂ ಧರ್ಮದ ಸುಪ್ರಸಿದ್ಧರಾದ ಅನೇಕ ಪಂಡಿತರು ಮೊದಲು ನೀಡಿದ್ದಾರೆ. ಅದರ ಬಗ್ಗೆ ನಂತರ ವಿವರಿಸುವೆನು.

'ಲಾ ನಬಿಯ್ಯ ಬಅದೀ' ಎಂಬ ಹದೀಸಿನಲ್ಲಿ ಇನ್ನು ನಾವು ನೋಡಬೇಕಾಗಿರುವುದು "ಬಅದ್" ಎಂಬ ಶಬ್ದ ಪ್ರಯೋಗದ ಕುರಿತಾಗಿದೆ. ಅರಬಿ ಭಾಷೆಯಲ್ಲಿ 'ಬಅದ್' ಎಂಬ ಪದವು ವಿವಿಧ ಅರ್ಥಗಳಲ್ಲಿ ಪ್ರಯೋಗಿಸಲ್ಪಡು ತ್ತದೆ. ಅದಕ್ಕೆ 'ನಂತರ' ಎಂಬ ಅರ್ಥವಿರುವಂತೆಯೇ 'ಕೂಡ' ಎಂದೂ 'ವಿರುದ್ಧವಾಗಿ' ಎಂದೂ ಅರ್ಥಗಳಿವೆ. ಅರಬಿ ನಿಘಂಟುಗಳಿಂದಲೂ ಸಾಹಿತ್ಯಗಳಿಂದಲೂ ಇದಕ್ಕೆ ಧಾರಾಳ ನಿದರ್ಶನಗಳನ್ನು ತೆಗೆದು ತೋರಿಸಬಹುದು. ಆದರೆ, ಸ್ಥಳಾಭಾವದಿಂದ ನಾನು ಅವುಗಳನ್ನು ಇಲ್ಲಿ ವಿವರಿ ಸುವುದಿಲ್ಲ. ಪವಿತ್ರ ಖುರ್‌ಆನಿನಲ್ಲಿ ಸಹ 'ಬಅದ್' ಎಂಬ ಪದವು "ವಿರುದ್ಧವಾಗಿ" ಎಂಬ ಅರ್ಥದಲ್ಲಿ ಪ್ರಯೋ ಗಿಸಲ್ಪಟ್ಟಿರುತ್ತದೆ. ಉದಾಹರಣೆ ನೋಡಿರಿ :

ಫ ಬಿ ಅಯ್ಯಿ ಹದೀಸಿನ್ ಬಅ್‌ದಲ್ಲಾಹಿ ವ ಆಯಾತಿಹೀ ಯೂಮಿನೂನ್.

"ಅಲ್ಲಾಹನಿಗೂ ಅವನ ವಚನಗಳಿಗೂ ವಿರುದ್ಧ ವಾದ ಯಾವ ಹದೀಸನ್ನು ಅವರು ಸ್ವೀಕರಿಸು ವರು ? " (45 : 7)

ಈ ವಚನದಲ್ಲಿ ಪ್ರಯುಕ್ತವಾಗಿರುವ ಬಅದ್ ಎಂಬ ಪದಕ್ಕೆ 'ವಿರುದ್ಧವಾಗಿ', 'ಎದುರಾಗಿ' ಎಂದೇ ಅರ್ಥ ಕಲ್ಪಿಸಲು ಸಾಧ್ಯ. ಅಲ್ಲದೆ, ಅಲ್ಲಾಹನ ಮರಣದ ನಂತರ ಎಂದೋ ಅವನ ವಚನಗಳು ಲೋಕದಲ್ಲಿ ಇಲ್ಲವಾದ ನಂತರ ಎಂದೋ ಅರ್ಥ ನೀಡಲು ಸಾಧ್ಯವಿಲ್ಲ.

ಈ ಅರ್ಥ ಪ್ರಕಾರ 'ಲಾ ನಬಿಯ್ಯ ಬಅದೀ' ಎಂಬ ವಚನಕ್ಕೆ "ನನ್ನ ಜೊತೆಯಲ್ಲೂ ನನಗೆ ವಿರುದ್ಧವಾಗಿಯೂ ಪ್ರವಾದಿಯಿಲ್ಲ" ಎಂದು ಅರ್ಥವಾಗುತ್ತದೆ. ಆದುದರಿಂದ, ಹಝ್ರತ್ ಪೈಗಂಬರರ ಅನುಸರಣೆಯಿಂದ ಭಿನ್ನವಾಗಿ ರುವ, ಪೈಗಂಬರರ ವಿರುದ್ಧವಾಗಿ ವಾದಿಸುವ ಪ್ರವಾದಿ ಇನ್ನು ಉಂಟಾಗಲಾರರು ಎಂಬುವು ಮೇಲಿನ ಹದೀಸಿನ ಸರಿಯಾದ ಅರ್ಥವಾಗಿದೆ.

"ಲಾ ನಬಿಯ್ಯ ಬಅದೀ" ಮತ್ತು "ಅನ ಆಖಿರುಲ್ ಅಂಬಿಯಾ" ಎಂಬ ಹದೀಸ್ ವಚನಗಳಿಗೂ ಖಾತಮುನ್ನ ಬಿಯ್ಯೀನ್ ಎಂಬ ಖುರ್‌ಆನ್ ವಚನಕ್ಕೂ ನಾವು ನೀಡು ತ್ತಿರುವ ಇದೇ ತಾತ್ಪರ್ಯವನ್ನು ಇಸ್ಲಾಂ ಧರ್ಮದ ದೊಡ್ಡ ದೊಡ್ಡ ಮತಪಂಡಿತರೂ ಶ್ರೇಷ್ಠ ಧರ್ಮಜ್ಞಾನಿ ಗಳೂ ನೀಡಿರುವುದಾಗಿ ಕಾಣಬಹುದು. ಉದಾಹರಣೆ ಗಾಗಿ ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ವಿವರಿಸುತ್ತೇನೆ :

● "ಮುಹಮ್ಮದ್ ಪೈಗಂಬರರನ್ನು ನೀವು ಖಾತ ಮುಲ್ ಅಂಬಿಯಾ ಎಂದು ಹೇಳಿರಿ, ಆದರೆ ಅವರ ನಂತರ ಪ್ರವಾದಿಗಳಿಲ್ಲವೆಂದು ಹೇಳಬೇಡಿರಿ" ಎಂಬುದಾಗಿ ಮುಹಮ್ಮದ್ ಪೈಗಂಬರರ ಧರ್ಮಪತ್ನಿ ಹಝ್ರತ್ ಆಯಿಶಾ ಸಿದ್ದೀಖ (ರ) ಹೇಳಿದ ಒಂದು ವಚನವನ್ನು ನಾನು ಮೊದಲೊಮ್ಮೆ ಉದಾಹರಿಸಿದ್ದೇನೆ. (ದುರ್‍ರುಲ್ ಮನ್ಸೂರ್, ತಕ್‌ಮಿಲ ಮಜ್‌ಮಉಲ್ ಬಿಹಾರ್). ಈ ಹದೀಸನ್ನು ಉಲ್ಲೇಖಿಸಿದ ನಂತರ ಮಜ್‌ಮಉಲ್ ಬಿಹಾರ್‌ನ ಗ್ರಂಥಕರ್ತರು ಈ ರೀತಿ ಹೇಳುತ್ತಾರೆ :

ವ ಹಾದಾ ಲಾ ಯುನಾಫೀ ಹದೀಸ ಲಾ ನಬಿಯ್ಯ ಬಅದೀ, ಲಿ ಅನ್ನಹು ಅರಾದ ಲಾ ನಬಿಯ್ಯ ಯನ್‌ಸಖು ಶರ್‌ಅಹು.

"ಹಝ್ರತ್ ಆಯಿಶರವರ ಈ ವಚನವು ಲಾ ನಬಿಯ್ಯ ಬಅದೀ ಎಂಬ ನಬಿ ವಚನಕ್ಕೆ ವಿರುದ್ಧ ವಲ್ಲ. ಯಾಕೆಂದರೆ, ಲಾ ನಬಿಯ್ಯ ಬಅದೀ ಎಂಬ ವಾಕ್ಯದಿಂದ ನಬಿವರ್ಯರು ಉದ್ದೇಶಿಸುವ ಅರ್ಥ ತನ್ನ ಶರೀಅತ್ತನ್ನು ರದ್ದುಪಡಿಸುವ ಪ್ರವಾದಿಗಳಿಲ್ಲ ವೆಂದಾಗಿದೆ."

(ತಕ್‌ಮಿಲ ಮಜ್‌ಮಉಲ್ ಬಿಹಾರ್: ಪುಟ-85)

● ಅಲ್ಲಾಮಃ ಮುಲ್ಲಾ ಅಲಿಯ್ಯುಲ್ ಖಾರೀ (ರ) ಈ ರೀತಿ ಹೇಳಿದ್ದಾರೆ :

ಲವ್ ಅಶ ಇಬ್‌ರಾಹೀಮು ವಸಾರ ನಬಿ ಯ್ಯನ್ ವಕದಾ ಲವ್ ಸಾರ ಉಮರು ನಬಿಯ್ಯನ್ ಲಕಾನ ಮಿನ್ ಅತ್‌ಬಾಇಹೀ......ಫಲಾ ಯುನಾ ಖಿಲು ಖೌಲಹು ಖಾತಮುನ್ನಬಿಯ್ಯೀನ ಇದಿಲ್ ಮಅ್‌ನಾ ಅನ್ನಹು ಲಾ ಯಅ್‌ತೀ ಬಅ್‌ದಹು ನಬಿ ಯ್ಯುನ್ ಯನ್‌ಸಖು ಮಿಲ್ಲತಹು ವ ಲವ್ ಯಕುನ್ ಮಿನ್ ಉಮ್ಮತೀಹೀ.

"(ಪೈಗಂಬರರ ಪುತ್ರ) ಇಬ್ರಾಹೀಂ ಬದುಕಿ ಪ್ರವಾದಿಯಾಗಿ ನಿಯೋಗಿಸಲ್ಪಟ್ಟಿದ್ದರೂ ಅಂತೆಯೇ ಉಮರ್ ಪ್ರವಾದಿಯಾಗುತ್ತಿದ್ದರೂ ಅವರೀರ್ವ ರೂ ಪೈಗಂಬರರ ಅನುಗಾಮಿಗಳೇ ಆಗಿರುವುದ ರಿಂದ ಆ ರೀತಿ ಅವರು ಪ್ರವಾದಿಯಾಗಿ ನಿಯುಕ್ತ ರಾಗುವುದು 'ಖಾತಮುನ್ನಬಿಯ್ಯೀನ್' ಎಂಬ ವಚ ನಕ್ಕೆ ವಿರುದ್ಧವಲ್ಲ. ಯಾಕೆಂದರೆ, ಆ ವಚನದ ಅರ್ಥ, ಪೈಗಂಬರರ ಧರ್ಮಶಾಸ್ತ್ರವನ್ನು ರದ್ದು ಪಡಿಸಿಕೊಂಡು ಅವರ ಅನುಗಾಮಿಗಳಲ್ಲದ ಪ್ರವಾ ದಿಗಳು ಬರಲಾರರು ಎಂದಾಗಿದೆ" (ಮೌಸೂಆತ್ ಕಬೀರ್ : ಪುಟ–58, 59)

● ಇಮಾಂ ಹಝ್ರತ್ ಅಬ್ದುಲ್ ವಹ್ಹಾಬ್ ಶಅ ರಾನಿ (ರ) ಈ ರೀತಿ ಹೇಳಿರುವರು : *

"ಎಲ್ಲ ಪ್ರಕಾರದ ಪ್ರವಾದಿತ್ವವೂ ಕೊನೆಗೊಂಡಿ ರುವುದಿಲ್ಲ. ಕೇವಲ ಶರೀಅತ್ತಿನೊಂದಿಗೆ ಬರುವ ಪ್ರವಾದಿತ್ವ ಮಾತ್ರವೇ ಕೊನೆಗೊಂಡಿದೆ. ಪೈಗಂ

---

* ಸ್ಥಳಾಭಾವದಿಂದ ಇಮಾಂರವರ ಗ್ರಂಥದಲ್ಲಿ ಉಲ್ಲೇಖ ವಾದ ಅರಬಿ ಇಬಾರತ್‌ಗಳನ್ನು ಇಲ್ಲಿ ಸೇರಿಸದೆ ಕೇವಲ ಅದರ ಕನ್ನಡ ಭಾಷಾಂತರವನ್ನು ಮಾತ್ರ ಸೇರಿಸುತ್ತೇನೆ. —ಲೇ.

ಬರ್ (ಸ.)ರವರು ನುಡಿದಿರುವ 'ಲಾ ನಬಿಯ್ಯ ಬಅದೀ ವಲಾ ರಸೂಲ' ಎಂಬುದರ ತಾತ್ಪರ್ಯವು ನವೀನ ಧರ್ಮಶಾಸ್ತ್ರದೊಂದಿಗೆ ಬರುವ ಪ್ರವಾದಿ ಯಿಲ್ಲ ಎಂದಾಗಿದೆ." (ಅಲ್ ಯವಾಖೀತ್ ವಲ್ ಜವಾಹಿರ್ ಸಂ–1; ಪುಟ–42).

● ಶೈಖುಲ್ ಅಕ್‌ಬರ್ ಹಝ್ರತ್ ಇಮಾಂ ಮುಹಿಯುದ್ದೀನ್ ಇಬ್ನು ಅರಬೀ (ರ)ರವರ "ಫುತೂಹಾತುಲ್ ಮಕ್ಕಿಯ್ಯ" ಎಂಬ ಗ್ರಂಥದಲ್ಲಿ ಈ ರೀತಿ ಬರೆಯಲ್ಪಟ್ಟಿದೆ : *

"ತನ್ನ ನಂತರ ನಬಿಯಿಲ್ಲವೆಂಬುದಾಗಿ ಪೈಗಂಬರರು ನುಡಿದಿರುವುದರ ತಾತ್ಪರ್ಯವು, ಧರ್ಮಶಾಸ್ತ್ರದೊಂದಿಗೆ ಪ್ರವಾದಿ ಆವತರಣವೂ ಹೊಸ ಧರ್ಮಶಾಸ್ತ್ರವೂ ಉಂಟಾಗಲಾರದೆಂಬುದಾಗಿ ತಿಳಿದುಬರುತ್ತದೆ."

(ಸಂಪುಟ 2; ಪುಟ 417)

"ಪ್ರವಾದಿತ್ವವು ಸಂಪೂರ್ಣವಾಗಿ ಸ್ಥಗಿತಗೊಂಡಿರುವುದಿಲ್ಲ. ಆದ್ದರಿಂದಲೇ ನವೀನ ಶರೀಅತಿನೊಂದಿಗೆ ಇನ್ನು ಪ್ರವಾದಿ ಬರಲಾರರೆಂದು ಮಾತ್ರ ನಾವು ಹೇಳಿರುವುದು. ಲಾ ನಬಿಯ್ಯ ಬಅದೀ ಎಂಬುದರ ಅರ್ಥವೂ ಇದೇ ಆಗಿದೆ."

"ನುಬುವ್ವತ್ ಮತ್ತು ರಿಸಾಲತ್ ಕೊನೆಗೊಂಡಿರುವುದರಿಂದ ತನ್ನ ನಂತರ ನಬಿಯೂ ರಸೂಲೂ ಇಲ್ಲವೆಂಬುದಾಗಿ ಪೈಗಂಬರರು ನುಡಿದಿರುವುದರ ಸಾರಾಂಶವು ತನ್ನ ಧರ್ಮಶಾಸ್ತ್ರಕ್ಕೆ ವಿರುದ್ಧವಾದೊಂದು ಧರ್ಮಶಾಸ್ತ್ರದೊಂದಿಗೆ ಇನ್ನು ಪ್ರವಾದಿ ಬರಲಾರರೆಂದೂ ಇನ್ನು ಮುಂದಕ್ಕೆ ಪ್ರವಾದಿಯಾಗಿ ಯಾರಾದರೂ ಬರುವರೆಂದಾದರೆ, ಅವರು ತನ್ನ ಶರೀಅತ್ ವಿಧಿಗಳಿಗೆ ಒಳಪಟ್ಟವರಾಗಿರುವರು ಎಂದಾಗಿರುತ್ತದೆ."

(ಸಂ. 2; ಪುಟ 73)

"ಕೊನೆಗೊಂಡಿರುವ ಪ್ರವಾದಿತ್ವವು ಶರೀಅತಿನೊಂದಿಗೆ ಅವತರಿಸುವ ಪ್ರವಾದಿತ್ವವಾಗಿದೆ. ಲಾ ನಬಿಯ್ಯ ಬಅದೀ ಎಂಬುದರ ತಾತ್ಪರ್ಯವೂ ಇದೇ. ಲಾ ನಬಿಯ್ಯ ಬಅದೀ ಎಂಬ ನಬಿವಚನಕ್ಕೆ ಪೈಗಂಬರರ ನಂತರ ಯಾವುದೇ ತರದ ಪ್ರವಾದಿ ಬರಲಾರರೆಂದು ಅರ್ಥವಲ್ಲ. ಬದಲಾಗಿ, ನವೀನ ಶರೀಅತಿನೊಂದಿಗೆ ಇನ್ನೂ ಪ್ರವಾದಿಯಾಗಿ ಯಾರೂ ಬರಲಾರರು ಎಂಬುದಾಗಿ ನಾವು ತಿಳಿಯಬೇಕಾಗಿದೆ. ಈ ವಚನವು 'ಕಿಸ್ರಾ ಮರಣ ಹೊಂದಿದರೆ ಆತನ ನಂತರ ಬೇರೆ ಕಿಸ್ರಾ ಇಲ್ಲ; ಖೈಸರ್ ಮರಣವಾದರೆ ನಂತರ ಬೇರೆ ಖೈಸರ್ ಇಲ್ಲ' ಎಂಬ ನಬಿ ವಚನದಂತೆ ಇರುತ್ತದೆ."

(ಸಂ-2; ಪುಟ 73)

● ಹಝ್ರತ್ ಮುಜದ್ದಿದ್ ಅಲ್‌ಫಸಾನಿ (ರ.) ಈ ರೀತಿ ಹೇಳಿರುವರು :

"ಹಝ್ರತ್ ಮುಹಮ್ಮದ್ ಪೈಗಂಬರರ ನಂತರ ಅವರ ಅನುಯಾಯಿಗಳಿಗೆ ಅವರ ಅನುಸರಣೆ ಮತ್ತು ಶಿಷ್ಯತ್ವದ ಫಲವಾಗಿ ಪ್ರವಾದಿತ್ವ ಲಭಿಸುವುದಾದರೆ ಅದು ಪೈಗಂಬರರ 'ಖಾತಮುನ್ನಬಿಯ್ಯೀನ್' ಎಂಬ ಪದವಿಗೆ ವಿರುದ್ಧವಲ್ಲ. ಆದುದರಿಂದ ಈ ವಿಷಯದಲ್ಲಿ ನೀವು ಸಂಶಯಸ್ಥರಾಗದಿರಿ."

(ಮಕ್ತೂಬಾತ್ ಇಮಾಂ ರಬ್ಬಾನಿ,
ಸಂಪುಟ 1; ಪುಟ 432)

● ಅಲ್ಲಾಮಃ ಸಿದ್ದೀಖ್ ಹಸನ್‌ಖಾನ್ ಈ ರೀತಿ ಹೇಳಿರುವರು:

"ಲಾ ನಬಿಯ್ಯ ಬಅದೀ ಎಂಬುದಾಗಿ ಹೇಳಲ್ಪಟ್ಟಿರುವುದು ಸರಿಯೇ. ಆದರೆ, ಜ್ಞಾನಿಗಳ ದೃಷ್ಟಿಯಲ್ಲಿ ಅದರ ಅರ್ಥವು 'ನನ್ನ ನಂತರ ನವೀನ ಶರೀಅತಿನೊಂದಿಗೆ ಪ್ರವಾದಿಯಾಗಿ ಯಾರೂ ಬರಲಾರರೆ'ಂದಾಗಿದೆ. (ಇಖ್‌ತಿರಾಬುಸ್ಸಾಅಃ-ಪುಟ 162)

● ಇತ್ತೀಚೆಗಿನ ಕಾಲದಲ್ಲೇ ಅತಿ ದೊಡ್ಡ ಮತ ಪಂಡಿತರೆಂದು ಖ್ಯಾತಿವೆತ್ತ, ದೇವ್‌ಬಂದ್ ವಿದ್ಯಾಲಯದ ಸ್ಥಾಪಕರಾದ ಮೌಲವಿ ಮುಹಮ್ಮದ್ ಖಾಸಿಂ ಸಾಹೇಬ್ ನಾನೂತವೀ ಈ ರೀತಿ ಹೇಳಿರುವರು :

"ಸಾಮಾನ್ಯ ಜನರು, ರಸೂಲುಲ್ಲಾಹಿ (ಸ) ರವರು ಖಾತಂ ಆಗಿರುವುದರ ತಾತ್ಪರ್ಯವನ್ನು, ಅವರ ಆವಿರ್ಭಾವವು ಉಳಿದೆಲ್ಲ ಪ್ರವಾದಿಗಳ ಕೊನೆಯುಲ್ಲುಂಟಾಯಿತೆಂದೂ ಅವರ ನಂತರ ಯಾರೂ ಪ್ರವಾದಿಯಾಗಿ ಬರಲಾರರೆಂದೂ ಸಾಮಾನ್ಯವಾಗಿ ತಿಳಿಯುತ್ತಾರೆ. ಆದರೆ, ಆದಿಯಲ್ಲಿ ಅಥವಾ ಅಂತ್ಯದಲ್ಲಿ ಬರುವುದಕ್ಕೂ ಶ್ರೇಷ್ಠತೆಗೂ ತಮ್ಮೊಳಗೆ ಏನೂ ಸಂಬಂಧವಿಲ್ಲವೆಂದು ಜ್ಞಾನಿಗಳಾದವರು ತಿಳಿದುಕೊಳ್ಳುವರು. ಹಾಗಿರುವಾಗ, ಪೈಗಂಬರರ

ಶ್ರೇಷ್ಠತೆಯನ್ನು ಪ್ರಕೀರ್ತಿಸಿಕೊಂಡು 'ಖಾತಮುನ್ನಬಿಯ್ಯೀನ್' ಎಂದು ಹೇಳಿರುವುದಕ್ಕೆ ಅಂತ್ಯ ಪ್ರವಾದಿ ಎಂದು ಅರ್ಥವನ್ನು ಯಾಕೆ ಕಲ್ಪಿಸಬೇಕು ? ಅಂತ್ಯ ಪ್ರವಾದಿಯಾಗುವುದರಿಂದ ಪೈಗಂಬರರು ಶ್ರೇಷ್ಠರೆಂದಾಗುವರೇ ? ...... ಮುಹಮ್ಮದ್ ಪೈಗಂಬರರ ನಂತರವೂ ಯಾರಾದರೂ ಪ್ರವಾದಿ ಜನ್ಮ ತಾಳಿದರೆ ಆಗಲೂ ಖಾತಮುನ್ನಬಿಯ್ಯೀನ್ ಎಂಬ ಅವರ ಪದವಿಗೆ ಯಾವ ಕುಂದೂ ಉಂಟಾಗುವುದಿಲ್ಲ." (ತಹ್‌ದೀರುನ್ನಾಸ್: ಪುಟ 3, 28)

● ಅಲ್ಲಾಮಃ ಅಬುಲ್ ಫಝುಲ್ ಈ ರೀತಿ ಹೇಳಿರುವರು :

"ಪ್ರವಾದಿ ಮೂಸಾ (ಅ)ರವರ ಧರ್ಮವನ್ನು ಬಲಪಡಿಸಲು ಬನೀ ಇಸ್ರಾಯೀಲ್ಯರಲ್ಲಿ ಅನೇಕ ಪ್ರವಾದಿಗಳು ನಿಯುಕ್ತರಾದಂತೆ ಹಝ್ರತ್ ಪೈಗಂಬರರ ಪರಿಪೂರ್ಣ ಧರ್ಮವನ್ನು ಬಲಪಡಿಸಲು ಒಬ್ಬರು ನಿಯೋಗಿಸಲ್ಪಡುವುದು, ಪೈಗಂಬರರ ಪರಿಪೂರ್ಣತೆಯ ಬಗ್ಗೆ ಹೇಳಲ್ಪಟ್ಟಿರುವುದಕ್ಕೆ ವಿರುದ್ಧವಲ್ಲ." (ರೂಹುಲ್ ಮಆನೀ ಸಂ-4)

ಮೇಲಿನ ಉಲ್ಲೇಖಗಳಿಂದೆಲ್ಲಾ, ಹಝ್ರತ್ ಮುಹಮ್ಮದ್ ಪೈಗಂಬರ್ (ಸ)ರವರ ಧರ್ಮಶಾಸ್ತ್ರವನ್ನು ಬಲಪಡಿಸುವ ಸಲುವಾಗಿ, ಅವರ ಅನುಗಾಮಿ ಹಾಗೂ ಹೊಸ ಧರ್ಮಶಾಸ್ತ್ರ ಇಲ್ಲದ ಶಿಷ್ಯ ಪ್ರವಾದಿ ಪೈಗಂಬರರ ನಂತರ ಸಹ ಬರಬಹುದೆಂದೂ ಅಂತಹ ಪ್ರವಾದಿಯ ಬರುವಿಕೆಯು 'ಅನ ಆಖಿರುಲ್ ಅಂಬಿಯಾ' ಮತ್ತು 'ಲಾ ನಬಿಯ್ಯ ಬಅದೀ' ಎಂಬ ಪೈಗಂಬರರ ಹೇಳಿಕೆಗಳಿಗೆ ವಿರುದ್ಧವಲ್ಲವೆಂದೂ ತಿಳಿದು ಬರುತ್ತದೆ. ಮುಹಮ್ಮದ್ (ಸ)ರ ನಂತರ ಯಾವ ತರದ ಪ್ರವಾದಿಯೂ ಬರಲಾರರೆಂದು ಪೂರ್ವಿಕ ಮುಸ್ಲಿಂ ಪಂಡಿತರು ನಂಬಿರಲಿಲ್ಲವೆಂದೂ ಇದರಿಂದ ಸ್ಪಷ್ಟವಾಗಿ ತಿಳಿದು ಬರುತ್ತದೆ. ಮಾತ್ರವಲ್ಲ, ಇನ್ನು ಪ್ರವಾದಿ ಬರಲಾರರೆಂದು ಅವರು ಹೇಳಿದುದೆಲ್ಲವೂ ನೂತನವಾದ ಶರೀಅತ್ ಕ್ರಮದೊಂದಿಗೂ ಪೈಗಂಬರರ ಅನುಸರಣೆಯಿಲ್ಲದೆಯೂ ಪ್ರವಾದಿ ಬರಲು ಸಾಧ್ಯವಿಲ್ಲವೆಂಬ ಅರ್ಥದಲ್ಲೆಂದು ಸಹ ಸ್ಪಷ್ಟವಾಗುತ್ತದೆ.

ಈಗಿನ ಕಾಲದಲ್ಲಿ ಸಹ 'ಪ್ರವಾದಿತ್ವದ ಪರಿಸಮಾಪ್ತಿ'ಯನ್ನು ವಾದಿಸುವವರು ತಮ್ಮ ಸ್ವಂತ ನಂಬಿಕೆಯನ್ನೊಮ್ಮೆ ತಿರುಗಿ ನೋಡಿದ್ದರೆ, ಹಝ್ರತ್ ಮುಹಮ್ಮದ್ (ಸ)ರವರ ನಂತರ ಯಾವುದೇ ತರದ ಪ್ರವಾದಿ ಬರಲಾರರೆಂದು ಹೇಳುವುದು ಶುದ್ಧ ತಪ್ಪು ಎಂಬುದಾಗಿ ಅವರಿಗೆ ಮನವರಿಕೆಯಾಗುತ್ತಿತ್ತು. ಬನೀ ಇಸ್ರಾಯೀಲ್ಯರಿಗೆ ಪ್ರವಾದಿಯಾಗಿ ನಿಯೋಗಿಸಲ್ಪಟ್ಟಿದ್ದ ಪ್ರವಾದಿ ಈಸಾ (ಅ)ರವರು ಆಕಾಶದಲ್ಲಿ ಜೀವಂತ ಇರುವರೆಂದೂ ಅಂತ್ಯಕಾಲದಲ್ಲಿ (?) ಅವರು ಈ ಭೂಮಿಗೆ ಪುನಃ ಒಮ್ಮೆ ಬರುವರೆಂದೂ ಸರ್ವಾತ್ಮನಾ ವಿಶ್ವಾಸ ಹೊಂದಿರುವ ಇವರು, ಅದೇ ಉಸಿರಿನಲ್ಲಿ, ಇನ್ನು ಯಾರೂ ಪ್ರವಾದಿಯಿಲ್ಲವೆಂದು ಹೇಳಿ ಪ್ರವಾದಿತ್ವವನ್ನು ಪರಿಸಮಾಪ್ತಿಗೊಳಿಸುವುದು ನಿಜಕ್ಕೂ ಆಶ್ಚರ್ಯಕರ. ಒಟ್ಟಾರೆ ಹೇಳುವುದಿದ್ದರೆ, ಇಸ್ಲಾಂ ಧರ್ಮವನ್ನು ಪುನರುತ್ಥಾನ ಮಾಡಲು ಹಝ್ರತ್ ಮುಹಮ್ಮದ್ ಪೈಗಂಬರ್ (ಸ)ರವರ ಧರ್ಮಶಾಸ್ತ್ರಕ್ಕೆ ವಿಧೇಯರಾದ ಒಬ್ಬ ಪ್ರವಾದಿಯು ಬರುವರೆಂಬುದನ್ನು ಎಲ್ಲ ಮುಸ್ಲಿಮರೂ ಒಕ್ಕೊರಳಿನಿಂದ ಸಮ್ಮತಿಸುತ್ತಾರೆ. ನಿಜವಾಗಿಯೂ ಒಬ್ಬ ಪ್ರವಾದಿಯು ಬರಲಿರುವರೆಂಬ ವಿಚಾರದಲ್ಲಿ ಅಹ್ಮದೀಯರಾದ ನಮಗೂ ಇತರ ಬಹುಸಂಖ್ಯಾತ ಮುಸ್ಲಿಮರಿಗೂ ಮಧ್ಯೆ ಅಭಿಪ್ರಾಯ ವ್ಯತ್ಯಾಸವಿಲ್ಲ. ಆದರೆ, ಬರಲಿರುವ ಆ ವ್ಯಕ್ತಿ ಯಾರೆಂಬ ವಿಷಯದಲ್ಲಿ ನಮಗೂ ಇತರರಿಗೂ ಭಿನ್ನಾಭಿಪ್ರಾಯವಿದೆಯೆಂಬುದು ನಿಜ. ಅಂತೂ ಪೈಗಂಬರರ ಶರೀಅತಿಗೆ ವಿಧೇಯರಾದ ಒಬ್ಬ ಪ್ರವಾದಿ ಬರುವರೆಂಬುದು, ಮುಸ್ಲಿಂ ಸಮುದಾಯವು ಸರ್ವಾನುಮತದಿಂದ ಒಪ್ಪುವ ಒಂದು ವಿಚಾರವಾಗಿದೆ. ಹೀಗಿದ್ದೂ ಸಹ 'ಲಾ ನಬಿಯ್ಯ ಬಅದೀ' ಎಂದೂ 'ಅನ ಆಖಿರುಲ್ ಅಂಬಿಯಾ' ಎಂದೂ ಪೈಗಂಬರರು ಹೇಳಿರುವುದರಿಂದ ಪ್ರವಾದಿತ್ವವೇ ಪರಿಸಮಾಪ್ತಿಗೊಂಡಿದೆಯೆಂದು ಮೊಂಡು ಹಿಡಿಯುವುದು ನಿಜಕ್ಕೂ ವಿಚಿತ್ರವಾದೊಂದು ವಿಪರ್ಯಾಸವೇ ಸರಿ.

ಒಟ್ಟಿನಲ್ಲಿ, ಹಝ್ರತ್ ಮುಹಮ್ಮದ್ ಪೈಗಂಬರರು ಖಾತಮುನ್ನಬಿಯ್ಯೀನ್ ಆಗಿರುವುದರಿಂದಲೂ ಅವರ ಧರ್ಮವು ಪರಿಪೂರ್ಣ ಧರ್ಮವಾಗಿರುವುದರಿಂದಲೂ ಅವರ ನಂತರ ಅವರ ಅನುಗಾಮಿಯಲ್ಲದ ಹಾಗೂ ಹೊಸತೊಂದು ಧರ್ಮವನ್ನು ಸ್ಥಾಪಿಸುವ ಪ್ರವಾದಿಯ ಆಗಮನ ಇರಲಾರದು.

ಆದರೆ, ಇಸ್ಲಾಂ ಧರ್ಮವನ್ನೇ ಪುನರುತ್ಥಾನಗೊಳಿಸುವಂಥ, ಹಝ್ರತ್ ಪೈಗಂಬರರ ಅನುಗಾಮಿ ಪ್ರವಾದಿತ್ವ ಕೊನೆಗೊಂಡಿರುವುದಿಲ್ಲ. ★

# ★ ಅಹ್ಮದಿಯಾ ವಾರ್ತೆಗಳು ★

## ರಬ್ವಾದಲ್ಲಿ 91ನೇ ವಾರ್ಷಿಕ ಮಹಾ ಸಮ್ಮೇಳನ

**ಕಳೆದ ಡಿಸೆಂಬರ್ 26, 27 ಮತ್ತು 28ರಂದು** ಪಾಕಿಸ್ತಾನದ ರಬ್ವಾದಲ್ಲಿ 91ನೇ ಅಹ್ಮದಿಯಾ ವಾರ್ಷಿಕ ಮಹಾ ಸಮ್ಮೇಳನವು ಬಹಳ ವಿಜೃಂಭಣೆಯಿಂದ ಜರಗಿತು. ಅಹ್ಮದಿಯಾ ಚತುರ್ಥ ಖಲೀಫರಾದ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬರು 26ರಂದು ಸಮ್ಮೇಳನವನ್ನು ಉದ್ಘಾಟಿಸಿದರು.

ಮುಸ್ಲಿಂ ಸಮುದಾಯದ ಸಂಕಷ್ಟಗಳು ಪರಿಹಾರಗೊಂಡು ಶಾಂತಿ ಸಮಾಧಾನ ನೆಲೆಗೊಳ್ಳುವಂತಾಗಲಿಕ್ಕೆ ಅಲ್ಲಾಹನೊಡನೆ ಪ್ರಾರ್ಥಿಸಬೇಕೆಂದು ಹಝ್ರತ್ ಖಲೀಫರು ಉಪದೇಶಿಸಿದರು.

35 ಪರದೇಶಗಳಿಂದ ಬಂದ ಪ್ರತಿನಿಧಿಗಳ ಸಹಿತ ಸುಮಾರು ಎರಡೂ ಮುಕ್ಕಾಲು ಲಕ್ಷ ಮಂದಿ ಸಮ್ಮೇಳನದಲ್ಲಿ ಭಾಗವಹಿಸಿದರು.

## ಘಾನದಲ್ಲಿ 6 ಮಂದಿ ಪಾದ್ರಿಗಳು ಇಸ್ಲಾಂ ಧರ್ಮಕ್ಕೆ

ಇತ್ತೀಚೆಗೆ ಘಾನಾದಲ್ಲಿ (ಪ. ಆಫ್ರಿಕ) ಆರು ಮಂದಿ ಕ್ರೈಸ್ತ ಧರ್ಮ ಗುರುಗಳು ಇಸ್ಲಾಂ ಧರ್ಮವನ್ನು ಸ್ವೀಕರಿಸಿದ್ದಾರೆಂದು ಅಹ್ಮದಿಯಾ ದಿನಪತ್ರಿಕೆ "ಅಲ್ ಫಝ್ಲ್" ಜನವರಿ 24ರ ಸಂಚಿಕೆಯಲ್ಲಿ ವರದಿ ಮಾಡಿದೆ. ಈ ಧರ್ಮ ಗುರುಗಳು ತಂತಮ್ಮ ಕ್ಷೇತ್ರಗಳಲ್ಲಿ ಪ್ರಮುಖ ವ್ಯಕ್ತಿಗಳಾಗಿದ್ದರು.

## ಫಿಜಿ, ಫ್ರಾನ್ಸಿಸ್, ರಶ್ಯನ್, ಡಚ್ ಮತ್ತು ಇಟೆಲಿಯನ್ ಭಾಷೆಗಳಲ್ಲಿ ಖುರ್‌ಆನ್ ಅನುವಾದ

ಫಿಜಿ ಭಾಷೆಯಲ್ಲಿ ಅಹ್ಮದಿಯಾ ಜಮಾಅತ್ ಈಗಾಗಲೇ ಖುರ್‌ಆನ್ ಅನುವಾದವನ್ನು ಪೂರ್ಣಗೊಳಿಸಿದೆ. ಮುದ್ರಣ ಕಾರ್ಯದ ಸಿದ್ಧತೆಗಳು ನಡೆಯುತ್ತಿವೆ.

ಫ್ರಾನ್ಸಿಸ್ ಭಾಷೆಯಲ್ಲಿ ಸದ್ಯೋಭವಿಷ್ಯದಲ್ಲೇ ಖುರ್‌ಆನ್ ತರ್ಜುಮೆ ಪ್ರಕಟವಾಗಲಿದೆ.

ರಶ್ಯನ್ ಭಾಷೆಯಲ್ಲಿ ಖುರ್‌ಆನ್ ಅನುವಾದವನ್ನು ಪ್ರಕಟಿಸುವರೆ ಎಲ್ಲಾ ಖರ್ಚನ್ನು ಚೌಧರಿ ಶಾನವಾಝ್ ಸಾಹೇಬರು ವಹಿಸಿಕೊಂಡಿದ್ದಾರೆ.

ಡಚ್ ಭಾಷೆಯಲ್ಲಿ ಖುರ್‌ಆನ್ ಅನುವಾದದ ಮೂರನೆ ಆವೃತ್ತಿ ಪ್ರಕಟಗೊಂಡಿರುತ್ತದೆ.

ಇಟೆಲಿಯನ್ ಭಾಷೆಯಲ್ಲಿ ಖುರ್‌ಆನಿನ ತರ್ಜುಮೆಯನ್ನು ಪ್ರಕಟಿಸುವರೆ, ಸಕಲ ಖರ್ಚನ್ನೂ ನೊಬೆಲ್ ಪ್ರಶಸ್ತಿ ವಿಜೇತ ಭೌತ ವಿಜ್ಞಾನಿ ಡಾ। ಅಬ್ದುಸ್ಸಲಾಂ ವಹಿಸಿಕೊಂಡಿರುವರು.

ಈ ವಿಚಾರವನ್ನೆಲ್ಲ ಅಹ್ಮದಿಯಾ ಜಮಾಅತಿನ ಖಲೀಫರಾದ ಹಝ್ರತ್ ತಾಹಿರ್ ಅಹ್ಮದ್ ಸಾಹೇಬರು ರಬ್ವಾದಲ್ಲಿ ನಡೆದ ವಾರ್ಷಿಕ ಸಮ್ಮೇಳದ ಎರಡನೇ ದಿನ (ಡಿಸೆಂಬರ್ 27) ಬಹಿರಂಗ ಪಡಿಸಿದರು.

## ರಾಷ್ಟ್ರಪತಿಗೆ ಖುರ್‌ಆನ್ ಗುರುಮುಖಿ ಭಾಷಾಂತರದ ಉಡುಗೊರೆ

ಕಳೆದ ಆಗಸ್ಟ್ 22ರಂದು ಅಹ್ಮದಿಯಾ ಜಮಾಅತಿನ ಭಾರತದ ಪ್ರಚರಣ ಮುಖ್ಯಾಧಿಕಾರಿ ಮೌಲಾನ ಬಶೀರ್ ಅಹ್ಮದ್ ದೆಹ್ಲವಿಯವರ ನೇತೃತ್ವದಲ್ಲಿ ಅಹ್ಮದಿಯಾ ಜಮಾಅತಿನ ಪ್ರತಿನಿಧಿಗಳು ದೆಹಲಿಯಲ್ಲಿರುವ ರಾಷ್ಟ್ರಪತಿ ಭವನದಲ್ಲಿ ರಾಷ್ಟ್ರಪತಿ ಗ್ಯಾನಿ ಜೈಲ್ ಸಿಂಘ್‌ರವರನ್ನು ಭೇಟಿಯಾಗಿ ಪವಿತ್ರ ಖುರ್‌ಆನಿನ ಗುರುಮುಖಿ ಭಾಷಾಂತರ (ಸಂಕ್ಷಿಪ್ತ ವ್ಯಾಖ್ಯಾನ ಸಹಿತ)ವನ್ನು ಉಡುಗೊರೆಯಿತ್ತರು. ರಾಷ್ಟ್ರಪತಿಯೊಂದಿಗೆ ಅವರು ಹದಿನೈದು ನಿಮಿಷ ಕಾಲ ಮಾತುಕತೆ ನಡೆಸಿದರು.

## ಭಾರತೀಯ ಧರ್ಮ ಸಮ್ಮೇಳನದಲ್ಲಿ ಅಹ್ಮದಿ ಮಿಶನರಿಯ ಭಾಷಣ

ಕಳೆದ ಫೆಬ್ರವರಿ 8ರಂದು ಬೆಳಗಾಮಿನಲ್ಲಿ ನಡೆದ 8ನೇ ಭಾರತೀಯ ಧರ್ಮ ಸಮ್ಮೇಳನದಲ್ಲಿ ಬೊಂಬಾಯಿಯ ಅಹ್ಮದಿಯಾ ಮಿಶನರಿ ಮೌಲವಿ ಮುಹಮ್ಮದ್ ಹಮೀದ್ ಕೌಸರ್ ಸಾಹೇಬರು ಭಾಷಣ ಮಾಡಿದರು. ತನ್ನ ಭಾಷಣದಲ್ಲಿ ಕೌಸರ್ ಸಾಹೇಬರು ಇಸ್ಲಾಂ ಧರ್ಮದ ತತ್ವಗಳ ಕುರಿತು ಮತ್ತು ಅಹ್ಮದಿಯಾ ಜಮಾಅತಿನ ಬಗ್ಗೆ ವಿವರಿಸಿದರು. ಹಿಂದೂ ಮುಸ್ಲಿಂ ಮೈತ್ರಿಗಾಗಿ ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಸಾಹೇಬರು ನೀಡಿದ ಸಲಹೆಗಳನ್ನೂ ಉಪದೇಶಗಳನ್ನೂ ಅವರು ವಿಶದಪಡಿಸಿದರು.

ಸಮ್ಮೇಳನ ಸ್ಥಳದ ವಠಾರದಲ್ಲಿ ಅಹ್ಮದಿಯಾ ಬುಕ್ ಸ್ಟಾಲನ್ನು ಸಹ ತೆರೆಯಲಾಗಿತ್ತು. ಅನೇಕ ಗಣ್ಯ ವ್ಯಕ್ತಿಗಳಿಗೆ ಅಹ್ಮದಿಯಾ ಸಾಹಿತ್ಯಗಳನ್ನು ಉಡುಗೊರೆಯಾಗಿ ನೀಡಲಾಯಿತು.

## ಮಲಪ್ಪುರಂ ಜಿಲ್ಲಾ ಆಸ್ಪತ್ರೆಯಲ್ಲಿ ಶ್ರಮದಾನ

ಕೇರಳ ರಾಜ್ಯ ಖುದ್ದಾಮುಲ್ ಅಹ್ಮದಿಯಾದ ಆಶ್ರಯದಲ್ಲಿ ಮಂಜೇರಿಯ ಮಲಪ್ಪುರಂ ಜಿಲ್ಲಾ ಸರಕಾರಿ ಆಸ್ಪತ್ರೆಯನ್ನು ಕಳೆದ ಅಕ್ಟೋಬರ್ 30ರಂದು ಶ್ರಮದಾನದಿಂದ ಶುಚೀಕರಿಸಲಾಯಿತು.

ಅಂದು ಬೆಳಗಾತ, ಕೇರಳದ ವಿವಿಧ ಕಡೆಗಳಿಂದ ಆಗಮಿಸಿದ್ದ ಸುಮಾರು ನೂರು ಮಂದಿ ಅಹ್ಮದೀ ಯುವಕರು ಸ್ಟೇಟ್ ಖಾಯಿದೆ ಅಮಲ್ ಕಾರ್ಯದರ್ಶಿ ವಿ. ಟಿ. ಬಶೀರ್ ಅಹ್ಮದ್ ಸಾಹೇಬರ ನೇತೃತ್ವದಲ್ಲಿ ಸಂಪೂರ್ಣ ಶಿಸ್ತು ಪಾಲಿಸಿಕೊಂಡು ಅರ್ಪಣಾ ಮನೋಭಾವದಿಂದ ಶುಚೀಕರಣ ಕಾರ್ಯವನ್ನು ಪೂರ್ಣಗೊಳಿಸಿದರು.

## ಪಯಂಗಾಡಿಯಲ್ಲಿ ಶಿಕ್ಷಣ ಶಿಬಿರ

ಕೇರಳ ಖುದ್ದಾಮುಲ್ ಅಹ್ಮದಿಯಾ ಆಶ್ರಯದಲ್ಲಿ ಡಿಸೆಂಬರ್ 28ರಂದು ಪಯಂಗಾಡಿಯಲ್ಲಿ ಉತ್ತರ ವಲಯ ಶಿಕ್ಷಣ ಶಿಬಿರವನ್ನು ಏರ್ಪಡಿಸಲಾಯಿತು.

ಅಂದು ಬೆಳಿಗ್ಗೆ 10 ಗಂಟೆಗೆ ಮೌಲವಿ ಅಬುಲ್ ವಫಾ ಸಾಹೇಬರು ಶಿಬಿರವನ್ನು ಉದ್ಘಾಟಿಸಿದರು. ಸ್ಟೇಟ್ ಖಾಯಿದ್ ಟಿ. ಕೆ. ಮಹ್ಮೂದ್ ಸಾಹೇಬ್ ಸ್ವಾಗತ ಭಾಷಣ ಮಾಡಿದರು. ಜ। ಅಮೀರ್ ಅಲಿ ಸಾಹೇಬ್, ಜ। ಮುಹಮ್ಮದ್ ಸಾಹೇಬ್ ಎಂ ಎ., ಜ। ಮಹ್ಮೂದ್ ಅಹ್ಮದ್ ಸಾಹೇಬ್ ಎಂ. ಎ , ಬಿ. ಎಂ. ಕೋಯ ಸಾಹೇಬ್ ಮೊದಲಾದವರು ಭಾಷಣ ಮಾಡಿದರು.

ಶಿಬಿರದಲ್ಲಿ ಯುವಜನರಿಗಾಗಿ ಖುರ್ಆನ್ ಪಠನ, ಭಾಷಣ, ಹಾಡು, ಸಂದೇಶ ರವಾನೆ, ಮೆಮರಿ ಟೆಸ್ಟ್, ಕ್ವಿಸ್, ಟೆಸ್ಟ್ ಪೇಪರ್ ಮೊದಲಾದ ಸ್ಪರ್ಧೆಗಳನ್ನು ಸಂಯೋಜಿಸಲಾಗಿತ್ತು.

## ಕೇರಳದಲ್ಲಿ 26ನೇ ವಾರ್ಷಿಕ ಸಮ್ಮೇಳನ

ಕಳೆದ ಜನವರಿ 13, 14 ಮತ್ತು 15ರಂದು ಕಲ್ಲಿಕೋಟೆ ಜಿಲ್ಲೆಯ ಕೊಡಿಯತ್ತೂರಿನಲ್ಲಿ 26ನೇ ಕೇರಳ ಅಹ್ಮದಿಯಾ ವಾರ್ಷಿಕ ಸಮ್ಮೇಳನವು ಜರಗಿತು.

ಸತ್ಯದ ದೀವಟಿಗೆಯನ್ನು ಕೈಯಲ್ಲಿ ಎತ್ತಿಕೊಂಡು ಮಾನವ ಸಾಹೋದರ್ಯ ಹಾಗೂ ಮೈತ್ರಿಗೋಸ್ಕರ ಪರಿಶ್ರಮಿಸುತ್ತಿರುವ ಅಹ್ಮದಿಯಾ ಜಮಾಅತಿನೊಂದಿಗೆ ಸಹಕರಿಸಲು ಮದರಾಸಿನ "ಆಜಾದ್ ನೌಜವಾನ್" ಪತ್ರಿಕೆಯ ಸಂಪಾದಕರಾದ ಮುಹಮ್ಮದ್ ಕರೀಮುಲ್ಲಾ ಸಾಹೇಬ್ ಕರೆ ನೀಡಿದರು. ಅಹ್ಮದಿಯಾ ಸಂಘಟನೆಯು ದೈವ ಸಂದೇಶವನ್ನು ಲೋಕದಾದ್ಯಂತ ಪ್ರಚುರಪಡಿಸುವ ಕಾರ್ಯಕದಲ್ಲಿ ನಿರತವಾಗಿದೆಯೆಂದು ಅವರು ಹೇಳಿದರು. 14ರಂದು ಸಾರ್ವಜನಿಕ ಸಭೆಯನ್ನು ಉದ್ಘಾಟಿಸುತ್ತಾ ಅವರು ಮಾತನಾಡುತ್ತಿದ್ದರು.

ಆಧ್ಯಾತ್ಮಿಕ ನೇತಾರನಾದ ಖಲೀಫರಿಂದ ನಿಯಂತ್ರಿಸಲ್ಪಡುವ ಒಂದು ಸಂಘಟನೆಯಾಗಿದೆ ಅಹ್ಮದಿಯಾ ಜಮಾಅತ್ ಎಂದು ಕೇರಳದ ಚೀಫ್ ಮಿಶನರಿ ಮೌಲವಿ ಮುಹಮ್ಮದ್ ಅಬುಲ್ ವಫಾ ಸಾಹೇಬ್ ಅಧ್ಯಕ್ಷ ಭಾಷಣದಲ್ಲಿ ಹೇಳಿದರು. ಲೋಕದ ನಾನಾ ಕಡೆಯಲ್ಲಿರುವ ಈ ಜಮಾಅತಿಗೆ ಸೇರಿದವರ ಜನಸಂಖ್ಯೆ ಒಂದು ಕೋಟಿಯನ್ನು ಮೀಕ್ಕಿರುತ್ತದೆ. ಜನರನ್ನು ಸತ್ಯ ಮತ್ತು ದೈವಪಥದೆಡೆಗೆ ಕರೆಯುವುದು ಈ ಜಮಾಅತಿನ ಉದ್ದೇಶವೆಂದು ಅವರು ಹೇಳಿದರು.

ಮರುದಿನ ಸಮಾರೋಪ ಸಮ್ಮೇಳನವನ್ನು ಉದ್ಘಾಟಿಸುತ್ತಾ ಉಸ್ಮಾನಿಯಾ ವಿಶ್ವ ವಿದ್ಯಾಲಯದ ಖಗೋಳ

ಶಾಸ್ತ್ರ ವಿಭಾಗದ ಮುಖಂಡ ಡಾ। ಹಾಫಿಝ್ ಸಾಲಿಹ್ ಮುಹಮ್ಮದ್ ಅಲ್ಲಾವುದ್ದೀನ್ ಸಾಹೇಬರು, ವೈಜ್ಞಾನಿಕ ಸಂಶೋಧನೆಯ ಶಿಲ್ಪಿಗಳು ಮುಸ್ಲಿಮರಾಗಿದ್ದರೆಂದೂ ಅವರು ಧರ್ಮ ನಿಷ್ಠೆಯಿಂದ ವಿಮುಖರಾದಾಗ ಅವರಿಗೆ ವೈಜ್ಞಾನಿಕ ರಂಗದಲ್ಲಿ ಅವನತಿ ಉಂಟಾಯಿತೆಂದೂ ಹೇಳಿದರು. ಅಹ್ಮದಿಯಾ ಕೇಂದ್ರೀಯ ಸಂಸ್ಥೆಯ ಸದಸ್ಯ ಸಿದ್ದೀಖ್ ಅಮೀರ್ ಅಲಿ ಸಾಹೇಬರು ಅಧ್ಯಕ್ಷತೆ ವಹಿಸಿದ್ದರು.

ತಮಿಳುನಾಡಿನ ಅಹ್ಮದಿಯಾ ಮಿಶನರಿ ಮೌ। ಮುಹಮ್ಮದ್ ಉಮರ್, ಆಂಧ್ರ ಪ್ರದೇಶದ ಮಿಶನರಿ ಹಮೀದುದ್ದೀನ್ ಶಮ್ಸ್, ಕೊಚ್ಚಿನ್ ಮಿಶನರಿ ಮೌ। ಮುಹಮ್ಮದ್ ಯೂಸುಫ್, ಕಣ್ಣನ್ನೂರಿನ ಎನ್. ಅಬ್ದುರ್ರಹೀಂ (ಮಾತೃ ಭೂಮಿ), ಪಯ್ಯನ್ನೂರಿನ ಕಾಲೇಜ್ ಲೆಕ್ಚರರ್ ಮಹಮೂದ್ ಮೊದಲಾದವರು ವಿವಿಧ ವಿಷಯಗಳ ಸಂಬಂಧಿಸಿ ಭಾಷಣ ಮಾಡಿದರು.

ನಾಸಿರ್ ಅಹ್ಮದ್ ಸಿದ್ದೀಖ್, ಎಂ.ಪಿ. ಉಸ್ಮಾನ್ ಮತ್ತು ಸೈಯ್ಯದ್ ಅಶ್ರಫ್ ಎಂಬೀ ಮೂವರು ಅಹ್ಮದೀ ಯುವಕರು ಮಂಜೇಶ್ವರದಿಂದ ಸೈಕಲ್ ಸವಾರಿ ಮಾಡಿ (ಸುಮಾರು 600 ಕಿ. ಮೀ.) ಈ ಸಮ್ಮೇಳನದಲ್ಲಿ ಭಾಗವಹಿಸಿ ಬಂದಿರುವುದು ಇಲ್ಲಿ ಉಲ್ಲೇಖಾರ್ಹ.

## ನೈಜೀರಿಯಾದ ಜೈಲುಗಳಿಗೆ 148 ಖುರ್‌ಆನ್ ಪ್ರತಿಗಳ ಕೊಡುಗೆ

ನೈಜೀರಿಯಾದ ನಾನಾ ಕಡೆಗಳಲ್ಲಿರುವ ಸೆರೆಮನೆಗಳಲ್ಲಿ ವಿತರಣೆ ಮಾಡಲಿಕ್ಕಾಗಿ ನೈಜೀರಿಯಾದ ಅಹ್ಮದಿಯಾ ಜಮಾಅತಿನ ವತಿಯಿಂದ 148 ಖುರ್‌ಆನ್ ಪ್ರತಿಗಳನ್ನು ನೀಡಲಾಗಿದೆ.

ಧರ್ಮ ಗ್ರಂಥಗಳನ್ನು ಓದಿ ಅವುಗಳಲ್ಲಿರುವ ತತ್ವೋಪದೇಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಲು ಪ್ರಯತ್ನಿಸಿದರೆ ಸೆರೆವಾಸದಲ್ಲಿರುವ ಕೈದಿಗಳು ಉತ್ತಮ ಪ್ರಜೆಗಳಾಗಲಿಕ್ಕೆ ಸಾಧ್ಯವಿದೆಯೆಂದು ಲಾಗೋಸಿನಲ್ಲಿ ನಡೆದ ಕೊಡುಗೆ ಸಮಾರಂಭದಲ್ಲಿ ಜಮಾಅತಿನ ಅಧ್ಯಕ್ಷ ಅಲ್ ಹಾಜ್ ಎ. ಎ. ಅಬಿಯೋಲ ಹೇಳಿದರು.

## ನೈಜೀರಿಯಾದಲ್ಲಿ ಮಸೀದಿಗೆ ಶಂಕುಸ್ಥಾಪನೆ

ನೈಜೀರಿಯಾದ ಓಂಡೋ ಪ್ರಾಂತ್ಯದ ಒಫುಸು ಎಂಬಲ್ಲಿ ಅಹ್ಮದಿಯಾ ಜಮಾಅತಿನ ವತಿಯಿಂದ ನಿರ್ಮಿಸಲಾಗುವ ಹೊಸ ಮಸೀದಿಯೊಂದಕ್ಕೆ ಕಳೆದ ಜನವರಿ 8ರಂದು ಶಿಲಾನ್ಯಾಸ ಮಾಡಲಾಗಿದೆ.

ಸ್ಥಳೀಯ ಅಮೀರ್ ಮೌಲವಿ ಎಂ. ಎ. ಬಿಸ್ಮಿಲ್ ಸಾಹೇಬರು ಭಕ್ತಿಭರಿತ ಪ್ರಾರ್ಥನೆಯೊಂದಿಗೆ ಶಿಲಾಸ್ಥಾಪನಾ ಕರ್ಮವನ್ನು ನೆರವೇರಿಸಿದರು.

## ನೈಜೀರಿಯಾದಲ್ಲಿ ಅಹ್ಮದಿಯೋರ್ವರಿಗೆ ಉನ್ನತ ಹುದ್ದೆ

ನೈಜೀರಿಯಾದ ಬೌಚಿ ಎಂಬಲ್ಲಿನ ನಿಷ್ಠಾವಂತ ಅಹ್ಮದಿಯೋರ್ವರಾದ ಮುಹಮ್ಮದ್ ಮೈಶನು ಅವರನ್ನು ಮಿಲಿಟರಿ ಸರಕಾರದ ಸೆಕ್ರಿಟರಿ ಹಾಗೂ ಬೌಚಿ ಸ್ಟೇಟಿನ ಹೆಡ್ ಓಫ್ ದಿ ಸಿವಿಲ್ ಸರ್ವಿಸ್ ಆಗಿ ನೇಮಕ ಮಾಡಲಾಗಿದೆಯೆಂದು ತಿಳಿದು ಬಂದಿದೆ.


# ಯುಗರಶ್ಮಿಗೆ ಚಂದಾದಾರರಾಗಿರಿ

**ವಾರ್ಷಿಕ ಚಂದಾ: ರೂ. 4-00**

**ಅಂಚೆ ಮೂಲಕ: ರೂ. 5-00**

# ಚುಟುಕು - ಚೂರು

*"ಭಾರತದ ಹಲವೆಡೆಯಲ್ಲಿ ಇಂದಿಗೂ ಅರಬಿಯೇತರ ಭಾಷೆಯಲ್ಲಿ ಜುಮಾ ಪ್ರವಚನ ನಡೆಸುವ ಎಷ್ಟೋ ಮಸೀದಿಗಳಿವೆ............ ಆದರೆ ಕನ್ನಡದಲ್ಲಿ ಮಾತ್ರ ಇದೊಂದು ಹೊಸ ಪ್ರಯೋಗ"

(ಹುಬ್ಬಳ್ಳಿಯ ಸೌವಾಡಿ ಗ್ರಾಮದ ಮಸೀದಿಯೊಂದರಲ್ಲಿ ಕಳೆದ ನವೆಂಬರ್‌ನಲ್ಲಿ ಶುಕ್ರವಾರದ ಖುತ್ಬಾ ಪ್ರವಚನ ಕನ್ನಡ ಭಾಷೆಯಲ್ಲಿ ನಡೆದ ಬಗ್ಗೆ – "ಸನ್ಮಾರ್ಗ", ಫೆಬ್ರುವರಿ 12–18, 1984).

● ಕನ್ನಡ ಭಾಷೆಯಲ್ಲಿ ಜುಮಾ ಪ್ರವಚನದ ಹೊಸ ಪ್ರಯೋಗ ಇದಕ್ಕಿಂತ ಎಷ್ಟೋ ವರ್ಷಗಳ ಮೊದಲೇ, ಅಂದರೆ 1979ನೇ ಇಸವಿ ಆಗಸ್ಟ್ 31ರಂದು ಮಂಗಳೂರಿನಲ್ಲಿ ಅಹ್ಮದಿಯಾ ಜಮಾಅತಿನ ಆಶ್ರಯದಲ್ಲಿ ಏರ್ಪಡಿಸಲಾದ ಜುಮಾ ವೇಳೆಯಲ್ಲಿ ನಡೆದಿದೆ! ಆದರೆ ಪತ್ರಿಕೆಗಳಲ್ಲಿ ಅದಕ್ಕೆ ಪ್ರಚಾರ ಗಿಟ್ಟಿಸಲು ಪ್ರಯತ್ನಿಸಿರಲಿಲ್ಲ; ಅಷ್ಟೆ!

—ಅ. ರಘು.


## ಅಹ್ಮದಿಯಾ ಸಂದೇಶ

**ಮುಸ್ಲಿಮರನ್ನು ಸಂಬೋಧಿಸಿ ಬರೆದ ಒಂದು ಉಪನ್ಯಾಸ**

ಗ್ರಂಥಕರ್ತ: ಹಜ್ರತ್ ಮಿರ್ಜಾ ಬಶೀರುದ್ದೀನ್ ಮಹಮೂದ್ ಅಹ್ಮದ್

ಪುಟ: 60 ಬೆಲೆ: ಒಂದು ರೂಪಾಯಿ ಅಂಚೆ ವೆಚ್ಚ: ಉಚಿತ

ಬರೆಯಿರಿ: Book Secretary, Ahmadiyya Muslim Mission,
10-23-1008 Ansari Road, Bunder, Mangalore-575 001.

## AHMADIYYA ENGLISH LITERATURE

1. INTRODUCTION TO THE STUDY OF HOLY QUR'AN — 16-00
   by Hazrath Mirza Bashiruddin Mahmud Ahmad
2. THE TEACHINGS OF ISLAM — 6-00
   by Hazrath Mirza Ghulam Ahmad
3. JESUS IN INDIA — 2-25
   by Hazrath Mirza Ghulam Ahmad
4. WHERE DID JESUS DIE? — 2-25
   by J. D. Shams, Ex-Imam, London Mosque
5. THE TOMB OF JESUS — 1-00
   by Soofi Mutiurrahman Bengali, M. A.

**Write to: NAZIR DAWAT-O-TABLIGH, Qadian-143 516 (Punjab)**

---

ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರವರ

## ಮೈತ್ರಿ ಸಂದೇಶ

"……ಹಿಂದೂ ಮುಸ್ಲಿಂ ಮೈತ್ರಿಗಾಗಿ ನೀಡಿದ ಈ ಸಂದೇಶ ತುಂಬಾ ಮಹತ್ವದ್ದು, ಹಿಂದೂಗಳೂ ಮುಸ್ಲಿಮರೂ ಸಮಾನವಾಗಿ ಪರಿಶೀಲಿಸಬೇಕಾದ ಗ್ರಂಥವಿದು……" —ಉದಯವಾಣಿ

"…… ಭಿನ್ನ ಧರ್ಮೀಯರಲ್ಲಿ ಮೈತ್ರಿ ಬೆಸೆಯಬಲ್ಲ ಲೇಖನ……" —ನವಭಾರತ

ಪುಟಗಳು: **48** ಬೆಲೆ: **ಒಂದು ರೂಪಾಯಿ** ಅಂಚೆ ವೆಚ್ಚ: **ಉಚಿತ**

ಬರೆಯಿರಿ: Book Secretary, Ahmadiyya Muslim Mission,
10-23-1008, Ansari Road, Bunder, Mangalore-575 001.

---


## ENGLISH FREE LITERATURE

1. The Contribution of Islam to the Solution of World Problems.
2. Islam The Need of the Hour.
3. Islam and Communism.
4. Mohammad the Liberator of Women.
5. The Last Message of the Prince of Peace.

Apply with 15 Paise Stamp for each book to:

Book Secretary,
Ahmadiyya Muslim Mission,
10-23-1008, Ansari Road,
Mangalore-575 001.

Regd. with the Registrar of Newspapers for India Regd No. R. N. 27354/75
**YUGARASHMI Kannada Quarterly, April 1984 / Shahadath 1363**




**English Translation of the**
**HOLY QURAN**
**with Arabic Text & Extensive Index**

**Price: Rs. 20-00**

**Postage Charge Extra**

**Write to:**

**NAZIR DAWAT-O-TABLIGH,**
**Sadr Anjuman Ahmadiyya,**
**Qadian-143 516 [Punjab]**

ಎಲ್ಲಾ ಬಗೆ ಹಂಚುಗಳಿಗೆ ವಿಚಾರಿಸಿರಿ :

# STANDARD TILERY
## KADUR.
CHICKMAGALUR DISTRICT.

★

RAJA MARK Roofing Tiles, Ridges, Wall Tiles, Span Tiles, Floorings, Decorative Tiles, Ceilings Etc. Etc.

All Clay Products Available.

Edited and Published by Muhammad Yusuf on behalf of Jamath Ahmadiyya
at 10-23 1008, Ansari Road, Bunder, Mangalore-575 001.
Printed at Karavali Printers, Azizuddin Road, Bunder, Mangalore-575 001.